ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ



ಸಮುದಾಯದ ಅಕ್ಕ ಎಸ್. ಮಾಲತಿ

ಸಂಪುಟ 13 | ಸಂಚಿಕೆ 15 | ಏಪ್ರಿಲ್ 8–14, 2019 | ಪುಟ 16 | ರೂ.10/-

Web : www.janashakthi.co.in, e-mail : js_weekly@yahoo.com

ವಯ್ನಾಡಿನಲ್ಲಿ ಕಾಂಗ್ರೆಸ್ ತಪ್ಪು ಹೆಜ್ಜೆ





ಮೋದಿ ಸತ್ಯ ಹೇಳುತ್ತಿದ್ದಾರೆ ಕೇಳಿ !



ಕೋಮು ಗಲಭೆಯಲ್ಲಿ 2ನೇ ಸ್ಥಾನ ?



ಬಿಜೆಪಿಗೆ ಏಕಿಲ್ಲ ದಲಿತರ ಓಟು?

ಚುನಾವಣಾ ಆಯೋಗದ ನಿರ್ದೇಶನಗಳನ್ನು ಪಾಲಿಸುವುದಕ್ಕಿಂತ ಮುರಿಯುವುದೇ ಹೆಚ್ಚುತ್ತಿರುವಾಗ.....

ಕಳೆದ ಒಂದು ವಾರದಲ್ಲಿ ಆಳುವ ಪಕ್ಷದ ಮುಖಂಡರಿಂದ, ಮುಖ್ಯವಾಗಿ ಸ್ವತಃ ಪ್ರಧಾನ ಮಂತ್ರಿಗಳಿಂದ ಮಾದರಿ ಚುನಾವಣಾ ಆಚಾರ ಸಂಹಿತೆಯ ಉಲ್ಲಂಘನೆಗಳನ್ನು ಕುರಿತಂತೆ ಸಿಪಿಐ(ಎಂ) ಮುಖಂಡರು ಮೂರು ಪತ್ರಗಳನ್ನು ಚುನಾವಣಾ ಆಯೋಗಕ್ಕೆ ಬರೆಯಬೇಕಾಗಿ ಬಂದಿದೆ. 'ಮಿಶನ್ ಶಕ್ತಿ' ಎಂಬ ಡಿಆರ್‌ಡಿಒ ವಿಜ್ಞಾನಿಗಳ ಸಾಧನೆಯನ್ನು ತಮ್ಮ ಸರಕಾರದ ಸಾಧನೆಯೆಂಬಂತೆ ಪ್ರಧಾನಿಗಳ ಪ್ರಸಾರ ಭಾಷಣ ಮಾದರಿ ಸಂಹಿತೆಯ ಉಲ್ಲಂಘನೆ ಎಂದು ದೂರಿದಾಗ ಅದನ್ನು ಸಂಕುಚಿತವಾಗಿ ನೋಡಿ ಪ್ರಧಾನಿಗಳಿಗೆ ಮತ್ತು ದೂರದರ್ಶನಕ್ಕೆ ಚುನಾವಣಾ ಆಯೋಗ ಕ್ಲೀನ್ ಚಿಟ್ ನೀಡಿತು. ಈ ಸಂಕುಚಿತ ವ್ಯಾಖ್ಯೆಯನ್ನು ಪ್ರಶ್ನಿಸಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿಯವರು ಮಾರ್ಚ್ 30ರಂದು ಮತ್ತೊಂದು ಪತ್ರ ಬರೆದರು. ಈ ಕ್ಲೀನ್ ಚಿಟ್ ಬೆನ್ನಲ್ಲೇ ಮತ್ತಷ್ಟು ಉಲ್ಲಂಘನೆಗಳಾದಾಗ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ನೀಲೋತ್ಪಲ ಬಸು ಚುನಾವಣಾ ಆಯೋಗಕ್ಕೆ ಎಪ್ರಿಲ್ 2ರಂದು ಪತ್ರ ಬರೆದರು. ಬಹುಶಃ ಚುನಾವಣಾ ಆಯೋಗದ ಮೌನದಿಂದ ಮತ್ತಷ್ಟು ಭಂಡತನಗಳು ಮುಂದುವರೆದಿರುವಾಗ ಎಪ್ರಿಲ್ 4 ರಂದು ಮತ್ತೊಂದು ಪತ್ರ ಬರೆದಿದ್ದಾರೆ.



ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್, ಆಂದೋಲನ

.....ಮುಕ್ತ ಮತ್ತು ನ್ಯಾಯಯುತ ಚುನಾವಣೆ ನಡೆಯುತ್ತದೆಂಬ ವಿಶ್ವಾಸಕ್ಕೆ ಮೋಡ ಕವಿಯುತ್ತಿದೆ–ನೀಲೋತ್ಪಲ ಬಸು (ಎಪ್ರಿಲ್ 4ರ ಪತ್ರದಲ್ಲಿ)

"ಒಂದೆಡೆಯಲ್ಲಿ ಬಿಜೆಪಿ, ಇನ್ನೊಂದೆಡೆಯಲ್ಲಿ ಸಾರ್ವಜನಿಕ ಹಣದಿಂದ ಕೆಲಸ ಮಾಡುವ ಸಾರ್ವಜನಿಕ ಪ್ರಸಾರಣ ಸಂಸ್ಥೆ ಮಾದರಿ ಆಚಾರ ಸಂಹಿತೆಯ ಉಲ್ಲಂಘನೆಗಳನ್ನು ಭಂಡತನದಿಂದ ಮಾಡುತ್ತಿರುವುದನ್ನು ಕಂಡು ನಮಗೆ ಆಘಾತವಾಗಿದೆ. ಈ ರೀತಿಯ ಉಲ್ಲಂಘನೆಗಳ ಸರಣಿ ಮುಂದುವರೆಯುತ್ತಿದ್ದು, ಮತ್ತು ಭಾರತದ ಚುನಾವಣಾ ಆಯೋಗದಿಂದ ಇದನ್ನು ತಡೆಯುವ ಯಾವುದೇ ಗಮನಾರ್ಹ ಕ್ರಮದ ಸಾಕ್ಷಿಗಳು ಕಾಣುತ್ತಿಲ್ಲವಾದ್ದರಿಂದ ಒಂದು ಮುಕ್ತ ಮತ್ತು ನ್ಯಾಯಯುತ ಚುನಾವಣೆ ನಡೆಯುವ ಬಗ್ಗೆ ಜನಗಳ ವಿಶ್ವಾಸಕ್ಕೆ ಮೋಡ ಕವಿದಂತಾಗಿದೆ" ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ನೀಲೋತ್ಪಲ್ ಬಸು ಮಾದರಿ ಆಚಾರ ಸಂಹಿತೆಯ ಉಲ್ಲಂಘನೆಗಳ ಬಗ್ಗೆ ಭಾರತದ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತರಿಗೆ ಎಪ್ರಿಲ್ 4ರಂದು ಬರೆದ ಮತ್ತೊಂದು ಪತ್ರದಲ್ಲಿ ಖೇದ ವ್ಯಕ್ತಪಡಿಸಿದ್ದಾರೆ.

ಬಸು ಅವರು ಈ ಪತ್ರದಲ್ಲಿ ಮೂರು ಇಂತಹ ಉಲ್ಲಂಘನೆಗಳನ್ನು ಮುಖ್ಯ ಚುನಾವಣಾ ಆಯುಕ್ತರ ಗಮನಕ್ಕೆ ತರುತ್ತ "ಸಂವಿಧಾನ ಭಾರತದ ಚುನಾವಣಾ ಆಯೋಗಕ್ಕೆ ಒಂದು ಮುಕ್ತ ಮತ್ತು ನ್ಯಾಯಯುತ ಮತದಾನ ನಡೆಸಲು ಒಂದು ಸಮಾನ ನೆಲೆಯಲ್ಲಿ ಅವಕಾಶವನ್ನು ಕಲ್ಪಿಸಬೇಕು ಎಂದು ಆದೇಶವಿತ್ತಿದೆ" ಎಂಬುದನ್ನು ನೆನಪಿಸಿದ್ದಾರೆ, ಇತ್ತೀಚಿನ ಬೆಳವಣಿಗೆಗಳು ಈ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ರಾಜಕೀಯ ಪಕ್ಷಗಳಿಗೆ ಮತ್ತು ಅಭ್ಯರ್ಥಿಗಳಿಗೆ ಸಮಾನ ನೆಲೆಯನ್ನು ತೀವ್ರವಾಗಿ ಕುಂಠಿತಗೊಳಿಸಲಾಗುತ್ತಿದೆ ಎಂಬುದನ್ನು ತೋರಿಸುತ್ತಿವೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ ಎಂದು ಹೇಳಿದ್ದಾರೆ.

ನಮೋ ಟಿವಿ ಎಂಬ ಅಸಹ್ಯಕರ ಬೆಳವಣಿಗೆ:

ನೀಲೋತ್ಪಲ ಬಸುರವರು ತಮ್ಮ ಈ ಎರಡನೇ ಪತ್ರದಲ್ಲಿ ಎತ್ತಿರುವ ಮೊದಲ ಸಂಗತಿಯೆಂದರೆ ಸ್ತಂಭೀಭೂತಗೊಳಿಸುವ 'ನಮೋ ಟಿವಿ ಕುರಿತ ಮಾಹಿತಿ. ಇದು "ಪ್ರಧಾನ ಮಂತ್ರಿ ಮೋದಿಯ ಕೌತುಕಭರಿತ ಚುನಾವಣಾ ಪ್ರಚಾರದ ನೇರ ಪ್ರಸಾರ ಮಾಡುತ್ತದೆ ಮತ್ತು ಇನ್ನೂ ಹಲವು ಮಂತ್ರಮುಗ್ಧಗೊಳಿಸುವ ' ಅಂಶಗಳನ್ನು ಹೊಂದಿರುತ್ತದೆ" ಎಂದು ಅದರ ಜಾಹೀರಾತು ಹೇಳಿದೆ. ಈಗಾಗಲೇ ಒಂದು ವಾರದಿಂದ ಪ್ರಸಾರವಾಗುತ್ತಿರುವ **ಇದು ಪ್ರಸಾರಣ ಲೈಸೆನ್ಸನ್ನು ಹೊಂದಿಲ್ಲ. ಇನ್ನಷ್ಟು ಆಘಾತಕಾರಿ ಸಂಗತಿಯೆಂದರೆ ಲೈಸೆನ್ಸ್ ಬೇಕೆಂದು ಅದು ಅರ್ಜಿಯನ್ನೂ ಹಾಕಿಲ್ಲ! ದೇಶದಲ್ಲಿನ ಪ್ರಸಾರಣ ಕಾನೂನುಗಳ ಪ್ರಕಾರ ಕಡ್ಡಾಯವಾಗಿರುವ ಭದ್ರತಾ ಅನುಮತಿಯನ್ನೂ ಪಡೆದಿಲ್ಲವಾದ್ದರಿಂದ ಇದೊಂದು ಕಾನೂನುಬಾಹಿರ ಉದ್ಯಮವೇ ಆಗಿದೆ.** ರಾಷ್ಟ್ರೀಯ ಭದ್ರತೆಯ ಬಗ್ಗೆ ದಿನಬೆಳಗಾದರೆ ಮಾತಾಡುತ್ತ ಇರುವ ಪಕ್ಷದ ಇಂತಹ ಕೃತ್ಯದಿಂದ ರಾಷ್ಟ್ರೀಯ ಭದ್ರತೆಯ ಮೇಲೆ ಆಗಬಹುದಾದ ಪರಿಣಾಮಗಳು ಮೈನಡುಗಿಸುವಂತವು ಎಂದು ಬಸುರವರು ತಮ್ಮ ಪತ್ರದಲ್ಲಿ ಮುಖ್ಯ ಚುನಾವಣಾ ಆಯುಕ್ತರ ಗಮನಕ್ಕೆ ತಂದಿದ್ದಾರೆ.

ಪ್ರಸಾರಣ ಲೈಸೆನ್ಸಿಗೆ ಅರ್ಜಿಯನ್ನೇ ಹಾಕಿಲ್ಲವಾದ್ದರಿಂದ ನಮೋಟಿವಿಯ ಒಡೆತನದ ಬಗ್ಗೆ ಏನೂ ತಿಳಿದಿಲ್ಲ. ಈ ವಾಹಿನಿ ತನ್ನ ಪ್ರಸಾರಣಕ್ಕೆ ಬಳಸುವ ಅಪ್ ಲಿಂಕಿಂಗ್ ಮತ್ತು ಡೌನ್ ಲಿಂಕಿಂಗ್ ವ್ಯವಸ್ಥೆ ರಹಸ್ಯಮಯವಾಗಿದೆ. ಮೋದಿ ಸರಕಾರದ ಮಾಹಿತಿ ಮತ್ತು ಪ್ರಸಾರ ಇಲಾಖೆ ಮಾರ್ಚ್ 31 ರ ವೇಳೆಗೆ ಪರವಾನಿಗೆ ನೀಡಿರುವ ವಾಹಿನಿಗಳ ಪಟ್ಟಿಯಲ್ಲಿ ಇದರ ಹೆಸರು ಇಲ್ಲ. ಆದರೂ ಈ ವಾಹಿನಿ ಪ್ರಸಾರಗೊಳ್ಳುತ್ತಿದೆ, ಮತ್ತು ಎಲ್ಲ ಪ್ರಮುಖ ಡಿಟಿಹೆಚ್‌ಗಳಲ್ಲಿ ಇದು ಲಭ್ಯ ಇದೆ!

ಇದು ಒಂದು ಗಂಭೀರ ಭದ್ರತಾ ಅಪಾಯ ಮಾತ್ರವೇ ಅಲ್ಲದೆ, ಕೇಬಲ್ ಟೆಲಿವಿಶನ್ ಜಾಲಗಳನ್ನು ಕುರಿತ ಈಗಿರುವ ಕಾನೂನು ಮತ್ತು ನಿಯಮಗಳ ಹಾಗೂ ಜನತಾ ಪ್ರಾತಿನಿಧ್ಯ ಕಾನೂನು, 1951 ರ ಹಲವು ಸೆಕ್ಷನ್ ಗಳ ಕಣ್ಣಿಗೆ ರಾಚುವ ಉಲ್ಲಂಘನೆಗಳಾಗಿವೆ. ಭಾರತದ ಚುನಾವಣಾ ಆಯೋಗ ಇಂತಹ ಒಂದು ಅಸಹ್ಯಕರ ಬೆಳವಣಿಗೆಯ ವಿರುದ್ಧ ಕಟ್ಟುನಿಟ್ಟಾದ

ಪುಟ 7 ನೋಡಿ

ಬಿಜೆಪಿ ಮುಖಂಡರಿಂದ ಮತ್ತೆ–ಮತ್ತೆ ಚುನಾವಣಾ ಅಚಾರ ಸಂಹಿತೆಯ ಭಂಡ ಉಲ್ಲಂಘನೆಗಳು–ಚುನಾವಣಾ ಆಯೋಗಕ್ಕೆ ನೀಲೋತ್ಪಲ ಬಸು ಪತ್ರ (ಎಪ್ರಿಲ್ 2)

ಪ್ರಧಾನ ಮಂತ್ರಿಗಳೂ ಸೇರಿದಂತೆ ಆಳುವ ಪಕ್ಷ ಬಿಜೆಪಿಯ ಮುಖಂಡರು ಚುನಾವಣೆಯ ಮಾದರಿ ಆಚಾರ ಸಂಹಿತೆಯನ್ನು ಭಂಡತನದಿಂದ ಉಲ್ಲಂಘಿಸುತ್ತಿರುವುದನ್ನು ಚುನಾವಣಾ ಆಯೋಗದ ಗಮನಕ್ಕೆ ತರಲೇಬೇಕಾಗಿ ಬಂದಿದೆ, ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯ ನೀಲೋತ್ಪಲ ಬಸು ಎಪ್ರಿಲ್ 2ರಂದು ಮುಖ್ಯ ಚುನಾವಣಾ ಆಯುಕ್ತ ಅರೋರಾ ಅವರಿಗೆ ಪತ್ರವನ್ನು ಬರೆದಿದ್ದರು.

ಈ ಪತ್ರದಲ್ಲಿ ಬಸು ಅವರು ಈ ಮೊದಲು ಪಕ್ಷದ ಪ್ರಧಾನ ಕಾರ್ಯದರ್ಶಿಗಳು ಒಂದು ಕೆಳಮಟ್ಟದಲ್ಲಿ ಪ್ರದಕ್ಷಿಣೆ ಹಾಕುತ್ತಿದ್ದ ನಿಷ್ಪ್ರಯೋಜಕಗೊಂಡ ಉಪಗ್ರಹವನ್ನು ಕ್ಷಿಪಣಿಯಿಂದ ನಾಶಗೊಳಿಸಿದ್ದು ನಮ್ಮ ತಂತ್ರಜ್ಞಾನ ಸಾಮರ್ಥ್ಯದ ಪ್ರದರ್ಶನ ಎಂದು ಪ್ರಧಾನ ಮಂತ್ರಿಗಳು ಸಾರ್ವಜನಿಕ ಪ್ರಸಾರ ಮಾಡಿದ್ದರ ಅನೌಚಿತ್ಯವನ್ನು ಆಯೋಗದ ಗಮನಕ್ಕೆ ತಂದುದನ್ನು ನೆನಪಿಸಿದ್ದಾರೆ.

"ಒಬ್ಬ ಬಿಜೆಪಿ ಅಭ್ಯರ್ಥಿಯೂ ಅಗಿರುವ ಪ್ರಧಾನ ಮಂತ್ರಿಗಳು ಚುನಾವಣಾ ಪ್ರಯೋಜನಕ್ಕಾಗಿ ಪ್ರಭಾವ ಬೀರಲು ತನ್ನ ಹುದ್ದೆ ಮತ್ತು ವಿಶೇಷ ಅವಕಾಶಗಳನ್ನು ಬಳಸಿಕೊಳ್ಳಬಹುದೇ ಎಂಬುದು ಇಲ್ಲಿ ಇರುವ ಮೂಲಭೂತ ಪ್ರಶ್ನೆ, ಆದರೆ ಆಯೋಗ ಅದನ್ನು ದೂರದರ್ಶನದ ಪಾತ್ರಕ್ಕೆ ಸೀಮಿತಗೊಳಿಸುವ ದಾರಿ ಆಯ್ದುಕೊಂಡಿತು, ಮತ್ತು ಅದರಿಂದೇನೂ ತಪ್ಪು ಸಂಭವಿಸಿಲ್ಲ ಎಂದು ಹೇಳಿತು. ಈಗ ದೂರದರ್ಶನ ನ್ಯೂಸ್ ವೀಡಿಯೋ ಕಾನ್ಫರೆನ್ಸ್ ಮೂಲಕ # ಮೈಂಭೀ ಚೌಕೀದಾರ್ ಕಾರ್ಯಕ್ರಮದಲ್ಲಿ ಪ್ರಧಾನ ಮಂತ್ರಿಗಳ ಭಾಷಣವನ್ನು ವೀಕ್ಷಿಸಬೇಕು ಎಂದು ಟ್ವೀಟ್ ಮಾಡಿರುವತ್ತ ನಮ್ಮ ಗಮನವನ್ನು ಸೆಳೆಯಲಾಗಿದೆ" ಎನ್ನುತ್ತ ನೀಲೋತ್ಪಲ ಬಸು ಈ ಟ್ವೀಟ್‌ನ ಮುದ್ರಿತ ಪ್ರತಿಯನ್ನು ತಮ್ಮ ಪತ್ರದಲ್ಲಿ ಲಗತ್ತಿಸಿ ಆಯೋಗದ ಮುಂದಿಟ್ಟಿದ್ದಾರೆ.

ಈ ಮೊದಲು ಬಾಲಕೋಟ್ ನಂತರದ ಸನ್ನಿವೇಶವನ್ನು ಉಪಯೋಗಿಸಿಕೊಳ್ಳುವ ಮತ್ತು ಸಶಸ್ತ್ರ ಪಡೆಗಳ ಸಾಧನೆಗಳನ್ನು ಚುನಾವಣಾ ಉದ್ದೇಶಗಳಿಗೆ ಬಳಸಿಕೊಳ್ಳುವ ಆಳುವ ಪಕ್ಷದ ನಾಚಿಕೆಗೆಟ್ಟ ಪ್ರಯತ್ನಗಳನ್ನು ಕೂಡ ಆಯೋಗದ ಗಮನಕ್ಕೆ ತರಲಾಗಿತ್ತು. ಆಗ ಅದನ್ನು ಗಮನಕ್ಕೆ ತಗೊಂಡ ಆಯೋಗ ಚುನಾವಣಾ ಪ್ರಚಾರದಲ್ಲಿ ಸಶಸ್ತ್ರ ಪಡೆಗಳ ಇಂತಹ ಬಳಕೆಯನ್ನು ದೃಢವಾಗಿ ನಿಷೇಧಿಸಿ ಒಂದು ಆದೇಶವನ್ನು ಹೊರಡಿಸಿತ್ತು. ಇದನ್ನೂ ತಮ್ಮ ಪತ್ರದಲ್ಲಿ ನೀಲೋತ್ಪಲ ಬಸು ಆಯೋಗಕ್ಕೆ ನೆನಪಿಸುತ್ತ, ಈಗ ಬಿಜೆಪಿ ಮುಖಂಡ ಮತ್ತು ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅದರ ಸ್ಪಷ್ಟ ಉಲ್ಲಂಘನೆ ಮಾಡಿದ್ದಾರೆ ಎಂಬ ಸಂಗತಿಯತ್ತ ಆಯೋಗದ ಗಮನ ಸೆಳೆದಿದ್ದಾರೆ. ಈತ ಘಾಜಿಯಾಬಾದ್‌ನಲ್ಲಿ ಎಪ್ರಿಲ್ 1ರಂದು ಒಂದು ಸಭೆಯಲ್ಲಿ ಭಾರತೀಯ ಸೇನೆಯನ್ನು 'ಮೋದೀಜೀ ಕೀ ಸೇನಾ" ಎಂದು ಹೇಳಿದ್ದಾರೆ.

ಅದೇ ರೀತಿ, ಸ್ವತಃ ಪ್ರಧಾನ ಮಂತ್ರಿ ನರೇಂದ್ರ ಮೋದಿ, ವಾರ್ಧಾದಲ್ಲಿ ಒಂದು ಚುನಾವಣಾ ಸಭೆಯಲ್ಲಿ, ಎನ್.ಐ.ಎ. ಕೋರ್ಟಿನ ಫಲಿತಾಂಶವನ್ನು ಉದ್ಧರಿಸುತ್ತ, ಅದರಲ್ಲಿನ ಆರೋಪಿಯನ್ನು ಸಮಸ್ತ ಹಿಂದೂ ಸಮುದಾಯದೊಂದಿಗೆ ಸಮೀಕರಿಸಿ ಕೋಮುವಾದಿ ಭಾವನೆಗಳನ್ನು ಬಡಿದೆಬ್ಬಿಸುವ ನಗ್ನ ಪ್ರಯತ್ನ ನಡೆಸಿದ್ದಾರೆ.

"ನಮ್ಮ ಅಭಿಪ್ರಾಯದಲ್ಲಿ, ಇವು ಮಾದರಿ ಆಚಾರ ಸಂಹಿತೆಯ ನಗ್ನ ಉಲ್ಲಂಘನೆಗಳು, ಮತ್ತು ಚುನಾವಣೆಗಳ ಸಂದರ್ಭದಲ್ಲಿ ಸಾಮಾಜಿಕ ವಾತಾವರಣವನ್ನು ಕಲುಷಿತಗೊಳಿಸುವಂತವುಗಳು" ಎನ್ನುತ್ತ ನೀಲೋತ್ಪಲ ಬಸುರವರು **ಮಾದರಿ ಆಚಾರ ಸಂಹಿತೆಯ ಪಾವಿತ್ರ್ಯವನ್ನು ಕಾಯ್ದುಕೊಳ್ಳಲು ಮತ್ತು ಒಂದು ಮುಕ್ತ ಹಾಗೂ ನ್ಯಾಯಯುತ ಚುನಾವಣೆ ನಡೆಸಲು ತಕ್ಷಣವೇ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಮುಖ್ಯ ಚುನಾವಣಾ ಆಯುಕ್ತರನ್ನು ತಮ್ಮ ಪತ್ರದಲ್ಲಿ ಆಗ್ರಹಿಸಿದ್ದಾರೆ.**

'ನೆಲ,ವಾಯು, ಅಂತರಿಕ್ಷದ ಚೌಕೀದಾರ' ಎಂಬುದರ ಅರ್ಥವಾದರೂ ಏನು?–ಯೆಚುರಿ

ಪ್ರಧಾನಿಗಳ ಮಿಶನ್ ಶಕ್ತಿ' ಪ್ರಸಾರ ಭಾಷಣ–ಚುನಾವಣಾ ಆಯೋಗದ ಸಂಕುಚಿತ ವ್ಯಾಖ್ಯಾನ

'ಮಿಶನ್ ಶಕ್ತಿ' ಯಶಸ್ಸನ್ನು ಡಿ.ಆರ್.ಡಿ.ಒ. ಬದಲು ಪ್ರಧಾನ ಮಂತ್ರಿ ಗಳೇ ಪ್ರಕಟಿಸಿರುವುದು ಮಾದರಿ ನೀತಿ ಸಂಹಿತೆಯ ಭಾಗ 7ರ ಪ್ಯಾರಾ 4 ರಲ್ಲಿ ಹೇಳಿರುವ ಅಧಿಕೃತ ಸಾಮೂಹಿಕ ಮಾಧ್ಯಮದ ದುರುಪಯೋಗವಾಗುವುದಿಲ್ಲ ಎಂದು ಚುನಾವಣಾ ಆಯೋಗ ಹೇಳಿದೆ.

"ಇದು ನಾನು ಕೊಟ್ಟ ದೂರಿನ ಒಂದು ಸಂಕುಚಿತ ವ್ಯಾಖ್ಯಾನ" ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಚುನಾವಣಾ ಆಯೋಗಕ್ಕೆ ಬರೆದಿರುವ ಇನ್ನೊಂದು ಪತ್ರದಲ್ಲಿ ತಿಳಿಸಿದ್ದಾರೆ.

ಆಯೋಗ ಕೇವಲ "ಅಧಿಕೃತ ಮಾಧ್ಯಮಗಳ ದುರುಪಯೋಗ"ಕ್ಕೆ ಇದನ್ನು ಸೀಮಿತ ಗೊಳಿಸಿರುವುದರಿಂದ, ಅದು ಇತರ ರಾಷ್ಟ್ರೀಯ ಪಕ್ಷಗಳ ಮುಖಂಡರ ಭಾಷಣಗಳು/ಹೇಳಿಕೆಗಳಿಗೂ ಇದೇ ರೀತಿಯ ಅವಕಾಶವನ್ನು ನೀಡಬೇಕು ಎಂದು ಅಧಿಕೃತ ಮಾಧ್ಯಮಗಳಿಗೆ ನಿರ್ದೇಶನ ನೀಡಬೇಕು ಎಂದು ಯೆಚೂರಿ ಕೋರಿದ್ದಾರೆ.

ಆದರೆ ಇಲ್ಲಿರುವ ಪ್ರಶ್ನೆಯೆಂದರೆ, ಪ್ರಧಾನ ಮಂತ್ರಿಗಳು ಮುಂಬರುವ ಚುನಾವಣೆಯಲ್ಲಿ ಒಬ್ಬ ಅಭ್ಯರ್ಥಿಯಾಗಿ ನಮ್ಮ ವಿಜ್ಞಾನಿಗಳ ಸಾಧನೆಯನ್ನು ತಿಳಿಸಲು ಅಧಿಕೃತ ಮಾಧ್ಯಮಗಳನ್ನು ಬಳಸಿರುವುದು. ಇದು ಚುನಾವಣಾ ಉದ್ದೇಶಗಳಿಗಾಗಿ ತನ್ನ ಹುದ್ದೆಯ ದುರುಪಯೋಗವೇ ಆಗುತ್ತದೆ ಎಂದು ಯೆಚೂರಿಯವರು ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಈ ಭಾಷಣದ ನಂತರ ಪ್ರಧಾನಿಗಳು ತಾನು ನೆಲ ಮತ್ತು ವಾಯುವಿನಲ್ಲಿ ಮಾತ್ರವಲ್ಲ, ಅಂತರಿಕ್ಷದಲ್ಲೂ ಒಬ್ಬ ಚೌಕೀದಾರ ಎಂದು ಹೇಳಿಕೊಂಡಿರುವುದು ದಾಖಲಾಗಿದೆ. ಹಿಂದಿನ ಸರ್ಕಾರ ತೋರದ ಧೈರ್ಯವನ್ನು ಈಗಿನ ಸರ್ಕಾರ ತೋರಿದೆ ಎಂದು ಪ್ರಧಾನ ಮಂತ್ರಿಗಳು ಮತ್ತು ಇತರ ಬಿಜೆಪಿ ಮುಖಂಡರುಗಳು ಪ್ರಚಾರ ಮಾಡುತ್ತಿದ್ದಾರೆ. ಇದು ಚುನಾವಣಾ ಪ್ರಯೋಜನಕ್ಕಾಗಿ ಪ್ರಧಾನಮಂತ್ರಿ ಹುದ್ದೆಯ ದುರುಪಯೋಗವಲ್ಲದೆ ಮತ್ತೇನು ಎಂದು ಯೆಚೂರಿ ಚುನಾವಣಾ ಆಯೋಗಕ್ಕೆ ಬರೆದಿರುವ ಪತ್ರದಲ್ಲಿ ಪ್ರಶ್ನಿಸಿದ್ದಾರೆ.

ಡಿ.ಆರ್.ಡಿ.ಒ. ದ ಹಿರಿಯ ಅಧಿಕಾರಿಗಳ ಬದಲು ಪ್ರಧಾನ ಮಂತ್ರಿ ಗಳು ತಾನೇ ಪ್ರಕಟಿಸಿರುವುದು ಮಾದರಿ ನೀತಿ ಸಂಹಿತೆಯ ಸ್ಪಷ್ಟ ಉಲ್ಲಂಘನೆಯಾಗಿದೆ. ಈ ಅಂಶವನ್ನು ಚುನಾವಣಾ ಆಯೋಗ ಗಮನಕ್ಕೆ ತಗೊಳ್ಳಬೇಕು. **ಚುನಾವಣಾ ಆಯೋಗ ಸಂವಿಧಾನದ ಕಲಮು 324 ಆದೇಶಿಸಿರುವಂತೆ ಒಂದು ಮುಕ್ತ ಮತ್ತು ನ್ಯಾಯಯುತ ಚುನಾವಣೆಗಳನ್ನು ನಡೆಸಲು, ಎಲ್ಲ ಅಭ್ಯರ್ಥಿಗಳಿಗೆ ಸಮಾನ ನೆಲೆಯಲ್ಲಿ ಅವಕಾಶಗಳನ್ನು ಕಲ್ಪಿಸಲು ಬದ್ಧವಾಗಿರಬೇಕಾಗಿದೆ**

"ಭಾರತೀಯ ಪ್ರಜಾಪ್ರಭುತ್ವದ ಆರೋಗ್ಯದ ದೃಷ್ಟಿಯಿಂದ ಭಾರತದ ಚುನಾವಣಾ ಆಯೋಗ ನಾನು ಎತ್ತುತ್ತಿರುವ ಈ ಅಂಶವನ್ನು ಗಂಭೀರವಾಗಿ ಪರಿಗಣಿಸುವುದಾಗಿ ಭಾವಿಸುತ್ತೇನೆ" ಎಂದು ಯೆಚೂರಿ ತನ್ನ ಪತ್ರದಲ್ಲಿ ಹೇಳಿದ್ದಾರೆ.

ಶರಸ್ಪಂದಕ್ಕಾಯ

ಕೋಮು ಗಲಭೆಯಲ್ಲಿ 2ನೇ ಸ್ಥಾನ ಕಳಚಿಕೊಳ್ಳಲೇ ಬೇಕು

ಈಗ ಒಂದು ವರ್ಷದ ಹಿಂದೆ ಕೇಂದ್ರ ಸರ್ಕಾರ ಲೋಕಸಭೆಗೆ ನೀಡಿರುವ ಲಿಖಿತ ಮಾಹಿತಿ ಪ್ರಕಾರ 2017 ರಲ್ಲಿ, ದೇಶದಲ್ಲಿ ಕೋಮು ಹಿಂಸಾಚಾರ ಪ್ರಕರಣಗಳು ಶೇ. 15 ರಷ್ಟು ಹೆಚ್ಚಾಗಿವೆ.

ಅತಿ ಹೆಚ್ಚು ಕೋಮು ಗಲಭೆಗಳು ನಡೆದ ರಾಜ್ಯಗಳ ಪಟ್ಟಿಯಲ್ಲಿ ಉತ್ತರ ಪ್ರದೇಶ ಮೊದಲ ಸ್ಥಾನದಲ್ಲಿದೆ. ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ರಾಜಸ್ಥಾನ ಮೂರನೇ ಸ್ಥಾನದಲ್ಲಿದೆ. ಬಿಹಾರ, ಮಧ್ಯಪ್ರದೇಶ, ಪಶ್ಚಿಮ ಬಂಗಾಳ ಮತ್ತು ಗುಜರಾತ್ ನಂತರದ ಸ್ಥಾನಗಳನ್ನು ಪಡೆದಿವೆ.

ದೇಶ ಮಟ್ಟದ ಅಂಕಿ ಅಂಶಗಳು			
ವರ್ಷ	ಕೋಮು ಗಲಭೆಗಳು	ಮೃತಪಟ್ಟವರು	ಗಾಯಗೊಂಡವರು
2015	751	97	2264
2016	703	86	2321
2017	822	111	2384

ಮೋದಿಯವರು ಅಧಿಕಾರಕ್ಕೆ ಬಂದ ನಂತರ ದೇಶದಲ್ಲಿ ಕೋಮು ಗಲಭೆಗಳು ಹೆಚ್ಚಾಗಿವೆ. ಕೋಮುವಾದಿ ಶಕ್ತಿಗಳಿಗೆ ಹೆಚ್ಚಿನ ಕುಮ್ಮಕ್ಕು ಸಿಕ್ಕಂತಾಗಿದೆ. ಕುಲ್ಲಕ್ಷ ಕಾರಣಗಳಿಗಾಗಿ ಗಲಭೆಗಳು ನಡೆಯುತ್ತಿವೆ. ಅಮಾಯಕರ ಸಾವು ನೋವಿಗೆ ಕಾರಣವಾಗುತ್ತವೆ.

2017 ರಲ್ಲಿ ದೇಶದಲ್ಲಿ 822 ಕೋಮು ಗಲಭೆಗಳು ನಡೆದಿವೆ. ಹಿಂದಿನ ಎರಡು ವರ್ಷಗಳಿಗೆ ಹೋಲಿಸಿದರೆ ಇದು ಬಹಳ ಹೆಚ್ಚು. 2019 ಚುನಾವಣಾ ವರ್ಷ. ಕೋಮುವಾದಿ ಶಕ್ತಿಗಳು ಕರಾಳ ರೂಪ ತಾಳುವ ಸಮಯ. ಗಲಭೆಗಳನ್ನು ಉಂಟುಮಾಡಿ ಅದರ ರಾಜಕೀಯ ಲಾಭ ಪಡೆಯಲು ಹೊಂಚು ಹಾಕುತ್ತಿರುವ ಸಮಯ. ಇದಕ್ಕೆ ಆಸ್ಪದ ಕೊಡದಿರುವುದು ಇಂದಿನ ತುರ್ತಿನ ದೇಶ ಪ್ರೇಮಿ ಕರ್ತವ್ಯ.

ವರ್ಷ	ಉತ್ತರ ಪ್ರದೇಶ		ಕರ್ನಾಟಕ	
	ಗಲಭೆಗಳು	ಮೃತಪಟ್ಟವರು	ಗಲಭೆಗಳು	ಮೃತಪಟ್ಟವರು
2015	155	22	105	08
2016	162	29	101	12
2017	195	44	100	09

ಕೋಮು ಗಲಭೆಗಳಲ್ಲಿ, ಉತ್ತರ ಪ್ರದೇಶದ ಬಳಿಕ ಕರ್ನಾಟಕ ಎರಡನೇ ಸ್ಥಾನದಲ್ಲಿರುವುದು ತಲೆತಗ್ಗಿಸುವ ವಿಚಾರ. ಆದರೆ ಹಿಂದಿನ ವರ್ಷಗಳಿಗೆ ಹೋಲಿಕೆ ಮಾಡಿದರೆ ರಾಜ್ಯದಲ್ಲಿ ಕೋಮು ಗಲಭೆಗಳ ಸಂಖ್ಯೆಯಲ್ಲಿ ಸ್ವಲ್ಪ ಇಳಿಕೆಯಾಗಿರುವುದು ಕಂಡು ಬರುತ್ತದೆ. ಕೋಮುವಾದಿ ಬಿಜೆಪಿಯನ್ನು ಅಧಿಕಾರದಿಂದ ದೂರ ಇಡುವ ಉದ್ದೇಶದಿಂದ ಎರಡು ಜಾತ್ಯಾತೀತ ಪಕ್ಷಗಳಾದ ಕಾಂಗ್ರೆಸ್ ಮತ್ತು ಜೆಡಿಎಸ್ ಒಟ್ಟಾಗಿ ಒಂದು ಮೈತ್ರಿ ಸರ್ಕಾರವನ್ನು ಅಧಿಕಾರಕ್ಕೆ ತರಲು ಸಾಧ್ಯವಾಗಿರುವುದು ಕೋಮು ಸಂಘರ್ಷದ ಇಳಿಕೆಗೆ ತನ್ನ ಕೊಡುಗೆ ನೀಡಿದೆ.

ಸರ್ವ ಜನಾಂಗದ ಶಾಂತಿಯ ತೋಟ ಎಂದು ಹೆಸರುವಾಸಿಯಾಗಿರುವ ನಮ್ಮ ಕನ್ನಡ ನಾಡಿಗೆ ಕೋಮು ಗಲಭೆ, ಜನಾಂಗೀಯ ದ್ವೇಷದ ಹಿಂಸಾಚಾರದಲ್ಲಿ ಹೆಸರು ಪ್ರಸ್ತಾವಾಗುವುದು ಒಳ್ಳೆಯ ಸಂಗತಿಯಲ್ಲ. ಕೋಮು ಗಲಭೆಯಲ್ಲಿ ಕರ್ನಾಟಕಕ್ಕೆ ದಕ್ಕಿದ 2ನೇ ಸ್ಥಾನವನ್ನು ನಾವು ಆದಷ್ಟು ಬೇಗ ಕಳಚಿಕೊಳ್ಳಲೇ ಬೇಕು. ಹಾಗೆ ಯೋಚನೆ ಮಾಡುವವರಿಗೆ ಈಗ ಬಂದಿರುವ ಚುನಾವಣೆ ಒಂದು ಸದಾವಕಾಶ. ಕೋಮು ಗಲಭೆಗಳನ್ನು ಪ್ರಚೋದಿಸಿ ಅದನ್ನು ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುವ ಶಕ್ತಿಗಳನ್ನು, ಪಕ್ಷಗಳನ್ನು ನಿರ್ದಾಕ್ಷಣ್ಯವಾಗಿ ಸೋಲಿಸಬೇಕು. ಗಲಭೆಕೋರರನ್ನು ಬೆಂಬಲಿಸಬಾರದು. ಹಿಂದುಗಳಿಗೆ ಮುಸಲ್ಮಾನರು ಶತ್ರುಗಳೆಂದು, ಮುಸಲ್ಮಾನರಿಗೆ ಹಿಂದುಗಳು ಶತ್ರುಗಳೆಂದು ಬಿಂಬಿಸುವವರನ್ನು ಯಾವ ಸಂಕೋಚವಿಲ್ಲದೆ ಚುನಾವಣೆಯಲ್ಲಿ ಗೆಲ್ಲಲು ಅವಕಾಶ ಕೊಡಬಾರದು. ಇದು ಇಂದಿನ ತುರ್ತು ದೇಶಪ್ರೇಮಿ ಕರ್ತವ್ಯ.

'ಹಿಂದು ಭಯೋತ್ಪಾದಕ' ಎಂಬ ಶಬ್ದದ ಬಳಕೆಯಿಂದ ನಮ್ಮ ಪ್ರಧಾನಿಯವರ ಮನಸ್ಸಿಗೆ ತುಂಬಾ ನೋವಾಯಿತಂತೆ! ಅದರಂತೆಯೇ 'ಮುಸಲ್ಮಾನ ಭಯೋತ್ಪಾದಕ' ಎಂದಾಗ ಮುಸಲ್ಮಾನರಿಗೂ ನೋವಾಗುವುದಿಲ್ಲವೆ? ಒಬ್ಬ ಮಹಾನ್ ಹಿಂದು ಸಂತನಂತಿದ್ದ ಗಾಂಧೀಜಿಯವರನ್ನು ಕೊಲೆ ಮಾಡಿದವನು ಹಿಂದು ಅಲ್ಲವೆ? ಪ್ರಧಾನಿ ರಾಜೀವ್ ಗಾಂಧಿಯವರನ್ನು ಬಾಂಬ್ ಸ್ಫೋಟಿಸಿ ಕೊಂದವರು ಹಿಂದುಗಳಲ್ಲವೆ? ಸಂಜೋತಾ ಎಕ್ಸ್‌ಪ್ರೆಸ್ ರೈಲನ್ನು ಸ್ಫೋಟಿಸಿ 68 ಮಂದಿ ಅಮಾಯಕರನ್ನೂ ಸಾಯಿಸಿದ ಆರೋಪವನ್ನು ಎದುರಿಸುತ್ತಿದ್ದವರು ಹಿಂದು ಸನ್ಯಾಸಿ ಸ್ವಾಮಿ ಅಸೀಮಾನಂದ, ಸಾಕ್ಷಿ ಪುರಾವೆ ಕೊರತೆಯಿಂದಾಗಿ ಖುಲಾಸೆ ಆಗಿರಬಹುದು. ಮುಂದೊಂದು ದಿನ ಅಪರಾಧಿ ಎಂದು ಸಾಬೀತಾದರೆ, ಆಗ ಆತ ಹಿಂದು ಭಯೋತ್ಪಾದಕ ಎಂದೇ ಕರೆಯಲ್ಪಡುತ್ತಾನಲ್ಲವೆ? ಎಲ್ಲಾ ಮತ ಧರ್ಮಗಳ ಅನುಯಾಯಿಗಳಲ್ಲಿಯೂ ಭಯೋತ್ಪಾದಕರಿದ್ದಾರೆ. ಮುಸಲ್ಮಾನರಲ್ಲಿ ಭಯೋತ್ಪಾದಕರಿದ್ದಾರೆ, ಕ್ರೈಸ್ತರಲ್ಲಿ ಭಯೋತ್ಪಾದಕರಿದ್ದಾರೆ, ಸಿಖ್ಖ್ ಸಮುದಾಯದಲ್ಲಿ ಭಯೋತ್ಪಾದಕರಿದ್ದಾರೆ. ಜೈನರಲ್ಲಿ, ಬೌದ್ಧರಲ್ಲಿಯೂ ಭಯೋತ್ಪಾದಕರಿದ್ದಾರೆ. ಹಾಗೇ ಹಿಂದುಗಳಲ್ಲಿಯೂ ಭಯೋತ್ಪಾದಕರಿದ್ದಾರೆ. ಭಯೋತ್ಪಾದಕರಿಗೆ ಯಾವುದೇ ಧರ್ಮ ಇರುವುದಿಲ್ಲ ಎಂದು ಹೇಳುವುದೇ ಹೆಚ್ಚು ಸರಿ.

ಎರಡು ಮತ ಪಂಥಗಳ ನಡುವಿನ ದ್ವೇಷ, ಅಸಹನೆ ಭಯೋತ್ಪಾದನೆಯ ಮೂಲ ಆಗಿರುವುದರಿಂದ ಅದನ್ನು ಆಯಾ ಮತಧರ್ಮದವರು ಬೆಂಬಲಿಸುವುದು ಅಷ್ಟೇ ಅಮಾನವೀಯವಾಗಿದೆ. ನಮ್ಮ ಲೌಕಿಕ ಪ್ರಶ್ನೆಗಳಿಗೆ ಮತಧರ್ಮದಲ್ಲಿ ಉತ್ತರವನ್ನು ಹುಡುಕಬಾರದು. ಮುಕ್ತ ಮಾತುಕತೆ ಮೂಲಕ ಬಗೆಹರಿಸಿಕೊಳ್ಳಬೇಕು. ಅದು ದೌರ್ಬಲ್ಯವಲ್ಲ. ಚುನಾವಣೆಗಳಲ್ಲಿ ಅಂತಹ ಮತೀಯ ಶಕ್ತಿಗಳನ್ನು ಸೋಲಿಸಿ ತಿರಸ್ಕರಿಸಬೇಕು. ಮೋದಿ ನೇತೃತ್ವ ನೀಡುವ ಕೋಮುವಾದಿ ಶಕ್ತಿಗಳ ಸರ್ಕಾರ ಮತ್ತೆ ಅಧಿಕಾರಕ್ಕೆ ಬಂದರೆ ದೇಶದಲ್ಲಿ ಗಲಭೆಗಳು ಹೆಚ್ಚಾಗುವ ಅಪಾಯವಿದ್ದು ಮುಂದಿನ ದಿನಗಳು ದೇಶಕ್ಕೆ ಅತ್ಯಂತ ಕೆಟ್ಟ ದಿನಗಳಾಗಲಿವೆ. ಕೋಮು ಗಲಭೆಯಲ್ಲಿ ಕರ್ನಾಟಕಕ್ಕೆ ಅಂಟಿಕೊಂಡಿರುವ 2ನೇ ಸ್ಥಾನವನ್ನು ನಾವು ಕಳಚಿಕೊಳ್ಳಬೇಕಾದರೆ ಈ ಚುನಾವಣೆಯಲ್ಲಿ ಬಿಜೆಪಿಯನ್ನು ನಿರ್ಣಾಯಕವಾಗಿ ಸೋಲಿಸಬೇಕು. ●

ಮೋದಿ ಸತ್ಯ ಹೇಳುತ್ತಿದ್ದಾರೆ ಕೇಳಿ! "ನಾನು ಚೌಕಿದಾರ್"

ನಿತ್ಯಾನಂದಸ್ವಾಮಿ

ನರೇಂದ್ರ ಮೋದಿ ಇತ್ತೀಚೆಗೆ ಒಂದು ಸತ್ಯವನ್ನು ಹೇಳುತ್ತಿದ್ದಾರೆ. ಇಡೀ ದೇಶಕ್ಕೆ ಹೇಳುತ್ತಿದ್ದಾರೆ. ಇಡೀ ವಿಶ್ವಕ್ಕೂ ಹೇಳುತ್ತಿದ್ದಾರೆ. ಪದೆ ಪದೆ ಹೇಳುತ್ತಿದ್ದಾರೆ. ಒತ್ತಿ ಒತ್ತಿ ಹೇಳುತ್ತಿದ್ದಾರೆ. ಇದುವರೆಗೆ ಸುಳ್ಳುಗಳನ್ನೇ ಹೇಳುತ್ತಾ 'ಸುಳ್ಳಿನ ಸರದಾರ' ಎಂಬ ಬಿರುದನ್ನು ಪಡೆದುಕೊಂಡಿದ್ದ ಅವರು ಈಗ ಒಂದು ಸತ್ಯದ ಮಾತನ್ನು ಹೇಳುತ್ತಿದ್ದಾರೆ. "ನಾನು ಚೌಕಿದಾರ್".

ಚೌಕಿದಾರರು ಶ್ರೀಮಂತರ ಮನೆ ಕಾಯುತ್ತಿರುತ್ತಾರೆ. ಭಾರತದಲ್ಲಿ ಸುಮಾರು ಶೇ. 5 ರಷ್ಟು ಶ್ರೀಮಂತ ಕುಟುಂಬಗಳು ಚೌಕಿದಾರರನ್ನು ಅಂದರೆ ಕಾವಲುಗಾರರನ್ನು ನೇಮಿಸಿರುತ್ತಾರೆ. ಕೇವಲ ತಳವರ್ಗದವರು, ದಲಿತರು, ಆದಿವಾಸಿಗಳು ಮತ್ತು ಹಿಂದುಳಿದ ಜಾತಿಗಳಿಗೆ ಸೇರಿದವರು ಮಾತ್ರ ಈ ವೃತ್ತಿಯನ್ನು ಕೈಗೊಳ್ಳುತ್ತಾರೆ. ಚೌಕಿದಾರರ ವೃತ್ತಿ ನಿರ್ದಿಷ್ಟ ಜಾತಿಗಳಿಗೆ ಮಾತ್ರ ಸಂಬಂಧಪಟ್ಟಿದೆ ಎಂಬುದು ಬಿಜೆಪಿಯ ರಾಜ್ಯಸಭಾ ಸದಸ್ಯ ಸುಬ್ರಮಣ್ಯ ಸ್ವಾಮಿ ಅವರ ಇತ್ತೀಚಿನ ಹೇಳಿಕೆಯಿಂದ ಸ್ಪಷ್ಟವಾಗುತ್ತದೆ. "ನಾನೂ ಸಹ ಚೌಕಿದಾರ ಎಂದು ನಾನು ಹೇಳಲಾರೆ, ಏಕೆಂದರೆ ನಾನು ಬ್ರಾಹ್ಮಣನಿದ್ದೇನೆ." ಚೌಕಿದಾರ ವೃತ್ತಿ ಸಾಮಾನ್ಯವಾಗಿ ಕಡಿಮೆ ಆದಾಯ ತರುವ ವೃತ್ತಿ. ಅನಿವಾರ್ಯವಾದಾಗ ಮಾತ್ರ ಒಬ್ಬ ವ್ಯಕ್ತಿ ಚೌಕಿದಾರನಾಗುತ್ತಾನೆ. ಚೌಕಿದಾರ್ ಸಾಮಾನ್ಯವಾಗಿ ಶ್ರೀಮಂತನ ಮನೆಯ ಗೇಟ್ ಬಳಿ ನಿಂತಿದ್ದು ಯಜಮಾನನ ಮನೆಯ ರಕ್ಷಣೆ ಮಾಡುತ್ತಿರುತ್ತಾನೆ. ಶ್ರೀಮಂತನ ಮನೆಯೊಳಗೆ ಆತ ಕೂಡಿಟ್ಟ ಹಣ ಹಾಗೂ ಆಭರಣಗಳು ಇರುತ್ತವೆ. ಚೌಕಿದಾರ ಅವುಗಳನ್ನು ಕಾಯುತ್ತಿರುತ್ತಾನೆ. ಬಡವನ ಮನೆಯಲ್ಲಿ ಕಾವಲಿದ್ದು ಕಾಪಾಡಬೇಕಾದ ವಸ್ತುಗಳು ಇರುವುದಿಲ್ಲ. ಶ್ರೀಮಂತರ ಬಂಗ್ಲೆ, ಕಾರು, ಧನಕನಕ ಕಾಯಲು ಚೌಕಿದಾರರು ಬೇಕು.

ಶ್ರೀಮಂತರ ಕಾವಲುಗಾರ:

ಈ ಒಂದು ವಿಷಯದಲ್ಲಿ ಮೋದಿ ಸತ್ಯ ಹೇಳುತ್ತಿದ್ದಾರೆ. ಅವರು ಕಾವಲು ಕಾಯುತ್ತಿದ್ದಾರೆ. ಅವರು ಆಗರ್ಭ ಶ್ರೀಮಂತರನ್ನು, ಬೃಹತ್ ಉದ್ಯೋಗಪತಿಗಳನ್ನು, ದೈತ್ಯ ಕಾರ್ಪೊರೇಟ್ ಕಂಪೆನಿಗಳನ್ನುಕಾಯುತ್ತಿದ್ದಾರೆ.ಶತಕೋಟ್ಯಾಧಿಪತಿಗಳ ಬಾಗಿಲು ಕಾಯುತ್ತಾರೆ. ಅವರ ಹಿತಚಿಂತನೆಯಲ್ಲಿ ನಿರತರಾಗಿದ್ದಾರೆ.; ಅವರಿಗಾಗಿಯೇ ಅಧಿಕಾರವನ್ನು ನಡೆಸುತ್ತಿದ್ದಾರೆ. ಅವರ ಸಾಲ ಮನ್ನಾಮಾಡುತ್ತಾರೆ. ದೇಶದ ಬೆಲೆಬಾಳುವ ಆಸ್ತಿಯನ್ನು ಬಿಡಿ ಕಾಸಿಗೆ ಅವರಿಗೆ ಧಾರೇ ಎರೆಯುತ್ತಾರೆ. ಈಗ ಲೋಕಸಭಾ ಚುನಾವಣೆಗಳು ನಡೆಯಲಿರುವುದರಿಂದ ಮೋದಿಯವರು ಅವರಿಗೆ ಭರವಸೆ ನೀಡುತ್ತಿದ್ದಾರೆ. ದೇಶದ ಒಳಗಿರುವ ಬಂಡವಾಳಗಾರರಿಗೂ ದೇಶದ ಹೊರಗಿರುವ ಬಂಡವಾಳಗಾರರಿಗೂ ಅವರು ಮನವರಿಕೆ ಮಾಡುತ್ತಿದ್ದಾರೆ. "ನಾನಿದ್ದೇನೆ, ನಿಮ್ಮ ಚೌಕಿದಾರ್." ಗುಡಿ ಗೋಪುರಗಳ ಮೇಲಿನಿಂದ ಮನೆ ಮಾಳಿಗೆಗಳ ಮೇಲಿಂದ ಹೇಳುತ್ತಾರೆ, "ನಾನು ಚೌಕಿದಾರ್".

ಆರೆಸ್ಸೆಸ್ ಸದಸ್ಯರೇ ಆಗಿರಲಿ, ಬಿಜೆಪಿ ಕಾರ್ಯಕರ್ತರೇ ಆಗಿರಲಿ, "ನಾನೂ ಚೌಕಿದಾರ್" ಎಂದು ಹೇಳಿಕೊಳ್ಳಲು ಹೇಸುವುದಿಲ್ಲ. ಆರೆಸ್ಸೆಸ್ ಮತ್ತು ಬಿಜೆಪಿ ಎಂದಿಗೂ ಸಾಮಾಜಿಕ ಆರ್ಥಿಕ ಸಮಾನತೆಯನ್ನು ಪ್ರತಿಪಾದಿಸುವುದಿಲ್ಲ. ಆರೆಸ್ಸ್‌ಸ್/ಬಿಜೆಪಿ ಕಾರ್ಯಕರ್ತರು ಪ್ರಾಕೃತಿಕ ಅನಾಹುತಗಳು ಸಂಭವಿಸಿದಾಗ, ಜನರ ನೆರವಿಗೆ ಬಂದಿರಬಹುದು. ಆದರೆ ಅವರು ಎಂದಿಗೂ ಬಡವರ ಏಳಿಗೆಗಾಗಿ, ಶ್ರಮಿಸಿದವರಲ್ಲ. ಅವರು ಎಂದಿಗೂ ಗ್ರಾಮೀಣ ಬಡವರನ್ನಾಗಲಿ ನಗರದ ಬಡವರನ್ನಾಗಲಿ ಅವರ ದಿನಗೂಲಿ ಹೆಚ್ಚಳಕ್ಕಾಗಲಿ ಸಂಘಟಿಸಿದವರಲ್ಲ. ಕಾರ್ಮಿಕರು ಮುಷ್ಕರ ಮಾಡಿದಾಗ ಅವರು ಆಡಳಿತ ವರ್ಗದ ಪರವಾಗಿ ನಿಲ್ಲುತಾರೆಯೇ ಹೊರತು ಕಾರ್ಮಿಕರ ಪರವಲ್ಲ. ಸಮಾಜದ ವರ್ಗ ಆಧಾರಿತ, ಜಾತಿ ಆಧಾರಿತ ವಿಭಜನೆಯನ್ನು ಅವರು ವಿರೋಧಿಸುವುದಿಲ್ಲ. ಸಾಮಾಜಿಕ ನ್ಯಾಯದಲ್ಲಿ ಅವರಿಗೆ ನಂಬಿಕೆ ಇಲ್ಲ. ಶ್ರೀಮಂತರ "ಚೌಕಿದಾರ್" ಆಗಿರುವುದನ್ನು ಅವರು ತಾತ್ವಿಕವಾಗಿಯೇ ಒಪ್ಪುತ್ತಾರೆ.

ಉದಾರೀಕರಣ, ಜಾಗತೀಕರಣದ ಯುಗದಲ್ಲಿ ಈಗ ಮೋದಿ ಮತ್ತು ಸಂಘ ಪರಿವಾರ ಬೆಳೆಯುತ್ತಿರುವ 'ಚಮಚಾ' ಬಂಡವಾಳಿಗರ ಜೊತೆ ನಿಂತಿದ್ದಾರೆ. ಕಾಂಗ್ರೆಸಿಗರ ವೇಗಕ್ಕೆ ತೃಪ್ತಿಯಾಗದ ಈ ಚಮಚಾ ಬಂಡವಾಳಗಾರರಿಗೆ ಈಗ ಒಬ್ಬ ನಂಬಿಗಸ್ಥ ಚೌಕಿದಾರ್ ಸಿಕ್ಕಿದ್ದಾರೆ. ಖಾಸಗೀಕರಣಕ್ಕೆ ಮೋದಿಯವರಿಂದ ದೊರೆತ ವೇಗ ಸ್ವತಃ ಚಮಚಾ ಬಂಡವಾಳಗಾರರನ್ನು ಬೆಚ್ಚಿಬೀಳಿಸಿದೆ. ಮೋದಿ ಮತ್ತು ಸಂಘ ಪರಿವಾರ ಈ ಚಮಚಾ ಬಂಡವಾಳಗಾರರಿಗೆ ಸಲ್ಲಿಸುತ್ತಿರುವ ಸೇವೆಗೆ ಬಯಸುವ ಸಂಭಾವನೆ ಬೇರೆ ಏನೂ ಅಲ್ಲ. 17ನೇ ಲೋಕಸಭಾ ಚುನಾವಣೆಯಲ್ಲಿ ಮೋದಿಯವರನ್ನು ಮತ್ತು ಭಾಜಪವನ್ನು ಗೆಲ್ಲಿಸಬೇಕು ಮತ್ತು ಆರೆಸ್ಸಿಸಿನ ಹಿಂದುತ್ವ ಸಿದ್ಧಾಂತವನ್ನು ಬೆಂಬಲಿಸಬೇಕು. ಗಡಿಯಲ್ಲಿ ಯುದ್ಧೋನ್ಮಾದವನ್ನು ಬುಗಿಲೆಬ್ಬಿಸಿ, ದೇಶದಲ್ಲಿ ಗಲಭೆಗಳನ್ನು ಉಂಟುಮಾಡಿ ಹಿಂದುತ್ವ ಸಿದ್ಧಾಂತವನ್ನೇನೋ ಬಲಪಡಿಸಬಹುದು. ಆದರೆ ದೇಶದ ಮತದಾರರ ನಡುವೆ ಚೌಕಿದಾರ್ ಮೋದಿಯವರನ್ನು ಗೆಲ್ಲಿಸುವುದು ಸಾಧ್ಯವೇ ಎಂದು ಎದುರುಸಿರು ಬಿಡುತ್ತಿದ್ದಾರೆ ಚಮಚಾ ಬಂಡವಾಳಿಗರು.! ●

ವಿಜಯಾ ಬ್ಯಾಂಕ್ ವಿಲೀನ ಪ್ರತಿಭಟನೆ ಮಂಗಳೂರಿನಲ್ಲಿ ಕರಾಳದಿನ



ವರದಿ: ವಾ.ಉ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನ್ಮತಳೆದು ಲಾಭದಾಯಕವಾಗಿ ವ್ಯವಹರಿಸುತ್ತಿದ್ದ ವಿಜಯಾಬ್ಯಾಂಕನ್ನು ಬ್ಯಾಂಕ್ ಆಫ್ ಬರೋಡಾದ ಜೊತೆ ವಿಲೀನಗೊಳಿಸುವುದನ್ನು ವಿರೋಧಿಸಿ, ಮಂಗಳೂರಿನ ದೇಶಪ್ರೇಮೀ, ಸಮಾನಮನಸ್ಕ ಸಂಘಟನೆಗಳ ಒಕ್ಕೂಟ ಹಾಗೂ 'ವಿಜಯಾಬ್ಯಾಂಕ್ ಉಳಿಸಿ ಹೋರಾಟ ಸಮಿತಿ' ಸದಸ್ಯರು, ವಿಲೀನಗೊಂಡ ಎಪ್ರಿಲ್ 1ರ ದಿನಾಂಕದಂದು ಮಂಗಳೂರಿನ ವಿಜಯಾಬ್ಯಾಂಕಿನ ಪ್ರಾದೇಶಿಕ ಕಚೇರಿ ಎದುರು ಪ್ರತಿಭಟನೆ ನಡೆಸಿದರು. ಪ್ರತಿಭಟನಕಾರರು ತಲೆಗೆ ಕಪ್ಪು ಪಟ್ಟಿ ಕಟ್ಟಿಕೊಂಡು ಭಿತ್ತಿಪತ್ರಗಳನ್ನು ಹಿಡಿದುಕೊಂಡು ಕರಾಳ ದಿನ ಆಚರಿಸಿದರು. ಬ್ಯಾಂಕ್ ವಿಲೀನ ವಿರೋಧಿಸಿ ಘೋಷಣೆಗಳನ್ನು ಕೂಗಿದರು.

'ವಿಜಯಾ ಬ್ಯಾಂಕ್ ಗುಜರಾತಿನ ಪಾಲಾಯ್ತು, ತುಳುನಾಡಿನ ಹೆಮ್ಮೆ ಇಲ್ಲದಾಯ್ತು,' 'ಎ.ಬಿ.ಶೆಟ್ಟಿ ಸುಂದರರಾಮ ಶೆಟ್ಟಿ ಶ್ರಮದ ಕೂಸು ವಿಜಯಾಬ್ಯಾಂಕ್ ನಾಶ ಮಾಡಿದ ಮೋದಿ ಸರಕಾರಕ್ಕೆ ಧಿಕ್ಕಾರ,' 'ವಿಜಯಾ ಬ್ಯಾಂಕ್ ಮುಚ್ಚಿಸುವಾಗ ಮೌನ ಸಮ್ಮತಿ ನೀಡಿದ ಸಂಸದ ನಳಿನ್ ಜನತೆಯ ಪ್ರಶ್ನೆಗೆ ಉತ್ತರಿಸಿ' ಎಂಬ ಭಿತ್ತಿ ಪತ್ರಗಳನ್ನು ಪ್ರತಿಭಟನಕಾರರು ಪ್ರದರ್ಶಿಸಿದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಡಿವೈಎಫ್ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ವಿಜಯಾಬ್ಯಾಂಕ್ ಉಳಿಸಿ ಹೋರಾಟ ಸಮಿತಿ ಅಧ್ಯಕ್ಷ ದಿನೇಶ್ ಹೆಗ್ಡೆ ಉಳೇಪಾಡಿ, ಸಾಮಾಜಿಕ ಚಿಂತಕ ಎಂ.ಜಿ.ಹೆಗ್ಡೆ ಮಾತನಾಡಿದರು. ನಿವೃತ್ತ ಬ್ಯಾಂಕ್ ಅಧಿಕಾರಿಗಳು ಹಾಗೂ ಅಧಿಕಾರಿಗಳ ಸಂಘದ ರಾಘವ, ಬ್ಯಾಂಕ್ ಎಂಪ್ಲೋಯಿಸ್ ಫೆಡರೇಶನ್ ಆಫ್ ಇಂಡಿಯಾದ ಬಿ.ಎಂ. ಮಾಧವ, ಶ್ಯಾಮಸಂದರ ರಾವ್, ಡಿವೈಎಫ್ಐ ದ.ಕ.ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ಮಂಗಳೂರಿನ ಮಾಜಿ ಮೇಯರ್ ಕೆ.ಅಶ್ರಫ್, ಪಾಲಿಕೆ ಸದಸ್ಯ ದಯಾನಂದ ಶೆಟ್ಟಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಮಂಗಳೂರು ನಗರದಲ್ಲಿ ಹೋರಾಟ ಸಮಿತಿ ಹಾಗೂ ದೇಶಪ್ರೇಮಿ ಸಮಾನ ಮನಸ್ಕ ಸಂಘಟನೆಗಳು ಸಂಯುಕ್ತವಾಗಿ ನಡೆಸುವ ಮೂರನೇ ಕಾರ್ಯಕ್ರಮ ಇದಾಗಿದೆ.

ಈ ಎಲ್ಲ ಪ್ರತಿಭಟನೆಗಳ ನಡುವೆಯೂ, ವಿಜಯಾಬ್ಯಾಂಕಿನ ಬೋರ್ಡು ಬದಲಾವಣೆ ಕಾರ್ಯ ನಡೆಯುತ್ತಿದೆ. ಇನ್ನೊಂದೆಡೆ ಎಪ್ರಿಲ್ 10 ರಂದು ಕಾಂಗ್ರೆಸ್ ಪಕ್ಷದ ವತಿಯಿಂದಲೂ ವಿಜಯಾಬ್ಯಾಂಕ್ ವಿಲೀನದ ವಿರುದ್ಧ ಮಂಗಳೂರಿನಲ್ಲಿ ಪ್ರತಿಭಟನೆಗಳು ನಡೆದಿವೆ. ●

'ಸಂಸ್ಕಾರ' ಕಾದಂಬರಿ ಮತ್ತು ಚಲನಚಿತ್ರ ಕುರಿತು ಕುಂದಾಪುರದಲ್ಲಿ ಸಂವಾದ

ಪಟ್ಟಾಭಿರಾಮ ರೆಡ್ಡಿ ನಿರ್ದೇಶನದ ಯು.ಆರ್. ಅನಂತಮೂರ್ತಿಯವರ 'ಸಂಸ್ಕಾರ' ಕಾದಂಬರಿ ಆಧಾರಿತ ಚಲನಚಿತ್ರಕ್ಕೆ 50 ವರ್ಷ ತುಂಬಿದ ಹಿನ್ನೆಲೆಯಲ್ಲಿ ಮತ್ತು ದಿಪಟ್ಟಾಭಿರಾಮ ರೆಡ್ಡಿಯವರ ಶತಮಾನೋತ್ಸವ ಆಚರಣೆಯ ಭಾಗವಾಗಿ ಮಾರ್ಚ್ 30 ರಂದು ಕುಂದಾಪುರದಲ್ಲಿ ಸಂಸ್ಕಾರ ಒಂದು ಮರುನೋಟ ಕಾರ್ಯಕ್ರಮ ನಡೆಯಿತು.

ಸಮುದಾಯ ಕುಂದಾಪುರ, ಕನ್ಸರ್ನ್ ಫಾರ್ ವರ್ಕಿಂಗ್ ಚಿಲ್ಡ್ರನ್ ಮತ್ತಿತರ ಸಂಘಟನೆಗಳು ಸಂಯುಕ್ತವಾಗಿ ಈ ಕಾರ್ಯಕ್ರಮವನ್ನು ಆಯೋಜಿಸಿದ್ದವು. ಕಾರ್ಯಕ್ರಮದ ಭಾಗವಾಗಿ ಸಂಸ್ಕಾರ ಚಲನಚಿತ್ರದ ಪ್ರದರ್ಶನ, ಸಂಸ್ಕಾರ ಒಂದು ಮರುನೋಟ ಸಾಕ್ಷ್ಯಚಿತ್ರದ ಪ್ರದರ್ಶನ ಮತ್ತು ಸಂವಾದ ನಡೆಯಿತು. ಸಂವಾದದಲ್ಲಿ ಸಾಹಿತ್ಯಾಸಕ್ತರು, ರಂಗಕರ್ಮಿಗಳು ಹಾಗೂ ಸಿನಿಮಾಧ್ಯಮಾಸಕ್ತರೂ ಭಾಗವಹಿಸಿದ್ದರು.

ಸಂಸ್ಕಾರ ಇಂದು ಬಂದಿದ್ದರೆ ಬರುತ್ತಿದ್ದ ಪ್ರತಿಕ್ರಿಯೆ, ಕಾದಂಬರಿಯ ಬಗೆಗಿನ ವಾದ ವಿವಾದ, ಸಂಸ್ಕಾರ ನೀಡುವ ಸಂದೇಶ, ಚಲನಚಿತ್ರ ಮಾಧ್ಯಮಕ್ಕೆ ತರುವಾಗ ಮೂಲಕ್ಕೆ ಮಾಡಿಕೊಂಡ ಬದಲಾವಣೆಗಳು, ಸಂಸ್ಕಾರ ಸಾಹಿತ್ಯಕೃತಿ ಹಾಗೂ ಚಲನಚಿತ್ರ ಕೃತಿಯಲ್ಲಿ ನಿರೂಪಿತವಾದ ಪ್ರತೀಕಗಳ ಜಿಜ್ಞಾಸೆ ಹಾಗೂ ಹೋಲಿಕೆ ಎರಡೂ ಮಾಧ್ಯಮಗಳು ಕಲಾಸಕ್ತನಲ್ಲಿ ಮೂಡಿಸುವ ಪರಿಣಾಮಗಳು ಕುರಿತು ಜಿಜ್ಞಾಸುಗಳು ಸಂವಾದ ನಡೆಸಿದರು.

ಚಲನಚಿತ್ರ ನಿರ್ದೇಶಕ ಹೂಲಿ ಚಂದ್ರಶೇಖರ, ಸಮುದಾಯ ಸಂಘಟನೆಯ ಜಿ.ವಿ.ಕಾರಂತ, ಉದಯ ಗಾಂವಕರ, ಸಾಮಾಜಿಕ ಚಿಂತಕರಾದ ಎಸ್. ಜನಾರ್ಧನ ಮರವಂತೆ, ಸುಬ್ರಹ್ಮಣ್ಯ ಪಡುಕೋಣೆ, ಸಿಡಬ್ಲ್ಯೂಸಿಯ ನಿರ್ದೇಶಕರಾದ ಬಿ.ದಾಮೋದರ ಆಚಾರ್ಯ, ಪಟ್ಟಾಭಿರೆಡ್ಡಿ ಅವರ ಮಗಳು ನಂದನಾ ರೆಡ್ಡಿ ಸಂವಾದದಲ್ಲಿ ಪಾಲ್ಗೊಂಡರು. ಸಮುದಾಯದ ಸದಾನಂದ ಬೈಂದೂರು ಸ್ವಾಗತಿಸಿದರು. ರಂಗನಿರ್ದೇಶಕ ವಾಸುದೇವ ಗಂಗೇರ ಕಾರ್ಯಕ್ರಮ ನಿರೂಪಿಸಿದರು. ●

ಕೊಡಗು: ಆದಿವಾಸಿ ಮುಖಂಡ ಸಂಗಾತಿ ಸೋಮ ಅವರ ಅಕಾಲಿಕ ಅಗಲಿಕೆ



ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಕೊಡಗು ಜಿಲ್ಲೆಯ ಸಹಸಂಚಾಲಕರಾಗಿದ್ದ ಸಂಗಾತಿ ಸೋಮ ಅವರು ಇತ್ತೀಚೆಗೆ ತೀವ್ರ ಹೃದಯಾಘಾತದಿಂದ ನಿಧನರಾದರು. ಕಾಮ್ರೇಡ್ ಸೋಮ ರವರು 2011 ನೇ ಇಸವಿಯಿಂದ ಆದಿವಾಸಿ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡವರು. ಕೊಡಗು ಜಿಲ್ಲೆಯ ಪಂಜರಿ ಯರವ ಬುಡಕಟ್ಟು ಸಮುದಾಯಕ್ಕೆ ಸೇರಿದ್ದ ಸಂಗಾತಿ ಸೋಮ ರವರು ವಿರಾಜಪೇಟೆ ತಾಲೂಕಿನ ಗುಯ್ಯ ಗ್ರಾಮದ ನಿವಾಸಿಯಾಗಿದ್ದರು.

ಅವರು ಸಿಪಿಐಎಂ ನ ಗೂಡುಗದ್ದೆ ಶಾಖೆಯ ಹಾಗೂ ಗ್ರಾಮ ಸಮಿತಿಯ ಸದಸ್ಯರಾಗಿದ್ದರು. ಆದಿವಾಸಿಗಳ ಹೋರಾಟ ಮತ್ತು ಸಿಪಿಐಎಂ ಪಕ್ಷದ ಚಳುವಳಿಗಳಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ತೋಟ ಕಾರ್ಮಿಕರಾಗಿದ್ದ ಅವರಿಗೆ 45 ವರ್ಷಗಳಾಗಿದ್ದವು. ಅವರಿಗೆ ಪತ್ನಿ ಹಾಗೂ ವಿದ್ಯಾಭ್ಯಾಸ ಮಾಡುವ ಮಗ, ಮಗಳು ಇದ್ದಾರೆ.

ಅವರ ಅಕಾಲಿಕ ಅಗಲಿಕೆಗೆ ಶೋಕವನ್ನು ವ್ಯಕ್ತಪಡಿಸಿರುವ ಸಿಪಿಐಎಂನ ಜಿಲ್ಲಾ ಸಂಘಟನಾ ಸಮಿತಿಯ ಕಾರ್ಯದರ್ಶಿ ಡಾ.ಐ.ಆರ್. ದುರ್ಗಾ ಪ್ರಸಾದ್ ಅವರು ಸಂಗಾತಿ ಸೋಮ ರವರ ಅಗಲಿಕೆ ಪಕ್ಷಕ್ಕೆ ಆಗಿರುವ ನಷ್ಟ ಎಂದಿದ್ದಾರೆ. ಅವರೊಬ್ಬ ಕ್ರಿಯಾಶೀಲ ಕಾರ್ಯಕರ್ತರಾಗಿದ್ದರು. ಅವರ ಕುಟುಂಬದ ದುಃಖದ ಲ್ಲಿ ಪಕ್ಷವು ಭಾಗಿ ಎಂದಿರುವ ಅವರು ಭಾವಪೂರ್ಣ ಶ್ರದ್ಧಾಂಜಲಿ ಯನ್ನು ಸಲ್ಲಿಸಿದ್ದಾರೆ.

ಸೋಮ ರವರ ನಿಧನಕ್ಕೆ ಕಂಬನಿ ಮಿಡಿದರುವ ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ರಾಜ್ಯ ಸಂಚಾಲಕರು, ಜಿಲ್ಲಾ ಅಧ್ಯಕ್ಷರೂ ಆಗಿರುವ ವೈ.ಕೆ. ಗಣೇಶ್ ರವರು ಅವರ ಕೊಡುಗೆಗಳನ್ನು ಸ್ಮರಿಸಿಕೊಂಡಿದ್ದಾರೆ. ರಾಜ್ಯ ಸಹ ಸಂಚಾಲಕ ರಾಗಿರುವ ಎಸ್.ವೈ. ಗುರುಶಾಂತ ರವರು ಶ್ರದ್ಧಾಂಜಲಿ ಸಲ್ಲಿಸಿದ್ದಾರೆ.

ಅವರ ಅಂತ್ಯಕ್ರಿಯೆಯಲ್ಲಿ ಡಾ.ದುರ್ಗಾ ಪ್ರಸಾದ್, ಸಿಪಿಐಎಂ ನ ಜಿಲ್ಲಾ ಸಂಘಟನಾ ಸಮಿತಿಯ ಸದಸ್ಯರಾದ ಹೆಚ್.ವಿ. ರಮೇಶ್, ಮಹದೇವ, ಸಾಬು, ಜೋಸ್, ಎನ್.ಡಿ.ಕುಟ್ಟಪ್ಪ, ಗಣೇಶ್, ಶಿವಪ್ಪ, ಮುಂತಾದವರು ಭಾಗವಹಿಸಿ ಅಂತಿಮ ನಮನ ಸಲ್ಲಿಸಿದರು. ●

ಆಶ್ರಯಧಾಮದ ಮುಗ್ಧಬಾಲಕಿಯರು ವೇಶ್ಯಾವೃತ್ತಿಗೆ



ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಯ ವತಿಯಿಂದ ನಿರ್ವಹಿಸಲ್ಪಡುತ್ತಿದ್ದ ಸರ್ಕಾರಿ ಬಾಲಕಿಯರ ಪುನರ್ ವಸತಿ ಕೇಂದ್ರದಲ್ಲಿ ಆಶ್ರಯ ಪಡೆಯುತ್ತಿದ್ದ ಅಪ್ರಾಪ್ತ ಬಾಲಕಿಯರನ್ನು ಸಿಬ್ಬಂದಿಯವರೇ ವೇಶ್ಯವಾಟಿಕೆಗೆ ದೂಡಿರುವ ಪ್ರಕರಣ ನಡೆದಿದ್ದು, ನಾಗರಿಕರಲ್ಲಿ ತೀವ್ರ ಆತಂಕಕ್ಕೆ ಕಾರಣವಾಗಿದೆ.

ನಗರದ ಶ್ರೀ ಭುವನೇಶ್ವರಿ ವೃತ್ತ ಸಮೀಪ ಸರ್ಕಾರಿ ಬಾಲಕಿಯರ ಬಾಲ ಮಂದಿರ ಇದ್ದು, ಈ ಬಾಲ ಮಂದಿರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ನಿರ್ವಹಣೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅಪ್ರಾಪ್ತ ಬಾಲಕಿಯರು ಇಲ್ಲಿ ಪುನರ್ ವಸತಿ ಪಡೆದಿದ್ದರು.

ಬೇಲಿಯೇ ಎದ್ದು ಹೊಲ ಮೇಯ್ದಂತೆ ಎಂಬಂತೆ ಪುನರ್ ವಸತಿ ಪಡೆಯುತ್ತಿದ್ದ ಬಾಲಕಿಯರನ್ನು ಬಾಲ ಮಂದಿರದ ಸಿಬ್ಬಂದಿ ಭಾಗ್ಯಮ್ಮ ಎಂಬುವವರು ಹೊರಗಿನ ಮಹಿಳೆ ಸರೋಜಮ್ಮ ಎಂಬುವವರ ಸಹಕಾರದಿಂದ ವೇಶ್ಯಾವಾಟಿಕೆಗೆ ದೂಡುತ್ತಿದ್ದದ್ದು ಬೆಳಕಿಗೆ ಬಂದಿತ್ತು.

ಸುದ್ದಿ ನಗರ ಪೋಲಿಸ್ ಠಾಣೆಗೆ ಮುಟ್ಟಿ ಪೊಲೀಸರು ಹಠಾತ್ ದಾಳಿ ನಡೆಸಿ ಪ್ರಕರಣದ ಮೂಲ ಕಾರಣಕರ್ತರಾದ ಸರ್ಕಾರಿ ಬಾಲಕಿಯರ ಬಾಲ ಮಂದಿರದ ಸಿಬ್ಬಂದಿ ಭಾಗ್ಯಮ್ಮ ಹಾಗೂ ವೇಶ್ಯಾವಾಟಿಕೆಯ ಪ್ರಕರಣದಲ್ಲಿ ಭಾಗಿಯಾಗಿರುವ ಹೊರಗಿನ ಮಹಿಳೆ ಸರೋಜಮ್ಮ ಎಂಬುವವರನ್ನು ವಶಕ್ಕೆ ತೆಗೆದುಕೊಂಡು ಮೊಕದ್ದಮೆ ದಾಖಲಿಸಿಕೊಂಡಿದ್ದಾರೆ.

ಪ್ರಕರಣದ ತೀವ್ರತೆಯನ್ನು ಅರಿತ ಜಿಲ್ಲಾ ಮತ್ತು ಸೆಷನ್ ನ್ಯಾಯಾಧೀಶರು ಬಾಲ ಮಂದಿರ ಕೇಂದ್ರಕ್ಕೆ ಭೇಟಿ ನೀಡಿ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಪಡೆದುಕೊಂಡರು.

➡

ಟೀಮ್ ಇಂಡಿಯಾ ದಿಂದ ಮಂಗಳೂರಿನಲ್ಲಿ ವಿಭಜನೆಯ ಕತೆಗಳು ನಾಟಕ ಪ್ರದರ್ಶನ

ಪ್ರಖ್ಯಾತ ಪಾಕಿಸ್ತಾನಿ ಬರಹಗಾರ ಸಾದತ್ ಹಸನ್ ಮಾಂಟೋ ಅವರು ಬರೆದು ವಿದ್ವೇಷದ ಇಂದಿನ ಭಾರತಕ್ಕೆ ಅತ್ಯಂತ ಪ್ರಸ್ತುತವಾಗಿರುವ ಅವರ ಕಥೆಗಳಲ್ಲಿ ನಾಲ್ಕು ಕಥೆಗಳನ್ನು ಆರಿಸಿ ರಂಗರೂಪದಲ್ಲಿ ಯುವ ನಿರ್ದೇಶಕ ವಿದ್ದು ಉಚ್ಚಿಲ್ ಸಿದ್ಧಪಡಿಸಿದ' ವಿಭಜನೆಯ ಕತೆಗಳು' ನಾಟಕವನ್ನು ಎಪ್ರಿಲ್ 1 ರಂದು ಮಂಗಳೂರಿನಲ್ಲಿ ಪ್ರದರ್ಶಿಸುವ ವ್ಯವಸ್ಥೆಯನ್ನು ಟೀಮ್ ಇಂಡಿಯಾ ವತಿಯಿಂದ ಮಾಡಲಾಯಿತು.

ದೆಹಲಿಯ ಹುಡುಗಿ, ತಪ್ಪೊಪ್ಪಿಗೆ, ತೋಬಾ ಟೇಕ್ ಸಿಂಗ್, ವಿದಾಯ ಈ ನಾಲ್ಕು ಕಥೆಗಳನ್ನು ಪರಿಣಾಮಕಾರಿಯಾಗಿ ನಿರೂಪಿಸಲಾಯಿತು. ಮಾಂಟೋ ಅವರ ಕಥೆಯನ್ನು ಯಥಾವತ್ ಓದುತ್ತಲೇ, ಸಂಬಂಧಪತ್ರ ಪಾತ್ರಗಳು ಸಾಂದರ್ಭಿಕವಾಗಿ ಅಭಿನಯಿಸುವ ಇಲ್ಲವೇ ನಿರೂಪಣೆ ಮಾಡುವ ರಂಗತಂತ್ರವನ್ನು ನಿರ್ದೇಶಕರು ಬಳಕೆ ಮಾಡಿದ್ದರು. ಈ ತಂತ್ರ ಹೊಸದೇನಲ್ಲವಾದರೂ, ಮಾಂಟೋ ಅವರ ಕಥೆಗಾರಿಕೆಯ ಜೀವಂತಿಕೆಯನ್ನೂ ರಂಗಪ್ರದರ್ಶನದ ಜೊತೆಗೇ ನೋಡುಗರಿಗೆ ತೋರಿಸಿತು.

ದಕ್ಷಿಣ ಕನ್ನಡ ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಈ ನಾಟಕದ ಮರುಪ್ರದರ್ಶನಗಳು ಹೆಚ್ಚಿಗೆ ಆಗಬೇಕಾಗಿದೆ. ●

ಅಗಲಿದ ಎಸ್. ಮಾಲತಿ. . . . ನುಡಿನಮನ



ಅದು 79ನೇ ಇಸ್ವಿ. ಆಗತಾನೇ ಬೆಂಗಳೂರಿಗೆ ಬದುಕು ಕಟ್ಟಿಕೊಳ್ಳುವ ತವಕದಲ್ಲಿ ಮನಸ್ಸಿನ ತುಂಬ ಕಳವಳ ತುಂಬಿಕೊಂಡು ಬಂದವಳು ನಾನು. ಬಂದ ಕೆಲವೇ ದಿನಗಳಲ್ಲಿ ಸಮುದಾಯ ಸಾಂಸ್ಕೃತಿಕ ಸಂಘಟನೆಗೆ ಪರಿಚಯಿಸಲ್ಪಟ್ಟೆ. ಅಲ್ಲಿ ಸಿಕ್ಕವಳು ಮಾಲಕ್ಕ. ಅಂದ್ರೆ ಎಸ್.ಮಾಲತಿ. ಅವಳನ್ನು ಆಧುನಿಕ ರಂಗಭೂಮಿಯ ಹಿರಿಯಕ್ಕ ಎನ್ನುತ್ತಾರೆ ಹಲವರು. ಅದನ್ನು ಯಾರು ಒಪ್ಪುತ್ತಾರೋ ಬಿಡುತ್ತಾರೋ ಆದರೆ ಮಹಿಳಾ ಸಂಘಟನೆ/ಚಳುವಳಿಗೆ ಸಂಬಂಧಿಸಿದಂತೆ ಆಕೆ ನನಗಂತೂ ಹಿರಿಯಕ್ಕಳೇ. ಅದರಲ್ಲಿ ಯಾವ ಸಂಶಯವೂ ಇಲ್ಲ. ಸಮುದಾಯದ ಜೊತೆ ಒಬ್ಬಳಾಗಿ ನಾಟಕ, ರಂಗಭೂಮಿಯ ಭಾಗವಾಗಿಯೇ ಮಾಡಲೇಬೇಕಾದ ಸುತ್ತುಮುತ್ತಿನ ಕೆಲಸಗಳ ಬಗ್ಗೆ, ಯಾವತ್ತೂ ಚಳುವಳಿಯ ಭಾಗವಾಗಿ ಕೆಲಸ ಮಾಡುವಾಗ ಇದು ಮೇಲು ಇದು ಕೀಳು ಎಂದು ಆಲೋಚನೆಯೇ ಮಾಡದೇ ಕಸ ಗುಡಿಸಲೂ ಸೈ, ಪಾತ್ರ ಮಾಡಲೂ ಜೈ ಎಂಬ ಸರಳ ಸಿದ್ಧಾಂತವನ್ನು ಮೈಗೂಡಿಸಿಕೊಟ್ಟವಳು ಆಕೆ. ತುಂಬಾ ಸ್ನೇಹಜೀವಿ. ಆದರೆ ಅಂದು ಕೆಲಸದ ವಿಷಯಕ್ಕೆ ಖಡಕ್ ಆಗಿ ಅವಳಿಲ್ಲದಿದ್ದಿದ್ದರೆ ನಾನು ಈಗ ಹೀಗಾಗುತ್ತಿದ್ದೆನೋ ಇಲ್ಲವೋ ಗೊತ್ತಿಲ್ಲ. ಅಭಿನಯ ಅದೂ ಇದೂ ಎಂದು ಒಳಗೆ ಹೋದ ನನ್ನಲ್ಲಿ ಅದೇನು ಗುರುತಿಸಿದಳೋ ಏನೋ ನಿಧಾನವಾಗಿ ಮಹಿಳಾ ಸಂಘಟನೆಯ ಕೆಲಸಕ್ಕೆ ಪ್ರೇರೇಪಣೆ ನೀಡಲು ಪ್ರಾರಂಭಿಸಿದಳು. ಆಗ ಇಂದಿನ ಜನವಾದಿ ಇರಲಿಲ್ಲ. ಆದರೆ ಮಹಿಳೆಯರ ಮಧ್ಯೆ ಕೆಲಸ ನಡೆಯುತ್ತಿತ್ತು. ತುಂಬ ದುಃಸ್ಥಿತಿಯಲ್ಲಿದ್ದ, ಅಂಚಿಗೇ ಬದುಕುವ ಗೌರೀ ಪಾಳ್ಯದ ಬೀಡಿ ಕಟ್ಟುವ ಅಕ್ಕಂದಿರ ಮಧ್ಯೆ 'ದುಡಿಯುವ ಮಹಿಳೆಯರ ಸಮನ್ವಯ ಸಮಿತಿ' ಹೆಸರಿನಲ್ಲಿ ಕೆಲಸ ಮಾಡಲಾಗುತ್ತಿತ್ತು. ಒಮ್ಮೆಯೋ ಎರಡು ಬಾರಿಯೋ ನನ್ನ ಜೊತೆ ಬಂದಾಕೆ ಬಹಳ ಬೇಗ ನನ್ನ ಮೇಲೆಯೇ ಸಂಪೂರ್ಣ ಜವಾಬ್ದಾರಿ ಹೊರಿಸಿ ಕೈ ಬಿಟ್ಟಳು. ಎಂದರೆ ಜೊತೆ ನಿಲ್ಲಲಿಲ್ಲವೆಂದಲ್ಲ. ಪುಟ್ಟ ಮಗು ಅಂಬೆಗಾಲಿಟ್ಟ ಕೂಡಲೇ ಅಮ್ಮ ಅದನ್ನ ಸ್ವತಂತ್ರವಾಗಿ ನಡೆಯಲು ಬಿಡುವಂತೆ ದೂರ ನಿಂತು ಕಾವಲು ಕಾಯುವಂತೆ.

ಪ್ರತಿ ದಿನ ನಾವು ಬದುಕುತ್ತಿದ್ದ ತ್ಯಾಗರಾಜನಗರದಿಂದ ಅವಳಿರುತ್ತಿದ್ದ ಎನ್.ಆರ್. ಕಾಲೋನಿಗೆ ಮೊದಲ ಭೇಟಿ. ಅಲ್ಲಿಂದ ಆ ದಿನ ಮಾಡಬಹುದಾದ ಕೆಲಸದ ಪಟ್ಟಿ ಪಡೆದು ನಡೆದೇ ಚಾಮರಾಜಪೇಟೆಯನ್ನು ಬಳಸಿ ಮೈಸೂರು ರಸ್ತೆಯಲ್ಲಿರುವ ಗೌರಿ ಪಾಳ್ಯಕ್ಕೆ ಹೋಗುವುದಾಗಿತ್ತು, ಅಲ್ಲಿ ಆ ಮಹಿಳೆಯರ ತೀರದ ಬವಣೆಯ ಬೀಡಿ ಸಮಸ್ಯೆಗಳಿಗೆ ಕಿವಿಯಾಗುತ್ತ, ಪರಿಹಾರಕ್ಕೆ ಅಗತ್ಯವಾದ ಹೋರಾಟಗಳಿಗೆ ಅವರನ್ನು ಸಿದ್ಧಪಡಿಸುತ್ತ, ಕೆಲವೊಮ್ಮೆ ತಬ್ಬಿಬ್ಬಾಗುತ್ತ ಕೆಲಸ ನಿಭಾಯಿಸುವುದಿತ್ತು. ಸಂಜೆ ಸಾಮಾನ್ಯವಾಗಿ ಸಮುದಾಯದ ಯಾವುದೋ ನಾಟಕದ ತಾಲೀಮು, ವಾರ್ತಾಪತ್ರದ ಕೆಲಸ ಹೀಗೆ ಮಗ್ನಳಾಗಿರುತ್ತಿದ್ದ ಆಕೆಯ ಜೊತೆ ಅಂದಿನ ಕೆಲಸದ ಸಾರ್ಥಕತೆ, ಸಂಕಟ ಸಮಸ್ಯೆ ಹಂಚಿಕೊಂಡರಷ್ಟೇ ಸಮಾಧಾನ. ಇಡೀ ದಿನ ತಿನ್ನಲೂ ಏನೂ ಇಲ್ಲದೇ ಬಳಲಿ ಬಸವಳಿದು ಬರುತ್ತಿದ್ದ ನನಗೆ ಆಕೆ ಕೊಡುತ್ತಿದ್ದ ಚೂರೋ ಪಾರೋ ತಿಂಡಿ, ಒಂದು ಚಹಾ ಅಮೃತಕ್ಕೆ ಸಮಾನವಾಗಿರುತ್ತಿತ್ತು. ಹಾಗೆ ನನ್ನನ್ನು ಸಂಘಟನೆಗೆ ಇಳಿಸಿದ ಆಕೆ ಇನ್ನಿಲ್ಲ.

ರಂಗಭೂಮಿಯ ಸಂದರ್ಭದಲ್ಲಿ ಅವಳದೊಂದು ಬಗೆ. ಒಳ್ಳೆಯ ನಟಿ, ಸಾಮಾಜಿಕ ಬದ್ಧತೆಯನ್ನು ಹೊಂದಿ ನೇರ ನಿಷ್ಠುರ ಮಾತುಗಳು ಆಕೆಯದು. ಸಮುದಾಯ ಸಂಘಟನೆಯ ಹಲವು ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದವಳು. ಸಮುದಾಯಕ್ಕೆ ಅವಳ ಸೇವೆ ಅನುಪಮವಾದದ್ದು. ರಂಗಭೂಮಿಯ ಜೊತೆಗಿನ ಆಕೆಯ ನಂಟು ಯಾವತ್ತಿಗೂ ಕಡಿಯಲೇ ಇಲ್ಲ. ನಿರಂತರವಾಗಿ ರಂಗಭೂಮಿಗೆ ಸಂಬಂಧಿಸಿದಂತೆ ಕಾರ್ಯಾಗಾರಗಳು, ನಾಟಕ ರಚನೆ ನಿರ್ದೇಶನಗಳನ್ನು ಮಾಡುತ್ತಲೇ ಇದ್ದ ಜೀವ ರಂಗಭೂಮಿಯ ಗೀಳಿನ ಜೊತೆಗೇ ಅಕಾಲಿಕವಾಗಿ ಇನ್ನಿಲ್ಲವಾಯಿತು.

ಬಾಲ್ಯದಿಂದಲೇ ಆಕೆಗೆ ಹಲವು ರೀತಿಯ ಆಸಕ್ತಿಗಳು. ಸಿತಾರ್ ಕಲಿಯುತ್ತಿದ್ದ, ಪುಸ್ತಕ ಓದುವ ಗೀಳು ಹಚ್ಚಿಕೊಂಡಿದ್ದ ಆಕೆ ಬಿ.ಕಾಂ.ಪದವಿಯಲ್ಲಿ ಪ್ರಥಮ ರ್‍ಯಾಂಕ್ ಬಂದಿದ್ದರೆಂದು ನನ್ನ ನೆನಪು. ಆವರು ಕಾಲೇಜಿಗೆ ಹೋಗುವಾಗ ಹುಡುಗಿಯರು ಕಾಲೇಜು ಓದುವುದು ನಮ್ಮೂರ ಕಡೆ ಅಷ್ಟೊಂದು ಸಹಜ ಸಂಗತಿಯಾಗಿರಲಿಲ್ಲ. ಅಲ್ಲಿಯೂ ಪ್ರತಿರೋಧದ ಮೂಲಕವೇ ಮತ್ತು ತಾನು ಇಷ್ಟ ಪಟ್ಟ ವ್ಯಕ್ತಿಯ ಜೊತೆ ಬಾಳು ಹಂಚಿಕೊಳ್ಳುವಾಗಲೂ ಮನೆಯವರ ವಿರೋಧದ ನಡುವೆಯೇ ಆಗಿದ್ದಳು. ಹಲವು ಗೀಳುಗಳ ಕನಸುಗಾರ್ತಿ ಸಂಶೋಧನೆಯಲ್ಲಿಯೂ ಆಸಕ್ತಿ ಹೊಂದಿ ಮೈಸೂರು ವಿಶ್ವವಿದ್ಯಾಲಯದಲ್ಲಿ ನೊಂದಾಯಿಸಿಕೊಂಡಿದ್ದಳಾದರೂ ಇತರ ಆಸಕ್ತಿಗಳಿಗೇ ಸಮಯ ಸಾಲದೇ ಅದನ್ನು ಪೂರ್ಣಗೊಳಿಸಲಿಲ್ಲ. ಆದರೆ ಆಕೆಯ ವಿಭಿನ್ನ ಪ್ರತಿಭೆಗಳಿಗೆ ಸಂಶೋಧನೆಯನ್ನು ಪೂರ್ಣಗೊಳಿಸದಿರುವುದು ಯಾವ ಅಡ್ಡಿಯನ್ನೂ ಉಂಟುಮಾಡಲಿಲ್ಲ.

ಎಡ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಪ್ರಾರಂಭದ ಘಟ್ಟದಲ್ಲಿ ಆಕೆ ನೀಡಿದ ಪ್ರೇರಣೆ, ಪ್ರೋತ್ಸಾಹ, ಮಾರ್ಗದರ್ಶನ ನನಗೆಂದೆಂದೂ ಹಸಿರೇ.

ವಿಮಲಾ .ಕೆ.ಎಸ್

➡ ಇದಾದ ನಂತರ ಸಾಮಾಜಿಕ ಹೋರಾಟಗಾರ ಮುನಿ ವೆಂಕಟಪ್ಪ, ಜನವಾದಿ ಮಹಿಳಾ ಸಂಘಟನೆ, ಕರ್ನಾಟಕ ಪ್ರಾಂತ ರೈತ ಸಂಘ, ಸ್ವಾಸ್ಥ ಸಮೃದ್ಧಿ ಸಂಸ್ಥೆ ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಈ ಸಂಘಟನೆಗಳ ಮುಖಂಡರುಗಳಾದ ಬಿ.ಎನ್. ಮುನಿಕೃಷ್ಣಪ್ಪ, ಕೆ.ಆರ್.ಮಂಜುಳಾ, ಕೆ.ವಿ. ವೆಂಕಟ ಲಕ್ಷ್ಮಮ, ಎಂ.ಬೃಂದಾ, ಪಾರ್ವತಮ್ಮ, ಚೆನ್ನಮ್ಮ, ಉಮಾ, ಸವಿತಾ, ಶಿವಮ್ಮ, ಒಳಗೊಂಡಂತೆ ವಿವಿಧ ಸಂಘಟನೆಗಳ ಮುಖಂಡರು ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ ಜಿಲ್ಲಾಧಿಕಾರಿ ಅನಿರುದ್ಧ ಶ್ರವಣ್ ರವರಿಗೆ ಮನವಿ ಪತ್ರ ಸಲ್ಲಿಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಮನವಿ ಸಲ್ಲಿಸಿದರು. ●

ರಂಗಕರ್ಮಿ ಎಸ್. ಮಾಲತಿಯವರಿಗೆ ಸಮುದಾಯ ಕರ್ನಾಟಕದ ಶ್ರದ್ಧಾಂಜಲಿ

ಎಸ್. ಮಾಲತಿ ಆಧುನಿಕ ಕನ್ನಡ ರಂಗಭೂಮಿಯ ಹಿರಿಯಕ್ಕ. ರಂಗಭೂಮಿಗಿರುವ ಸಾಮಾಜಿಕ ಬದ್ಧತೆಯನ್ನು ವ್ರತದಂತೆ ಸ್ವೀಕರಿಸಿದ್ದರು. ಅವರು ಸಮುದಾಯ ಸಂಘಟನೆಯಲ್ಲಿ ಮೌಲಿಕವಾದ ಸೇವೆಸಲ್ಲಿಸಿದ್ದರು. ಅಂದಿನಿಂದಲೂ ಅವರ ಪತ್ರಿಕಾ ಬರವಣಿಗೆ, ನಾಟಕ ರಚನೆ, ರಂಗಕೃತಿ ನಿರೂಪಣೆ, ತರಬೇತಿ ಸಂಘಟನೆ ಎಲ್ಲದರಲ್ಲಿಯೂ ಈ ಸಮೂಹಧ್ಯಾನ ನಿರಂತರವಾಗಿತ್ತು. ರಂಗಭೂಮಿಯ ಸೌಂದರ್ಯಶಾಸ್ತ್ರದಲ್ಲಿ ಯಾವೆಲ್ಲ ಬದಲಾವಣೆಗಳಾಗಿದ್ದರೂ ಅವರ ಗಮನ ಕೇವಲ ಅವರು ತಾವು ನಂಬಿದ ಸಿದ್ಧಾಂತ ಮತ್ತು ಸಮಾಜನಿಷ್ಠ ಕ್ರಿಯೆಗೆ ಆತುಕೊಂಡಿರುವದರಲ್ಲಿತ್ತು. ನೇರ ನಿಷ್ಠುರ ಮಾತುಗಳು ಅವರು ನಿರ್ವಹಿಸುವ ಕಾರ್ಯದ ವಿಧಾನಗಳಲ್ಲಿಯೇ ಒಂದಾಗಿತ್ತು. ಪ್ರಭುತ್ವದ ದಮನಕಾರಿ ನಿಲುವುಗಳ ಕುರಿತು ಕೊನೆಯಗಾಲದವರೆಗೂ ಅವರ ಕಣ್ಣು ಕೆಂಪಗಾಗಿಯೇ ಇತ್ತು. ಅದೇ ಕಾಲಕ್ಕೆ ಅತ್ಯಂತ ಮಾರ್ದವತೆಯಿಂದ ಸಹಜೀವಿಗಳನ್ನು ಗೌರವಿಸುವ, ಸದಾಕಾಲ ಸ್ನೇಹ ಬಳಗವನ್ನು ಸಂಭ್ರಮಿಸುವ ಮನಸ್ಸು ಅವರದು. ಸಮುದಾಯ ಅವರನ್ನು ತುಂಬ ಗೌರವಪೂರ್ವಕವಾಗಿ ನೆನೆಯುತ್ತದೆ.

ಅಧ್ಯಕ್ಷರು ಕಾರ್ಯದರ್ಶಿ
ಸಮುದಾಯ ಕರ್ನಾಟಕ, ಬೆಂಗಳೂರು



'ಅಭಿವೃದ್ಧಿ ಮುಖ ಕಾಣದ ಕಟ್ಟಕಡೆಯ ಸಮಾಜ'

ಪ್ರಭುತ್ವಕ್ಕೆ ಜನರ ಒಡಲು ತುಂಬುವ ರಾಜಕೀಯ ಇಚ್ಛಾಶಕ್ತಿ ಇರಬೇಕೇ ಹೊರತು ಧಾರ್ಮಿಕ, ಭಕ್ತಿಯ ನೆಲೆಗಳ ಬಗ್ಗೆ ಪ್ರಭುತ್ವ ತಲೆ ಕೆಡಿಸಿಕೊಳ್ಳಬಾರದು' ಎಂದು ಸಾಮಾಜಿಕ ಹೋರಾಟಗಾರ್ತಿ ಕೆ. ನೀಲಾ ತಿಳಿಸಿದರು.

ಇಲ್ಲಿನ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಬುಧವಾರ ಅಭಿವೃದ್ಧಿ ಅಧ್ಯಯನ ವಿಭಾಗದಿಂದ ಹಮ್ಮಿಕೊಂಡಿದ್ದ 'ಹೈದರಾಬಾದ್–ಕರ್ನಾಟಕ ಪ್ರದೇಶದಲ್ಲಿ ಸಾಮಾಜಿಕ ಅಭಿವೃದ್ಧಿಗೆ ಇರುವ ಸವಾಲುಗಳು' ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

'ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಕೆಲಸ ಮಾಡುತ್ತಿರುವ ನಾನು ಅನೇಕ ಹಳ್ಳಿಗಳನ್ನು ಸುತ್ತಿದ್ದೇನೆ. ಅಂಚಿನಲ್ಲಿರುವ ಅನೇಕ ಸಮುದಾಯಗಳಿಗೆ ಅಭಿವೃದ್ಧಿಯ ಬಗ್ಗೆ ಏನೂ ಗೊತ್ತಿಲ್ಲ. ಇವತ್ತಿಗೂ ಮಹಿಳೆಯರಿಗೆ, ದಲಿತರಿಗೆ, ಗ್ರಾಮ ಪಂಚಾಯಿತಿಯ ಕುರ್ಚಿಯಲ್ಲಿ ಕುಳಿತು ಕೊಳ್ಳುವ ಧೈರ್ಯ ಬಂದಿಲ್ಲ' ಎಂದು ಹೇಳಿದರು.

'ಈ ಪ್ರದೇಶದವರ ತಲಾ ಆದಾಯ ರೂ. 50 ರೂಪಾಯಿಗಿಂತ ಕಡಿಮೆ ಇದೆ. ಕೃಷಿ ಕುರಿತು ರಾಷ್ಟ್ರೀಯ ನೀತಿ ಇಲ್ಲವಾದ್ದರಿಂದ ಕೃಷಿಯು ಬಹುರಾಷ್ಟ್ರೀಯ ಕಂಪನಿಗಳ ಪಾಲಾಗುತ್ತಿದೆ. ಜಾಗತಿಕ ಮಟ್ಟದ

ಲ್ಲಿರುವ ವಲಸೆಗಿಂತ ಸ್ಥಳೀಯ ಮಟ್ಟದ ವಲಸೆ ಈ ಭಾಗದ ಮಹಿಳೆಯರನ್ನು ಬಹುವಾಗಿ ಕಾಡುತ್ತಿದೆ. ಮಹಿಳೆಯರು ಹೊಟ್ಟೆಪಾಡಿಗಾಗಿ ವಲಸೆ ಹೋಗುತ್ತಾರೆನ್ನುವುದು ಬಹಳ ಗಂಭೀರವಾದ ವಿಷಯ' ಎಂದು ಕಳವಳ ವ್ಯಕ್ತಪಡಿಸಿದರು.

'ಹೈದರಾಬಾದ್–ಕರ್ನಾಟಕ ಪ್ರದೇಶದ ಉನ್ನತ ಶಿಕ್ಷಣದ ಅಭಿವೃದ್ಧಿಗೆ ಇರುವ ಸವಾಲುಗಳು –ಸಾಧ್ಯತೆಗಳು' ಕುರಿತು ಮಾತನಾಡಿದ ಸಾಮಾಜಿಕ ಹೋರಾಟಗಾರ ರಜಾಕ್ ಉಸ್ತಾದ್, 'ದೇಶದಲ್ಲಿ ಉನ್ನತ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆ ಶೇ 24ರಷ್ಟಿದೆ. ರಾಜ್ಯದಲ್ಲಿ ಶೇ 27ರಷ್ಟು ಇದೆ. ಅದರಲ್ಲೂ ಹೈದರಾಬಾದ್–ಕರ್ನಾಟಕ ಪ್ರದೇಶದಲ್ಲಿ ಶೇ 10.14ರಷ್ಟಿದೆ. ಕಾಡುವ ಬಡತನ ಮತ್ತು ಸೌಲಭ್ಯಗಳ ಕೊರತೆ ಇದಕ್ಕೆ ಕಾರಣವಾಗಿದೆ' ಎಂದು ಮಾಹಿತಿ ನೀಡಿದರು.

'ಈ ಭಾಗದಲ್ಲಿ ಒಟ್ಟು 67 ಪದವಿ ಕಾಲೇಜುಗಳಿದ್ದು 890 ಮಂಜೂರಾದ ಹುದ್ದೆಗಳಿವೆ. 78 ಹುದ್ದೆಗಳು ಖಾಲಿ ಇವೆ. ಈ ಹುದ್ದೆಗಳಲ್ಲಿ ಅರೆಕಾಲಿಕ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಾರೆ. ನೆಲದ ಮೇಲೆ ಕುಳಿತು ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ಇಂದಿಗೂ ಇದ್ದಾರೆ. ಹೈದರಾಬಾದ್–ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅಭಿವೃದ್ಧಿ ಕುರಿತ ಪರಿಕಲ್ಪನೆಯೇ ಸರಿಯಾಗಿಲ್ಲ. ರಸ್ತೆ ಕಾಮಗಾರಿ, ಕಟ್ಟಡ ಕಾಮಗಾರಿ, ಅಭಿವೃದ್ಧಿ ಎಂದು ಭಾವಿಸಿದೆ' ಎಂದರು.

'ಕಾನೂನು ಮಾಡುವವರ, ಅನುಷ್ಠಾನಗೊಳಿಸುವವರ ಹಾಗೂ ಫಲಾನುಭವಿಗಳ ನಡುವೆ ಸಂಪರ್ಕವೇ ಇಲ್ಲ' ಎಂದರು. ಕುಲಪತಿ ಪ್ರೊ.ಸ.ಚಿ. ರಮೇಶ ಮಾತನಾಡಿದರು. ವಿಭಾಗದ ಮುಖ್ಯಸ್ಥರಾದ ಜನಾರ್ದನ, ಪ್ರಾಧ್ಯಾಪಕ ಎಚ್.ಡಿ.ಪ್ರಶಾಂತ್, ಸಹಾಯಕ ಪ್ರಾಧ್ಯಾಪಕಿ ಕೆ. ಗೀತಮ್ಮ ಇದ್ದರು. ●

ಹಣ, ಆಸ್ತಿ, ಸಂಪತ್ತು, ಅಧಿಕಾರ, ಪದವಿ ಮುಂತಾದುವೆಲ್ಲಾ ಭ್ರಷ್ಟ ವಿಧಾನಗಳಿಂದ ದೊರೆಯಲಿ, ಅಥವಾ ನ್ಯಾಯಮಾರ್ಗಗಳಿಂದ ಬಂದಿರಲಿ ಅವುಗಳಲ್ಲಿ ಅಡಕವಾಗಿರುವ ಮೌಲ್ಯಗಳು ಮಾತ್ರ ಜನಸಮುದಾಯದ ಸಾಮಾಜಿಕ ಶ್ರಮದಿಂದಲೇ ಹುಟ್ಟಿದವುಗಳು. ಆದ್ದರಿಂದ ವಾಸ್ತವವಾದವುಗಳು. ಆ ಮೌಲ್ಯಗಳು ವ್ಯಕ್ತಿಗಳ ಜೇಬಿನಲ್ಲಿರಲಿ, ಅಥವಾ ಜೋಳಿಗೆ, ಚೀಲ, ಫಂಡು, ನಿಧಿಗಳಲ್ಲಿರಲಿ ಅವುಗಳ ಮೌಲ್ಯವು ಜನಸಾಮಾನ್ಯರ ಶ್ರಮದಿಂದಲೇ ಹುಟ್ಟಿದವುಗಳು. ಆದ್ದರಿಂದ ಜನರಿಗೇ ಸೇರಿದವುಗಳು. ಆದ್ದರಿಂದ ಭ್ರಷ್ಟತೆ ಎಂಬುದು ನಿರ್ವಾತದಲ್ಲಿರುವ ನೈತಿಕ ಅಪಮೌಲ್ಯವಲ್ಲ. ಜನರ ದುಡಿಮೆಯಲ್ಲಿ, ಅವರ ಆರ್ಥಿಕ ಸಂಬಂಧಗಳಲ್ಲಿ, ಸಾಮಾಜಿಕ ನೆಲೆಗಳಲ್ಲಿ ಅವರಿಗೆ ನ್ಯಾಯವಾಗಿ ಸಲ್ಲಬೇಕಾದ ಮೌಲ್ಯಗಳ ಲಪಟಾವಣೆಯೇ ಭ್ರಷ್ಟತೆ.

ಅತಿಥಿ ಅಂಕಣ



ಪ್ರೊ.ವಿ.ಎನ್.ಲಕ್ಷ್ಮೀನಾರಾಯಣ, ಮೈಸೂರು

ಜೇಬು ಜೋಳಿಗೆ ಮತ್ತು ಸನಾತನ ಭ್ರಷ್ಟಾಚಾರ



2019 ರ ಚುನಾವಣಾ ಪ್ರಚಾರಗಳಲ್ಲಿ ಅವರ ಪರಸ್ಪರ ಕೆಸರಾಟಗಳ ನಡುವೆ ಆಗಾಗ ಪ್ರಸ್ತಾಪವಾಗುತ್ತಿರುವ ಪ್ರಶ್ನೆ: ಆಳುವ ಪಕ್ಷ ಮತ್ತು ವಿಪಕ್ಷಗಳಲ್ಲಿ ಯಾರು ಭ್ರಷ್ಟರು, ಯಾರಲ್ಲ? ಅಥವಾ ಅವರಲ್ಲಿ ಯಾರು ಹೆಚ್ಚು ಭ್ರಷ್ಟರು, ಯಾರು ಕಡಿಮೆ ಭ್ರಷ್ಟರು? ಈ ವಿವಾದವು, ಉಳಿದ ಸಂಗತಿಗಳ ನಡುವೆಯೇ ಕೆಲವು ಮುಖ್ಯ ಪ್ರಶ್ನೆಗಳನ್ನು ಕೇಳುವಂತೆ ಪ್ರೇರೇಪಿಸುತ್ತದೆ. ಒಂದು ಕಡೆ ಕೋಟ್ಯಾಧಿಪತಿಗಳಾದ ಚುನಾವಣಾ ಉಮೇದುವಾರರು ಇದ್ದಾರೆ. ಮತ್ತೊಂದು ಕಡೆ ಎರಡು ಹೊತ್ತಿನ ಊಟಕ್ಕೂ ಪರದಾಡುತ್ತಿರುವ ಜನರು ಇದ್ದಾರೆ. ಕೇಂದ್ರ ಮತ್ತು ರಾಜ್ಯಗಳಲ್ಲಿ ಸರಕಾರ ರಚಿಸಲು ಈ ಕೋಟ್ಯಾಧಿಪತಿಗಳಲ್ಲೇ ಕೆಲವರನ್ನು ತಮ್ಮ ಪ್ರತಿನಿಧಿಗಳೆಂದು ಆರಿಸಿ ಕಳಿಸಿಬೇಕಾದ ಅನಿವಾರ್ಯತೆ ಈ ನಿರುದ್ಯೋಗಿ, ನಿರ್ಗತಿಕ ಅಥವಾ ಅರೆಗತಿಕ ಮತದಾರರ ಹೊಣೆಯಾಗಿದೆ..

ತಮ್ಮ ಗೆಲುವಿಗಾಗಿ ಮತದಾರರನ್ನು ಒಲಿಸಿಕೊಳ್ಳಲು ಎಲ್ಲ ಪಕ್ಷಗಳೂ ಸಾಧ್ಯವಿರುವ ಎಲ್ಲ ಬಗೆಯ ಆಮಿಷಗಳನ್ನು ಬಳಸುತ್ತವೆ ಎಂಬುದು ಎಲ್ಲರಿಗೂ ತಿಳಿದ ವಿಷಯ. ಗೆದ್ದು ಸರಕಾರ ರಚಿಸುವ ಆಳುವ ಪಕ್ಷಗಳು, ಸೋತ ವಿಪಕ್ಷಗಳು ಎಂಬ ಭೇದವಿಲ್ಲದೆ ಎಲ್ಲ ರಾಜಕೀಯ ಪಕ್ಷಗಳೂ ವ್ಯಾಪಾರಿ–ಉದ್ಯಮಿಗಳಿಂದ ದೊಡ್ಡ ಮೊತ್ತದ ಹಣವನ್ನು ದೇಣಿಗೆಯಾಗಿ ಪಡೆಯುತ್ತವೆ ಎಂಬುದೂ ಗೊತ್ತಿರುವ ವಿಷಯವೇ. ಇದಲ್ಲದೆ ಜನಸಾಮಾನ್ಯರಿಂದ ಮೊದಲುಗೊಂಡು ಉದ್ಯಮಪತಿಗಳವರೆಗಿನ ಜನರಿಂದ ವ್ಯಕ್ತಿಗತವಾಗಿ ಮತ್ತು ಸಾಂಸ್ಥಿಕವಾಗಿ ಲಂಚದ ರೂಪದಲ್ಲಿ ಅಗಾಧ ಮೊತ್ತದ ಹಣವನ್ನು ಅಧಿಕಾರಿಗಳ ಮೂಲಕ ಈ ಪಕ್ಷಗಳ ಜನರು ಸಂಗ್ರಹಿಸುತ್ತಾರೆ ಎಂಬುದೂ ಸಹ ಎಲ್ಲರ ಅನುಭವಕ್ಕೆ ದಕ್ಕುವ ವಿಷಯ. ಹೀಗಿರುವಾಗ ಯಾವ ಮಾನದಂಡಗಳನ್ನು ಬಳಸಿ ಒಂದು ನಿರ್ದಿಷ್ಟ ಪಕ್ಷವನ್ನು ಮಾತ್ರ ಭ್ರಷ್ಟಾಚಾರದಲ್ಲಿ ತೊಡಗಿದ ಪಕ್ಷವೆಂದು, ಇನ್ನೊಂದನ್ನು ಅಲ್ಲ ಎಂದು ಅನೇಕರು ತಮ್ಮ ಲೇಖನ – ಅಂಕಣಗಳಲ್ಲಿ ಚಿತ್ರಿಸುತ್ತಾರೆ ಎಂಬುದು ಗೊತ್ತಾಗುವುದಿಲ್ಲ.

ಇಲ್ಲಿರುವ ಮುಖ್ಯಪ್ರಶ್ನೆ ಆಳುವ ಪಕ್ಷ – ವಿಪಕ್ಷಗಳು ಸಂಗ್ರಹಿಸಿ ಬಳಸುವ ಹಣವು ಯಾವಾಗ ಭ್ರಷ್ಟ, ಯಾವಾಗ ಅಭ್ರಷ್ಟ ಎನಿಸುತ್ತದೆ? ಮತ್ತು ಈ ಕೋಟ್ಯಾಧಿಪತಿ ರಾಜಕಾರಣಿಗಳು ಸಂಗ್ರಹಿಸುವ ಹಣ, ಸಂಪತ್ತು ಮತ್ತು ವಿಶೇಷ ಸೌಲಭ್ಯಗಳ ಮೌಲ್ಯವನ್ನು ಉತ್ಪಾದಿಸುತ್ತಿರುವವರು ಯಾರು?


ಬದುಕಿನ ಜೀವನಾಧಾರ ವಸ್ತುಗಳು, ಅವುಗಳ ಮೌಲ್ಯವನ್ನು ಪ್ರತಿನಿಧಿಸುವ ಚಿನ್ನ, ಬೆಳ್ಳಿಗಳು ಮತ್ತು ಅವುಗಳ ನಾಣ್ಯ–ನೋಟು ರೂಪಗಳ ಹಣವು ಆಕಾಶದಿಂದೇನೂ ಉದುರುವುದಿಲ್ಲ. ಅವೆಲ್ಲವೂ ಜನಸಮುದಾಯದ ಶ್ರಮಗಳಿಂದ ಸೃಷ್ಟಿಯಾಗಿ ವ್ಯಾಪಾರ–ವ್ಯವಹಾರಗಳ ಮೂಲಕ ಕೆಲವರಲ್ಲಿ ಅತಿಯಾಗಿ, ಮತ್ತೆ ಕೆಲವರಲ್ಲಿ ವಿರಳವಾಗಿ ಶೇಖರಣೆಗೊಳ್ಳುತ್ತವೆ. ಇವು ಕಾನೂನುಬದ್ಧವಾಗಿ, ಪಾರದರ್ಶಕವಾಗಿ, ಲೆಕ್ಕಕ್ಕೆ ಸಿಗುವಂತೆ ಜನರ ಕೈ ಬದಲಾಯಿಸಿದಾಗ ನ್ಯಾಯವಾದ ಆದಾಯಗಳೆಂದೂ, ಹಾಗಿಲ್ಲದೆ ಜನಸಾಮಾನ್ಯರ ಗಮನಕ್ಕೆ ಬಾರದಂತೆ, ಅಪಾರದರ್ಶಕ – ಒಳದಾರಿಗಳಲ್ಲಿ ಕೈ ಬದಲಾಯಿಸಿದಾಗ ಭ್ರಷ್ಟ ಆದಾಯಗಳೆಂದೂ, ಹಣದ ರೂಪದಲ್ಲಿ ಕೈಬದಲಾಯಿಸಿದರೆ, ಭ್ರಷ್ಟ ಹಣವೆಂದೂ ಕರೆಸಿಕೊಳ್ಳುತ್ತವೆ.

ವ್ಯಕ್ತಿಗಳು ಸಂಗ್ರಹಿಸುವ ಆಸ್ತಿ, ಹಣ ಇತ್ಯಾದಿಗಳು ಭ್ರಷ್ಟವೋ, ಅಲ್ಲವೋ ಎಂದು ನಿರ್ಧರಿಸಲು ಬೇಕಾದಷ್ಟು ಕಾನೂನುಬದ್ಧ ಕ್ರಮಗಳಿವೆ. ಆದರೆ ಸಂಸ್ಥೆಗಳು, ಅದರಲ್ಲೂ ರಾಜಕೀಯ ಪಕ್ಷಗಳು ಸಂಗ್ರಹಿಸುವ ಆಸ್ತಿ–ಹಣ ಇತ್ಯಾದಿಗಳು ಭ್ರಷ್ಟ ಹೌದೋ ಅಲ್ಲವೋ ಎಂದು ನಿರ್ಧರಿಸುವುದು ಕಷ್ಟಸಾಧ್ಯ, ಕೆಲವೊಮ್ಮೆ ಅಸಾಧ್ಯವೂ ಹೌದು. ಇದಕ್ಕಿರುವ ಮುಖ್ಯ ಕಾರಣಗಳು ಎರಡು: ಒಂದು, ಒಂದು ರಾಜಕೀಯ ಪಕ್ಷವು ಆಳುವ ಪಕ್ಷವಾಗಿ ಸರಕಾರ ರಚಿಸಿದಾಗ, ಅಥವಾ ಆಳುವ ಪಕ್ಷಗಳ ಕೂಟದಲ್ಲಿ ಸೇರಿದ್ದಾಗ, ಅಥವಾ ಆಳುವ ಪಕ್ಷಕ್ಕೆ ನಿಕಟವಾಗಿದ್ದಾಗ ಅಂಥ ಪಕ್ಷವು ಎಂದಿಗೂ ತನ್ನ ವಿರುದ್ಧ, ತನ್ನ ಪಕ್ಷದ ಜನರ ವಿರುದ್ಧ ಭ್ರಷ್ಟಾಚಾರ ಸಂಬಂಧಿ ಕಾನೂನು ಕ್ರಮಗಳನ್ನು ಕೈಗೊಳ್ಳುವುದಿಲ್ಲ. ಜನರ ಕಣ್ಣೊರೆಸಲು ಕ್ರಮ ಕೈಗೊಂಡಂತೆ ಮಾಡಬಹುದು. ಅಥವಾ ಸಹಪಕ್ಷಗಳ, ಸದಸ್ಯರನ್ನು ತಮಗೆ ಬೇಕಾದಂತೆ ನಿಯಂತ್ರಿಸಲು ಭ್ರಷ್ಟಾಚಾರ ವಿರೋಧೀ ಕಾನೂನುಗಳನ್ನು ಬಳಸಬಹುದು, ಅಷ್ಟೆ, ಒಂದುವೇಳೆ ಕಾನೂನಿನ ಕೈಗೆ ಸಿಕ್ಕಿಕೊಂಡರೂ, ಭ್ರಷ್ಟವಿಧಾನಗಳನ್ನೇ ಬಳಸಿ ಶಿಕ್ಷೆಯಿಂದ ಪಾರಾಗಬಹುದು. ಒಂದು ಸಲ ವಿಪಕ್ಷವಾಗಿದ್ದು ಮತ್ತೊಂದು ಸಲ ಆಳುವ ಪಕ್ಷವಾಗುವ ಎಲ್ಲ ಪಕ್ಷಗಳೂ, ಅವು ಕೇಂದ್ರದಲ್ಲಿ ಸರಕಾರ ರಚಿಸಲಿ, ಅಥವಾ ರಾಜ್ಯಸರಕಾರವಾಗಿ ಜನಸಾಮಾನ್ಯರನ್ನು ಆಳುತ್ತಿರಲಿ ಅವೂ ಸಹ ಮಾಡುವುದು ಇದನ್ನೇ.

ಹೀಗಾಗಿ, ರಾಜಕೀಯವಾಗಿ ಮಾತ್ರ ಪ್ರಜಾಪ್ರಭುತ್ವ ಎಂದು ಕರೆಸಿಕೊಳ್ಳುವ ಭಾರತದ ರಾಜಕೀಯದಲ್ಲಿ ಭ್ರಷ್ಟಾಚಾರವು ಅನಿವಾರ್ಯವೂ, ಅಪರಿಹಾರ್ಯವೂ ಆದ ವಿದ್ಯಮಾನವಾಗಿ ಉಳಿದುಕೊಂಡಿದೆ. ತಾವೇ ಆರಿಸಿ ಕಳಿಸುವ ಜನಪ್ರತಿನಿಧಿಗಳ ಮೇಲೆ, ಸರಕಾರದ ಮೇಲೆ, ಯಾವ ನಿಯಂತ್ರಣವನ್ನೂ ಹೊಂದಿರದ ಜನಸಾಮಾನ್ಯರು ನಿಸ್ಸಹಾಯಕರು. ಹೆಚ್ಚೆಂದರೆ, ಒಮ್ಮೆ ಆಳುವ ಪಕ್ಷ, ಇನ್ನೊಮ್ಮೆ ವಿಪಕ್ಷವಾಗುವ ಪಕ್ಷಗಳ ಭ್ರಷ್ಟಾಚಾರದ ಬಗ್ಗೆ ಚುನಾವಣೆಯ ಸಂದರ್ಭಗಳಲ್ಲಿ, ಪತ್ರಿಕೆಗಳಲ್ಲಿ ಪ್ರಕಟವಾಗುವ ಅಂಕಣ ಬರಹಗಳನ್ನು ಓದಿ ತೃಪ್ತಿಪಡಬಹುದು ಅಥವಾ ಸಂಕಟಪಡಬಹುದು ಅಷ್ಟೆ.

ಭ್ರಷ್ಟಾಚಾರವನ್ನು ಗುರುತಿಸುವುದು ಕಷ್ಟ, ಅಥವಾ ಅಸಾಧ್ಯ ಎಂದೆನಿಸಲು ಇರುವ ಎರಡನೆಯ ಮುಖ್ಯಕಾರಣ: ಉದ್ಯಮಿಗಳಿಂದ ದೇಣಿಗೆಯಾಗಿ ಪಡೆದ ಭ್ರಷ್ಟ ಆಸ್ತಿ ಮತ್ತು ಹಣಕ್ಕೆ ಪಕ್ಷದ ನಿಧಿ ಎಂಬ ಹೆಸರು ಕೊಟ್ಟು ತಾಂತ್ರಿಕವಾಗಿ ಕಾನೂನು ಸಮ್ಮತ ಎಂದು ಬಿಂಬಿಸುವುದು. ಜನಸಾಮಾನ್ಯರಿಂದ ದೇಣಿಗೆಯಾಗಿ ಪಡೆದ ಅಗಾಧ ಹಣವನ್ನು 'ಧಾರ್ಮಿಕ ಸಂಸ್ಥೆಗಳ ನಿಧಿ' ಎಂದು ಹೆಸರಿಸಿ ಭ್ರಷ್ಟಾಚಾರ ಕಾಯಿದೆಯನ್ನು ಅವುಗಳ ವಿರುದ್ಧ ಬಳಸಲಾಗದಂತೆ ಮಾಡುವುದು.

ದೇಣಿಗೆ ಕೊಡುವ ಸಂಸ್ಥೆ, ಉದ್ಯಮಿ, ವ್ಯಕ್ತಿಗಳು ಈ ಹಿಂದೆ ತಮ್ಮ ಹೆಸರನ್ನು ಬಯಲುಮಾಡುವುದು ಅನಿವಾರ್ಯವಾಗಿತ್ತು. ತಾವು ಕೊಡುವ ದೇಣಿಗೆಯು ಅವರ ಘೋಷಿತ ಆದಾಯದಿಂದ ಕೊಟ್ಟದ್ದಾಗಿರಬೇಕಿತ್ತು. ಅವರು ಕೊಡಬಹುದಾದ ದೇಣಿಗೆಗೆ ನಿರ್ದಿಷ್ಟ ಮಿತಿ ಇತ್ತು. ಅಂದರೆ ಈ ಬಗೆಯ ದೇಣಿಗೆಯಲ್ಲಿ ಒಂದು ಮಟ್ಟದ ಪಾರದರ್ಶಕತೆ ಇತ್ತು. ಭಾಜಪ ಸರಕಾರ ಬಂದಮೇಲೆ ಬದಲಾದ ನೀತಿಯಂತೆ ದೇಣಿಗೆ ಕೊಡುವವರು ಅನಾಮಧೇಯರಾಗಿರಬಹುದು. ದೇಣಿಗೆಯು ಮಿತಿಯಿಲ್ಲದೆ ಇರಬಹುದು. ಅದು ಘೋಷಿತ ಆದಾಯದಿಂದಲೇ ಬಂದಿರಬೇಕೆಂದೇನೂ ಇಲ್ಲ. ಅಂದರೆ ಭ್ರಷ್ಟ ಹಣವನ್ನು ಭ್ರಷ್ಟ ವ್ಯಕ್ತಿ, ಸಂಸ್ಥೆಗಳು, ಭ್ರಷ್ಟವಿಧಾನದಲ್ಲಿ ಭ್ರಷ್ಟರಿಗೆ ಕೈದಾಟಿಸಬಹುದು. ಇದು ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಸದ್ಯದ ಕಷ್ಟ. ಇಷ್ಟಾದರೂ ನಿಜವಾದ ಈ ಸಮಸ್ಯೆಗಿರುವ ಮುಖ್ಯ ಕಾರಣ ಬೇರೆಯೇ ಆಗಿದೆ.



ಕೃಪೆ: ಸತೀಶ್ ಆಚಾರ್ಯ

ಒಬ್ಬ ವ್ಯಕ್ತಿಯು ಹಣ, ಅಥವಾ ಆಸ್ತಿಯನ್ನು ಮತ್ತೊಬ್ಬ ವ್ಯಕ್ತಿಯ ಜೇಬಿಗೆ ಅಥವಾ ಒಂದು ಸಂಸ್ಥೆಯ ಹೆಸರಿಗೆ ದೇಣಿಗೆಯೆಂದು ಗುಟ್ಟಾಗಿ, ವರ್ಗಾಯಿಸಿದರೆ, ಅಂಥ ವರ್ಗಾವಣೆಯನ್ನು ಪ್ರಸ್ತುತ ಕಾನೂನುಗಳ ಆಧಾರದಿಂದ ಭ್ರಷ್ಟ ವರ್ಗಾವಣೆ ಎನ್ನಲು ಸಾಧ್ಯ. ಆದರೆ ಹಣವನ್ನು ವ್ಯಕ್ತಿಯ ಜೇಬಿನ ಬದಲು ಒಂದು ಸಂಸ್ಥೆಯ ಜೋಳಿಗೆಗೆ, ಹುಂಡಿಗೆ ಹಾಕಿದರೆ, ಹಾಗೆ ಹಾಕಿದ ಹಣವನ್ನು ಸ್ವಂತಕ್ಕೆ ಖರ್ಚುಮಾಡಿಕೊಂಡರೆ ಅದನ್ನು ಭ್ರಷ್ಟಾಚಾರವೆನ್ನುತ್ತಾರೆಯೆ? ಹಾಗೆಯೇ ಒಂದು ಪಕ್ಷದ, ಮಠದ ಹೆಸರಿಗೆ ಗುಟ್ಟಾಗಿ, ಅಥವಾ ಬಹಿರಂಗವಾಗಿ, ಒಬ್ಬರ ಹೆಸರಿನಿಂದ ಅಥವಾ ಅನಾಮಧೇಯವಾಗಿ ವರ್ಗಾಯಿಸಿದರೆ ಅಂಥ ಹಣದ, ಆಸ್ತಿಯ, ವರ್ಗಾವಣೆಯನ್ನು ಭ್ರಷ್ಟಾಚಾರವೆನ್ನಲು ಏನು ಅಡ್ಡಿ?

ಈ ಪ್ರಶ್ನೆಗೆ ಸಿಗುವ ಉತ್ತರದಲ್ಲಿ ದೇಣಿಗೆಯ ಚೀಲ, ಮಠ–ಮಾನ್ಯಗಳ ಜೋಳಿಗೆ, ಹಣದ ಹುಂಡಿ ಮತ್ತು ರಾಜಕೀಯ ಪಕ್ಷಗಳ ನಿಧಿಯಲ್ಲಿ ಮುಖಮರೆಸಿಕೊಂಡಿರುವ ಭಾರತದ ಸನಾತನ ಭ್ರಷ್ಟಾಚಾರ ಇದೆ.

ಭ್ರಷ್ಟ ವ್ಯಕ್ತಿಗಳು ತಮ್ಮ ಭ್ರಷ್ಟ ಜೇಬುಗಳಿಂದ ಹಣ ತೆಗೆದು ಖರ್ಚುಮಾಡಿದರೆ, ಆ ಖರ್ಚುಗಳ ಮೂಲಕ ಅವರ ಭ್ರಷ್ಟಾಚಾರವನ್ನು ಗುರುತಿಸುವ ಕಾನೂನುಗಳಿವೆ. ಆದರೆ ಅವೇ ವ್ಯಕ್ತಿಗಳು ದೇಣಿಗೆಯ ಚೀಲದಿಂದ, ದಾನ–ಧರ್ಮದ ಜೋಳಿಗೆ–ಹುಂಡಿಯಿಂದ, ಪಕ್ಷದ ನಿಧಿಯಿಂದ ಪಡೆದ ಹಣವನ್ನು ಖರ್ಚುಮಾಡಿದರೆ, ಅದರ ಮರೆಯಲ್ಲಿರುವ ಭ್ರಷ್ಟಾಚಾರವನ್ನು ಗುರುತಿಸಲು ಯಾವ ಕಾನೂನುಗಳೂ ಇಲ್ಲ.

ಧಾರ್ಮಿಕ ಸಂಸ್ಥೆಗಳು, ರಾಜಕೀಯ ಪಕ್ಷಗಳು, ಅವುಗಳ ಸದಸ್ಯರು, ಅಥವಾ ಪಧಾಧಿಕಾರಿಗಳು ತಮ್ಮಿಂದ ಪಡೆದು ಖರ್ಚುಮಾಡಿದ ಪ್ರತಿಯೊಂದು ಪೈಸೆಗೂ ತಮ್ಮ ಆಂತರಿಕ ಆಡಿಟರ್ ಮೂಲಕ ಲೆಕ್ಕ ಕೇಳುತ್ತವೆ. ಆದರೆ ಅವೇ ಸಂಸ್ಥೆಗಳು, ವಿವಿಧ ಮೂಲಗಳಿಂದ ತಮಗೆ ಬರುವ ಆದಾಯಗಳ ನಿಜವಾದ ಲೆಕ್ಕವನ್ನು ಮಾತ್ರ ಎಲ್ಲೂ ಬಯಲು ಮಾಡುವುದಿಲ್ಲ.

ಭ್ರಷ್ಟ ರಾಜಕಾರಣಿಗಳೊಂದಿಗೆ ನಿಕಟ ಸಂಬಂಧವಿಟ್ಟುಕೊಂಡಿರುವ ಶ್ರೀಮಂತ ಮಠ–ಮಾನ್ಯಗಳು, ಜನಸಾಮಾನ್ಯರಿಂದ ಹನಿ ಹನಿಯಾಗಿ ಹರಿದುಬಂದು ಹಳ್ಳವಾಗಿ ಮಡುಗಟ್ಟುವ ದೇಣಿಗೆಗಳನ್ನು ಪಡೆಯುವ ಧಾರ್ಮಿಕ ಸಂಸ್ಥೆಗಳು, ದೇಶೀಯ–ವಿದೇಶಿ ಅಭಿಮಾನಿ ದೇಣಿಗೆದಾರರಿಂದ ಸೇವೆಯ ಹೆಸರಿನಲ್ಲಿ ಅಗಾಧ ಹಣವನ್ನು ಪಡೆಯುವ 'ಸೇವಾಸಂಸ್ಥೆ'ಗಳು ಮತ್ತು ಉದ್ದಿಮೆದಾರರಿಂದ ಸುಲಿಗೆ–ದೇಣಿಗೆಯ ರೂಪದಲ್ಲಿ ಹಣವನ್ನು ಒಟ್ಟುಹಾಕುವ ರಾಜಕೀಯ ಪಕ್ಷಗಳ ಮುಖ್ಯಸ್ಥರು ತಮ್ಮ ಉತ್ತರಾಧಿಕಾರವನ್ನು ಹೊರಗಿನವರಿಗೆ ಎಂದಿಗೂ ಬಿಟ್ಟುಕೊಡುವುದಿರುವುದು ಈ ಕಾರಣಕ್ಕಾಗಿಯೇ. ಉಳಿದಂತೆ ಎಷ್ಟೇ ಪ್ರಜಾಪ್ರಭುತ್ವವಾದಿಗಳಾದರೂ ಹಣದ ವಿಷಯ ಬಂದಾಗ ಇವರಲ್ಲಿ ಯಾವ

ಪುಟ 14 ಕ್ಕೆ

ವಯ್ನಾಡಿನಲ್ಲಿ ಕಾಂಗ್ರೆಸ್ ತಪ್ಪು ತಿರುವು

ದೂರದೃಷ್ಟಿಯಿಲ್ಲದ ಧೋರಣೆಯಿಂದ ಕಂಟಕ

ವಯ್ನಾಡ್ ನಿರ್ಧಾರ ಕಾಂಗ್ರೆಸ್ ನಾಯಕತ್ವದಲ್ಲಿರುವ ಸೈದ್ಧಾಂತಿಕ ಪರಿಸ್ಥಿತಿ ಮತ್ತು ರಾಜಕೀಯ ಅಸ್ತವ್ಯಸ್ತತೆಯ ಬಗ್ಗೆ ಬಹಳಷ್ಟು ಹೇಳುತ್ತದೆ. ಒಂದು ವಿಶಾಲ ದೃಷ್ಟಿಕೋನ ತಳೆಯುವಲ್ಲಿ ಹಾಗೂ ರಾಷ್ಟ್ರ ಮಟ್ಟದಲ್ಲಿ ಬಿಜೆಪಿಯನ್ನು ಸೋಲಿಸಲು ಎಲ್ಲಾ ಶಕ್ತಿಗಳನ್ನು ಒಗ್ಗೂಡಿಸುವಲ್ಲಿ ಕಾಂಗ್ರೆಸ್‌ನ ಅಸಮರ್ಥತೆಯನ್ನು ಇದು ಸೂಚಿಸುತ್ತದೆ. ದೂರದೃಷ್ಟಿಯಿಲ್ಲದ ಈ ನಿರ್ಧಾರ ಕಾಂಗ್ರೆಸ್‌ಗೆ ಇನ್ನೊಂದು ಅರ್ಥದಲ್ಲೂ ಕಂಟಕವಾಗಲಿದೆ. ಅಲ್ಲದೆ, ವಯ್ನಾಡಿನಲ್ಲಿ ಮುಸ್ಲಿಂ ಲೀಗ್ ಒಂದು ಪ್ರಬಲ ಶಕ್ತಿಯಾಗಿದ್ದು ರಾಹುಲ್ ಗಾಂಧಿ ಯುಡಿಎಫ್‌ನ ಭಾಗವಾಗಿ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ನ ಜಂಟಿ ಅಭ್ಯರ್ಥಿ ಆಗಿರುತ್ತಾರೆ. ಹೀಗಾಗಿ ಅವರು ವಯ್ನಾಡಿನಲ್ಲಿ ಎಡ ಅಭ್ಯರ್ಥಿಯನ್ನು ಪರಾಭವಗೊಳಿಸಲು ಪ್ರಯತ್ನಿಸಲು ಮುಸ್ಲಿಂ ಲೀಗ್‌ಅನ್ನು ಅವಲಂಬಿಸಲಿದ್ದಾರೆ. ಇದು ಕಾಂಗ್ರೆಸ್ ಅಧ್ಯಕ್ಷರನ್ನು ಜಾತ್ಯತೀತರೆಂದು ಪರಿಚಯಿಸುವ ಒಂದು ಜಾಹೀರಾತು ಅಂತೂ ಆಗಲಾರದು.



*** ಪ್ರಕಾಶ್ ಕಾರಟ್**

ಕೇರಳದ ವಯ್ನಾಡ್ ಕ್ಷೇತ್ರದಿಂದ ಎರಡನೇ ಸೀಟಿನಲ್ಲಿ ಸ್ಪರ್ಧೆ ಮಾಡಲು ಕಾಂಗ್ರೆಸ್ ಅಧ್ಯಕ್ಷ ರಾಹುಲ್ ಗಾಂಧಿ ನಿರ್ಧರಿಸಿ ಒಂದು ತಪ್ಪು ತಿರುವನ್ನು ತೆಗೆದುಕೊಂಡಂತಾಗಿದೆ. ಈ ಪ್ರಕಟಣೆ ಮಾಡುವುದಕ್ಕೆ ಹಿರಿಯ ಕಾಂಗ್ರೆಸ್ ನಾಯಕರ ಮುಖ್ಯ ತರ್ಕವೆಂದರೆ ಕಾಂಗ್ರೆಸ್ ಅಧ್ಯಕ್ಷರು ದಕ್ಷಿಣ ಭಾರತದಿಂದ ಕೂಡ ಸ್ಪರ್ಧಿಸುವುದು ಮುಖ್ಯವಾಗುತ್ತದೆ ಎಂಬುದು. ದಕ್ಷಿಣ ರಾಜ್ಯಗಳಲ್ಲಿ ಕೂಡ ಕೋಮುವಾದಿ ವಿಭಜನೆಗೆ ಬಿಜೆಪಿ ಪ್ರಯತ್ನಿಸುತ್ತಿದೆ ಎಂದೂ ಅವರು ಹೇಳಿದ್ದಾರೆ.

ಹಾಗಿದ್ದಲ್ಲಿ ರಾಹುಲ್ ಗಾಂಧಿ ಕರ್ನಾಟಕದ ಯಾವುದಾದರೂ ಒಂದು ಕ್ಷೇತ್ರದಿಂದ ಯಾಕೆ ಸ್ಪರ್ಧಿಸುತ್ತಿಲ್ಲ? ಕರ್ನಾಟಕ ಬಿಜೆಪಿ ದೊಡ್ಡ ಶಕ್ತಿಯಾಗಿರುವ ದಕ್ಷಿಣದ ಏಕೈಕ ರಾಜ್ಯವಾಗಿದ್ದು ಕಳೆದ ಲೋಕಸಭೆ ಚುನಾವಣೆಗಳಲ್ಲಿ ಬಹುಪಾಲು ಕ್ಷೇತ್ರಗಳಲ್ಲಿ ಅದು ಗೆಲವು ಸಾಧಿಸಿತ್ತು. ಪ್ರಸಕ್ತ ಚುನಾವಣೆಗಳಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಮೈತ್ರಿ ಮಾಡಿಕೊಂಡಿವೆ. ಹಾಗಿರುವಾಗ 28 ಕ್ಷೇತ್ರಗಳ ಪೈಕಿ ರಾಹುಲ್ ಸ್ಪರ್ಧೆಗೆ ಯಾವುದೇ ಒಂದು ಕ್ಷೇತ್ರವನ್ನು ಪಡೆಯಲು ಆಗುತ್ತಿರಲಿಲ್ಲವೇ? ಆ ರೀತಿ ಏನಾದರೂ ಮಾಡಿದ್ದಲ್ಲಿ ರಾಹುಲ್ ಗಾಂಧಿ ಬಿಜೆಪಿ ವಿರುದ್ಧ ಅದರಲ್ಲೂ ವಿಶೇಷವಾಗಿ ದಕ್ಷಿಣದ ರಾಜ್ಯದಲ್ಲಿ ಬಿಜೆಪಿ ವಿರುದ್ಧ ಹೋರಾಡುತ್ತಿದ್ದಾರೆ ಎಂಬ ಸಂದೇಶ ರವಾನೆ ಆಗಬಹುದಿತ್ತು.

ಆದರೆ ಅದನ್ನು ಮಾಡಿಲ್ಲ. ಅದರ ಬದಲು ಕಾಂಗ್ರೆಸ್ ಅಧ್ಯಕ್ಷರು ಎಲ್‌ಡಿಎಫ್ ಮುಖ್ಯ ಶಕ್ತಿಯಾಗಿರುವ ಕೇರಳದಿಂದ ಸ್ಪರ್ಧಿಸುತ್ತಿದ್ದಾರೆ. ಎಪ್ರಿಲ್ 4ರಂದು ಅವರು ನಾಮಪತ್ರ ಸಲ್ಲಿಸಿದ್ದಾರೆ. ಹೀಗಾಗಿ, ಬಿಜೆಪಿ ವಿರುದ್ಧ ಸೆಣಸುವ ಬದಲು ಕಾಂಗ್ರೆಸ್ ಗುರಿ ಎಡ ಶಕ್ತಿ ಆಗಿಬಿಟ್ಟಿದೆ.

ವಯ್ನಾಡ್ ನಿರ್ಧಾರ ಕಾಂಗ್ರೆಸ್ ನಾಯಕತ್ವದಲ್ಲಿರುವ ಸೈದ್ಧಾಂತಿಕ ಪರಿಸ್ಥಿತಿ ಮತ್ತು ರಾಜಕೀಯ ಅಸ್ತವ್ಯಸ್ತತೆಯ ಬಗ್ಗೆ ಬಹಳಷ್ಟು ಹೇಳುತ್ತದೆ. ಒಂದು ವಿಶಾಲ ದೃಷ್ಟಿಕೋನ ತಳೆಯುವಲ್ಲಿ ಹಾಗೂ ರಾಷ್ಟ್ರ ಮಟ್ಟದಲ್ಲಿ ಬಿಜೆಪಿಯನ್ನು ಸೋಲಿಸಲು ಎಲ್ಲಾ ಶಕ್ತಿಗಳನ್ನು ಒಗ್ಗೂಡಿಸುವಲ್ಲಿ ಕಾಂಗ್ರೆಸ್‌ನ ಅಸಮರ್ಥತೆಯನ್ನು ಇದು ಸೂಚಿಸುತ್ತದೆ.

ಅನೇಕ ರಾಜ್ಯಗಳಲ್ಲಿ ಕಾಂಗ್ರೆಸ್ ಒಂದು ಪ್ರಮುಖ ಜಾತ್ಯತೀತ ಪಕ್ಷ ಎಂದು ಹೇಳಿಕೊಳ್ಳುವ ಸ್ಥಿತಿಯಲ್ಲಿಲ್ಲ. ಹಾಗಿದ್ದರೂ ತಾನು ದೊಡ್ಡ ಶಕ್ತಿ ಎಂದು ಅದು ಭಾವಿಸುತ್ತದೆ. ಕಾಂಗ್ರೆಸ್‌ನ ಇಂಥ ಧೋರಣೆ ಬಿಜೆಪಿ ವಿರುದ್ಧ ಹೋರಾಡುವ ಜಾತ್ಯತೀತ ಶಕ್ತಿಗಳ ಏಕತೆಯನ್ನು ಒಡೆಯುವಂಥದ್ದಾಗಿದೆ.

ಕಾಂಗ್ರೆಸ್ ಅನುಸರಿಸಿರುವ ಚುನಾವಣಾ ಕಾರ್ಯತಂತ್ರದ ಕೆಲವು ಉದಾಹರಣೆಗಳೇ ಈ ಅಂಶವನ್ನು ಸಾಬೀತುಪಡಿಸಲು ಸಾಕು.

80 ಲೋಕಸಭೆ ಸ್ಥಾನಗಳಿರುವ ಉತ್ತರ ಪ್ರದೇಶವು ಚುನಾವಣಾ ಸಮರದಲ್ಲಿ ಬಿಜೆಪಿಯನ್ನು ಸೋಲಿಸುವಲ್ಲಿ ನಿರ್ಣಾಯಕವಾಗುತ್ತದೆ. ಅಲ್ಲಿ ಪ್ರಬಲವಾಗಿರುವ ಎಸ್‌ಪಿ–ಬಿಎಸ್‌ಪಿ–ಆರ್‌ಎಲ್‌ಡಿ ಮೈತ್ರಿಕೂಟವು ಬಿಜೆಪಿಯನ್ನು ಪರಿಣಾಮಕಾರಿಯಾಗಿ ಎದುರಿಸುವ ಸಾಮರ್ಥ್ಯ ಹೊಂದಿದೆ. ಯಾವ ಕಾರಣಕ್ಕೋ ಏನೋ ಈ ಮೈತ್ರಿಕೂಟದಲ್ಲಿ ಕಾಂಗ್ರೆಸ್‌ಗೆ ಸ್ಥಾನ ಸಿಕ್ಕಿಲ್ಲ. ಇಂಥ ಸನ್ನಿವೇಶದಲ್ಲಿ ಕಾಂಗ್ರೆಸ್ ಏನು ಮಾಡಬಹುದಿತ್ತು? 2014ರ ಲೋಕಸಭೆ ಚುನಾವಣೆಗಳಲ್ಲಿ ಕಾಂಗ್ರೆಸ್ ಉತ್ತರ ಪ್ರದೇಶದಲ್ಲಿ ಎರಡು ಸ್ಥಾನ ಗಳಿಸಿತ್ತು. ಇತರ ಆರು ಕ್ಷೇತ್ರಗಳಲ್ಲಿ ಅದು ಎರಡನೇ ಸ್ಥಾನ ಗಳಿಸಿತ್ತು. ಈ ಎಂಟು ಕ್ಷೇತ್ರಗಳಲ್ಲಿ ತಾನು ಸ್ಪರ್ಧಿಸಿ ಉಳಿದಂತೆ ಇತರ ಸ್ಥಾನಗಳಲ್ಲಿ ತ್ರಿಪಕ್ಷ ಮೈತ್ರಿಕೂಟವನ್ನು ಬೆಂಬಲಿಸುವುದಾಗಿ ಕಾಂಗ್ರೆಸ್ ಘೋಷಿಸಿದ್ದರೆ ರಾಜ್ಯದ ಜಾತ್ಯತೀತ ಒಲವಿನ ಜನರ ಬೆಂಬಲವನ್ನು ಅದು ಪಡೆದುಕೊಳ್ಳುತ್ತಿತ್ತು ಹಾಗೂ ಬಿಜೆಪಿ–ವಿರೋಧಿ ಹೋರಾಟಗಾರ ಎಂಬ ಅದರ ವಿಶ್ವಾಸಾರ್ಹತೆ ಹೆಚ್ಚಬಹುದಿತ್ತು.

ಆದರೆ ಹಾಗೆ ಮಾಡುವ ಬದಲು, ಎಲ್ಲಾ 80 ಸ್ಥಾನಗಳಲ್ಲಿ ಸ್ಪರ್ಧಿಸುವುದಾಗಿ ಕಾಂಗ್ರೆಸ್ ಘೋಷಿಸಿದೆ. ಕೆಲವು ಜಾತಿ–ಆಧರಿತ ಸಂಘಟನೆಗಳ ಬೆಂಬಲ ಗಳಿಸಲು ಅದು ಪ್ರಯತ್ನಿಸುತ್ತಿದೆ. ಏಳು ಸ್ಥಾನಗಳನ್ನು ಮೂರು ಪಕ್ಷಗಳ ಕೂಟಕ್ಕೆ ಬಿಟ್ಟುಕೊಡುವುದಾಗಿ ಕಾಂಗ್ರೆಸ್ ಆನಂತರ ಪ್ರಕಟಿಸಿದರೂ ಮಾಯಾವತಿ ಮತ್ತು ಅಖಿಲೇಶ್ ಯಾದವ್ ಅದನ್ನು ಸಾರಾಸಗಟಾಗಿ ತಿರಸ್ಕರಿಸಿದ್ದಾರೆ. ಕಾಂಗ್ರೆಸ್ ಛಿದ್ರಕಾರಿ ಪಾತ್ರವನ್ನು ನಿರ್ವಹಿಸುತ್ತಿದೆ ಎಂದು ಆ ಪಕ್ಷದ ಪಾರಂಪರಿಕ ಬೆಂಬಲಿಗರು ಕೂಡ ಭಾವಿಸುತ್ತಿದ್ದಾರೆ. ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಹಲವು ಕ್ಷೇತ್ರಗಳಲ್ಲಿ ಗೆಲ್ಲುವ ಅವಕಾಶಗಳಿಲ್ಲ ಎನ್ನುವುದೇ ಆ ಭಾವನೆಗೆ ಕಾರಣವಾಗಿದೆ.

ದೆಹಲಿಯಲ್ಲಿ ಕೂಡ ಹೊಂದಾಣಿಕೆಗೆ ಆಮ್ ಆದ್ಮಿ ಪಕ್ಷ(ಆಪ್) ಮಾಡಿದ ಪ್ರಸ್ತಾವವನ್ನು ಕಾಂಗ್ರೆಸ್ ತಳ್ಳಿಹಾಕಿತು. ಒಂದು ವೇಳೆ ಆಪ್ ಮತ್ತು ಕಾಂಗ್ರೆಸ್ ಮೈತ್ರಿ ಮಾಡಿಕೊಂಡು ಸ್ಪರ್ಧಿಸಿದರೆ ರಾಜಧಾನಿ ದೆಹಲಿಯ ಎಲ್ಲಾ ಏಳು ಕ್ಷೇತ್ರಗಳಲ್ಲಿ ಗೆಲವು ಸಾಧಿಸಬಹುದು ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಅವರೆಡೂ ಪ್ರತ್ಯೇಕವಾಗಿ ಸ್ಪರ್ಧಿಸಿದರೆ ಲಾಭವಾಗುವುದು ಬಿಜೆಪಿಗೆ. ದೆಹಲಿಯ ಕಳೆದ ವಿಧಾನಸಭೆ ಚುನಾವಣೆಗಳಲ್ಲಿ ಕಾಂಗ್ರೆಸ್ ಒಂದೂ ಸ್ಥಾನವನ್ನು ಗಳಿಸದೆ ಧೂಳೀಪಟ ಆಗಿತ್ತು. ಆದಾಗ್ಯೂ ಆಪ್ ಜೊತೆ ಮೈತ್ರಿಗೆ ಕಾಂಗ್ರೆಸ್ ಹಿಂದೇಟು ಹಾಕುತ್ತಿರುವುದು ಯಾಕೆಂದರೆ ಅದಕ್ಕೆ ಪ್ರಸ್ತಾವಿಸಲಾದ ಸ್ಥಾನಗಳ ಬಗ್ಗೆ ತೃಪ್ತಿ ಇಲ್ಲದಿರುವುದು.

ಪಶ್ಚಿಮ ಬಂಗಾಳದಲ್ಲಿ, ಬಿಜೆಪಿ ಮತ್ತು ತೃಣಮೂಲ ಕಾಂಗ್ರೆಸ್‌ಗಳೆರಡನ್ನೂ ಸಮಾನ ಅಪಾಯಗಳು ಎಂದೆಣಿಸಿ ಅವುಗಳ ವಿರುದ್ಧ ಸೆಣಸುವುದು ಅಗತ್ಯವಿರುವಾಗ ಕಾಂಗ್ರೆಸ್ ಹಾಲಿ ಹೊಂದಿರುವ ನಾಲ್ಕು ಕ್ಷೇತ್ರಗಳು ಹಾಗೂ ಸಿಪಿಐ (ಎಂ) ಹೊಂದಿರುವ ಎರಡು ಕ್ಷೇತ್ರಗಳಲ್ಲಿ ಪರಸ್ಪರ ಸ್ಪರ್ಧೆ ಬೇಡ ಎಂದು ಸಿಪಿಐ (ಎಂ) ಪ್ರಸ್ತಾವವನ್ನು ಮುಂದಿಟ್ಟಿತ್ತು. ಈ ಒಂದು ತರ್ಕಸಮ್ಮತ ಪ್ರಸ್ತಾವನೆಗೆ ಕೂಡ ಕಾಂಗ್ರೆಸ್ ಸಕಾರಾತ್ಮಕವಾಗಿ ಸ್ಪಂದಿಸಿಲ್ಲ.

ಇದೇ ಧೋರಣೆ ವಯ್ನಾಡಿನಲ್ಲಿ ಸ್ಪರ್ಧಿಸುವ ನಿರ್ಧಾರದಲ್ಲಿ ಪ್ರದರ್ಶಿತವಾಗಿದೆ. ವಯ್ನಾಡಿನಲ್ಲಿ ರಾಹುಲ್‌ರನ್ನು ಕಣಕ್ಕಿಳಿಸುವ ಮೂಲಕ ಯುಡಿಎಫ್ ಸ್ಥಾನಗಳನ್ನು ಹೆಚ್ಚಿಸಿಕೊಳ್ಳಬಹುದೆಂಬುದು ಕಾಂಗ್ರೆಸ್ ಆಸೆಯಾಗಿದೆ. ಈಗ ಕೇರಳದಲ್ಲಿ ಕಾಂಗ್ರೆಸ್ ಅಲೆ ಇದೆ ಎಂಬುದಾಗಿ ರಾಹುಲ್‌ರ ಸ್ಪರ್ಧೆಯನ್ನು ಪ್ರಕಟಿಸಿದ ನಂತರ ಹಿರಿಯ ಕಾಂಗ್ರೆಸ್ ನಾಯಕ ಎ.ಕೆ. ಆಂಟನಿ ಹೇಳಿದ್ದಾರೆ. ರಾಜ್ಯದ ಎಲ್ಲಾ 20 ಲೋಕಸಭೆ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲ್ಲುತ್ತದೆ ಎಂದು ಕೆಪಿಸಿಸಿ ಅಧ್ಯಕ್ಷ ಮುಲ್ಲಪ್ಪಲ್ಲಿ ರಾಮಚಂದ್ರನ್ ಸಾರಿದ್ದಾರೆ. ಈ ಹಾಗೂ ಇಂಥ ಇನ್ನೂ ಅನೇಕ ಹೇಳಿಕೆಗಳು ಈ ಚುನಾವಣೆಯಲ್ಲಿ ಎಡ ಶಕ್ತಿಯ ವಿರುದ್ಧ ಕಾಂಗ್ರೆಸ್ ಸ್ಪರ್ಧಿಸುತ್ತಿಲ್ಲ ಎಂಬ ಅಖಿಲ ಭಾರತ ಕಾಂಗ್ರೆಸ್ ನಾಯಕರ ಹೇಳಿಕೆಗಳು ಸುಳ್ಳು ಎಂಬುದನ್ನು ತೋರಿಸಿಕೊಡುತ್ತವೆ. ಇಂಥ ಸಂಕುಚಿತ ಪಂಥವಾದಿ ಧೋರಣೆ ಕಾಂಗ್ರೆಸ್ ಶಕ್ತಿಯನ್ನು ಇನ್ನಷ್ಟು ಕುಗ್ಗಿಸುತ್ತದೆ.

ಕೇರಳದಲ್ಲಿ, ಸಿಪಿಐ (ಎಂ) ಮತ್ತು ಎಲ್‌ಡಿಎಫ್ ಬಿಜೆಪಿ ಮತ್ತು ಆರ್‌ಎಸ್‌ಎಸ್ ವಿರುದ್ಧದ ಅತ್ಯಂತ ದೃಢ ಹಾಗೂ ಸಮರ್ಪಿತ ಹೋರಾಟಗಾರರಾಗಿದ್ದಾರೆ. ಕೋಮುವಾದಿ ಶಕ್ತಿಗಳ ವಿರುದ್ಧ ಪಕ್ಷ ತಳೆದ ದೃಢ ನಿಲವಿನ ಪರಿಣಾಮವಾಗಿ ಆರ್‌ಎಸ್‌ಎಸ್–ಬಿಜೆಪಿ ಗ್ಯಾಂಗ್‌ಗಳಿಂದ ಹತರಾಗಿ ಹುತಾತ್ಮರಾದ ಸಿಪಿಐ (ಎಂ) ಕಾರ್ಯಕರ್ತರ ದೊಡ್ಡ ಪಟ್ಟಿಯೇ ಇದೆ. ಕಾಂಗ್ರೆಸ್ ಮತ್ತು ಯುಡಿಎಫ್ ಆಗಾಗ ಕೋಮುವಾದಿ ಶಕ್ತಿಗಳೊಂದಿಗೆ ರಾಜಿ ಮಾಡಿಕೊಂಡ ಉದಾಹರಣೆಗಳಿವೆ. ರಾಜ್ಯದ ಅಲ್ಪಸಂಖ್ಯಾತರಿಗೆ ಈ ಅನುಭವವಿದೆ ಹಾಗೂ ಕೇರಳದಿಂದ ರಾಹುಲ್ ಗಾಂಧಿಯನ್ನು ಕಣಕ್ಕಿಳಿಸಿರುವುದರಿಂದ ಅವರನ್ನು ದಾರಿ ತಪ್ಪಿಸಲು ಆಗದು.

ಚುನಾವಣೆಗಳ ನಂತರ ಕೇಂದ್ರದಲ್ಲಿ ಜಾತ್ಯತೀತ ಸರಕಾರ ರಚಿಸುವಲ್ಲಿ ಎಡ ಪಕ್ಷಗಳು ಒಂದು ಪಾತ್ರವನ್ನು ವಹಿಸಲಿವೆ. ಎಡಶಕ್ತಿಗಳನ್ನು ದುರ್ಬಲಗೊಳಿಸುವ ಮತ್ತು ರಾಹುಲ್ ಗಾಂಧಿ ಎಲ್‌ಡಿಎಫ್ ವಿರುದ್ಧ ಸೆಣಸಿ ಎಡರಂಗವನ್ನು ಗುರಿಯಾಗಿಸುವ ಯಾವುದೇ ಪ್ರಯತ್ನವನ್ನು ಕೇರಳದ ಜಾತ್ಯತೀತ ಮನೋಭಾವದ ಜನರು ಮತ್ತು ಅಲ್ಪಸಂಖ್ಯಾತರು ಸಹಿಸಿಕೊಳ್ಳುವುದಿಲ್ಲ.

ದೂರದೃಷ್ಟಿಯಿಲ್ಲದ ಈ ನಿರ್ಧಾರ ಕಾಂಗ್ರೆಸ್‌ಗೆ ಇನ್ನೊಂದು ಅರ್ಥದಲ್ಲೂ ಕಂಟಕವಾಗಲಿದೆ. ಮುಸ್ಲಿಂ ಲೀಗ್ ಯುಡಿಎಫ್‌ನ ಅಂಗಪಕ್ಷವಾಗಿದೆ. ವಯ್ನಾಡಿನಲ್ಲಿ ಮುಸ್ಲಿಂ ಲೀಗ್ ಒಂದು ಪ್ರಬಲ ಶಕ್ತಿಯಾಗಿದ್ದು ರಾಹುಲ್ ಗಾಂಧಿ ಯುಡಿಎಫ್‌ನ ಭಾಗವಾಗಿ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ನ ಜಂಟಿ ಅಭ್ಯರ್ಥಿ ಆಗಿರುತ್ತಾರೆ. ಹೀಗಾಗಿ ರಾಹುಲ್ ಗಾಂಧಿ ವಯ್ನಾಡಿನಲ್ಲಿ ಎಡ ಅಭ್ಯರ್ಥಿಯನ್ನು ಪರಾಭವಗೊಳಿಸಲು ಪ್ರಯತ್ನಿಸಲು ಮುಸ್ಲಿಂ ಲೀಗ್‌ಅನ್ನು ಅವಲಂಬಿಸಲಿದ್ದಾರೆ. ಇದು ಕಾಂಗ್ರೆಸ್ ಅಧ್ಯಕ್ಷರ ಜಾತ್ಯತೀತರೆಂದು ಪರಿಚಯಿಸುವ ಒಂದು ಜಾಹೀರಾತು ಅಂತೂ ಆಗಲಾರದು.

ಜಾತ್ಯತೀತ–ಪ್ರಜಾಸತ್ತಾತ್ಮಕ ಶಕ್ತಿಗಳ ಒಗ್ಗಟ್ಟನ್ನು ಮುರಿಯುವ ಈ ಪ್ರಯತ್ನವನ್ನು ಪರಿಣಾಮಕಾರಿ ರೀತಿಯಲ್ಲಿ ಎದುರಿಸಲು ಎಲ್‌ಡಿಎಫ್ ಸಮರ್ಥವಾಗುತ್ತದೆ. ಕೇರಳದ ಎಲ್ಲಾ 20 ಲೋಕಸಭೆ ಸ್ಥಾನಗಳಲ್ಲಿ ಯುಡಿಎಫ್‌ನ್ನು ಸೋಲಿಸಲು ಎಲ್‌ಡಿಎಫ್ ಹೋರಾಟ ನಿರತವಾಗಿದೆ.

ಅನು: ವಿಶ್ವ

ಚುನಾವಣಾ ಆಯೋಗದ ನಿರ್ದೇಶನಗಳನ್ನು ಪಾಲಿಸುವುದಕ್ಕಿಂತ ಮುರಿಯುವುದೇ ಹೆಚ್ಚುತ್ತಿರುವಾಗ...

ಪುಟ 2 ರಿಂದ

ಕ್ರಮ ಕೈಗೊಳ್ಳಬೇಕು, ಮತ್ತು ಇಂತಹ ಸನ್ನಿವೇಶಕ್ಕೆ ಹೊಣೆಗಾರರಾದವರನ್ನು ಗುರುತಿಸಬೇಕು ಎಂದು ನೀಲೋತ್ಪಲ ಬಸು ತಮ್ಮ ಪತ್ರದಲ್ಲಿ ಮುಖ್ಯ ಚುನಾವಣಾ ಆಯುಕ್ತರನ್ನು ಆಗ್ರಹಿಸಿದ್ದಾರೆ. ವಿಶೇಷವಾಗಿ, ಪ್ರಸಾರವನ್ನು ಚುನಾವಣೆಗಳ ದಿನಾಂಕಗಳನ್ನು ಪ್ರಕಟಿಸಿ ಮಾದರಿ ಆಚಾರ ಸಂಹಿತೆ ಜಾರಿಗೆ ಬಂದ ನಂತರವೇ ಈ ಪ್ರಸಾರವನ್ನು ಆರಂಭಿಸಿರುವುದರಿಂದ ಇದು ಅಗತ್ಯ ಎಂದು ಅವರು ಹೇಳಿದ್ದಾರೆ.

ಚುನಾವಣಾ ಆಯೋಗದ ಕ್ಲೀನ್ ಚಿಟ್ ಮತ್ತು ಹೆಚ್ಚಿದ ಭಂಡತನ:

"ಸಾರ್ವಜನಿಕ ಪ್ರಸಾರಕರಾದ ದೂರದರ್ಶನ ಮತ್ತು ಆಕಾಶವಾಣಿ ದೇಶದ ಪ್ರಧಾನ ಮಂತ್ರಿಯಾಗಿದ್ದರೂ ಚುನಾವಣೆಯಲ್ಲಿ ಆಳುವ ಪಕ್ಷದ ಒಬ್ಬ ಅಭ್ಯರ್ಥಿಯಾಗಿರುವವರಿಗೆ ಅಳತೆ ಮೀರಿ ಪ್ರಚಾರ ನೀಡುತ್ತಿರುವುದು" ನೀಲೋತ್ಪಲ ಬಸು ರವರು ತಮ್ಮ ಪತ್ರದಲ್ಲಿ ಪ್ರಸ್ತಾವಿಸಿರುವ ಇನ್ನೊಂದು ಪ್ರಶ್ನೆ. "ಪ್ರಧಾನ ಮಂತ್ರಿಗಳ ಸಾರ್ವಜನಿಕ ಪ್ರಸಾರ ಭಾಷಣಕ್ಕೆ ಚುನಾವಣಾ ಆಯೋಗ 'ಕ್ಲೀನ್ ಚಿಟ್' ನೀಡಿದ್ದರಿಂದ ಧೈರ್ಯ ತುಂಬಿಕೊಂಡ ಇವು ಅಷ್ಟೇ ಹುಮ್ಮಸ್ಸಿನಿಂದ ಈ ಪ್ರವೃತ್ತಿಯನ್ನು ಮುಂದುವರೆಸಿವೆ ಎಂದು ಹೇಳುವ ಧೈರ್ಯ ತೋರುತ್ತೇವೆ" ಎಂದು ಅವರು ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಎಪ್ರಿಲ್ 3ರಂದು ಪ್ರಧಾನ ಮಂತ್ರಿಗಳ ಕೊಲ್ಕತಾದಲ್ಲಿನ ಭಾಷಣವನ್ನು ದೂರದರ್ಶನ ನೇರ ಪ್ರಸಾರ ಮಾಡಿತು .ಇಷ್ಟೇ ಅಲ್ಲ, ಖಾಸಗಿ ವಾಹಿನಿಗಳೂ ಅದನ್ನೇ ನೇರವಾಗಿ ಮರುಪ್ರಸಾರ ಮಾಡಿದವು, ಅದರಲ್ಲಿ ಇದನ್ನು ದೂರದರ್ಶನದಿಂದ ಪಡೆಯಲಾಗಿದೆ ಎಂದು ಎದ್ದು ಕಾಣುವಂತೆ ಪ್ರದರ್ಶಿಸಿವೆ. ಸಾರ್ವಜನಿಕ ಪ್ರಸಾರ ಸಂಸ್ಥೆಯ ಇಂತಹ ಪಕ್ಷಪಾತಪೂರ್ಣ ವರ್ತನೆ ಮತ್ತೆ–ಮತ್ತೆ ನಡೆಯುತ್ತಿದ್ದರೆ, ಚುನಾವಣಾ ಆಯೋಗ ಮುಕ್ತ ಮತ್ತು ನ್ಯಾಯಯುತ ಚುನಾವಣೆಗೆ ಅಗತ್ಯವಾದ ಒಂದು ಸಮಾನ ನೆಲೆಯನ್ನು ಒದಗಿಸಬಲ್ಲುದೇ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರು ಮುಖ್ಯ ಆಯುಕ್ತರನ್ನು ಖಾರವಾಗಿ ಪ್ರಶ್ನಿಸಿದ್ದಾರೆ. "ಈ ಪ್ರವೃತ್ತಿಯನ್ನು ನಿಲ್ಲಿಸಲು ತಕ್ಷಣವೇ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ಮಾದರಿ ಆಚಾರ ಸಂಹಿತೆಯ ಇಂತಹ ಎದ್ದು ಕಾಣುವ ಉಲ್ಲಂಘನೆಗಳಿಗೆ ಹೊಣೆಗಾರರಾದ ಅಧಿಕಾರಿಗಳನ್ನು ಗುರುತಿಸಬೇಕು ಎಂದು ನಾವು ಆಗ್ರಹಿಸುತ್ತೇವೆ" ಎಂದು ಅವರು ಹೇಳಿದ್ದಾರೆ.

ಆಯೋಗದ ಸ್ಪಷ್ಟ ನಿರ್ದೇಶನವನ್ನು ಮುರಿದು ಪ್ರಚಾರ:

ನೀಲೋತ್ಪಲ ಬಸುರವರು ತಮ್ಮ ಪತ್ರದಲ್ಲಿ ಎತ್ತಿರುವ ಮೂರನೇ ಪ್ರಶ್ನೆ ಮನರೇಗದ ಅಡಿಯಲ್ಲಿ ಹೆಚ್ಚಿಸಿದ ಕೂಲಿ ದರಗಳ ಸುದ್ದಿಗೆ ಚುನಾವಣಾ ಆಯೋಗದ ನಿರ್ದೇಶನದ ಹೊರತಾಗಿಯೂ ದೂರದರ್ಶನ ಮತ್ತು ಆಕಾಶವಾಣಿ ವ್ಯಾಪಕ ಪ್ರಚಾರ ನೀಡಿರುವುದು. ಈ ಕುರಿತ ಅಸಾಮಾನ್ಯ ಗಜೆಟ್ ಅಧಿಸೂಚನೆಗೆ ಭಾರತದ ಚುನಾವಣಾ ಆಯೋಗ ನಿರ್ದಿಷ್ಟ ಶರತ್ತುಗಳೊಂದಿಗೆ ಅನುಮತಿ ಕೊಟ್ಟಿತ್ತು. ಈ ಕುರಿತು ಯಾವುದೇ ಪ್ರಚಾರವನ್ನು ಇಲೆಕ್ಟ್ರಾನಿಕ್, ಮುದ್ರಣ, ರೇಡಿಯೊ, ಇಂಟರ್ನೆಟ್ ಅಥವ ಬೇರೆ ಯಾವುದೇ ಮಾಧ್ಯಮದಲ್ಲಿ ಯಾವುದೇ ಸ್ವರೂಪದಲ್ಲಿ ನೀಡಲೇ ಬಾರದು ಎಂದು ಚುನಾವಣಾ ಆಯೋಗ ಗ್ರಾಮೀಣ ಅಭಿವೃದ್ಧಿ ಇಲಾಖೆಗೆ ನಿರ್ದೇಶನ ನೀಡಿತ್ತು ಎಂಬುದನ್ನು ಆಯೋಗಕ್ಕೆ ಬಸುರವರು ತಮ್ಮ ಪತ್ರದಲ್ಲಿ ನೆನಪಿಸಿದ್ದಾರೆ. ಈ ಇಲಾಖೆ ನಂತರ ಮಾರ್ಚ್ 28 ರಂದು ಒಂದು ಆದೇಶ ಹೊರಡಿಸಿತು. ದೂರದರ್ಶನ ಮತ್ತು ಆಕಾಶವಾಣಿ ಸುದ್ದಿ ಬುಲೆಟಿನ್‌ಗಳಲ್ಲಿ ಕೂಲಿ ಹೆಚ್ಚಳದ ಸುದ್ದಿಯನ್ನು ಪ್ರಚಾರ ಮಾಡಲಾಯಿತು. ವಾಟ್ಸ್ ಆಪ್ ಸಂ ದೇಶಗಳಲ್ಲೂ ಈ ಮಾಹಿತಿಯನ್ನು ಪಸರಿಸಿರುವುದೂ ಗಮನಕ್ಕೆ ಬಂದಿದೆ. "ಭಾರತದ ಚುನಾವಣಾ ಆಯೋಗದ ನಿರ್ದೇಶನಗಳನ್ನು ಪಾಲಿಸುವುದಕ್ಕಿಂತ ಮುರಿಯುವುದೇ ಹೆಚ್ಚುತ್ತಿದೆ. ಇಂತಹ ಉಲ್ಲಂಘನೆಗಳಿಗೆ ಹೊಣೆಗಾರರಾದವರ ಮೇಲೆ ಬಲವಾದ ಮತ್ತು ಎಲ್ಲರ ಗಮನಕ್ಕೆ ತರುವ ಕಾರ್ಯಾಚರಣೆಗಳನ್ನು ನಡೆಸಬೇಕು" ಎಂದು ನೀಲೋತ್ಪಲ ಬಸುರವರು ತಮ್ಮ ಪತ್ರದಲ್ಲಿ ಆಗ್ರಹಿಸುತ್ತ, ಭಾರತದ ಚುನಾವಣಾ ಆಯೋಗ ಸಂವಿಧಾನ ತನಗೆ ಆದೇಶಿಸಿರುವ ಪಾತ್ರದ ಬಗ್ಗೆ ಜನರಿಗೆ ಮನವರಿಕೆ ಮಾಡಿಸಲು ಈ ಮಹತ್ವದ ಪ್ರಶ್ನೆಗಳ ಮೇಲೆ ಸೂಕ್ತ ಕ್ರಮಗಳನ್ನು ಜರುಗಿಸುವುದು ಅಗತ್ಯವಾಗಿದೆ ಎಂದಿದ್ದಾರೆ.

ಚುನಾವಣಾ ಸಮರದಲ್ಲಿ ದೇಶಪ್ರೇಮಿ ಕರ್ತವ್ಯ

ನಮ್ಮದೊಂದು ಮಹಾನ್ ಪ್ರಜಾಪ್ರಭುತ್ವ ದೇಶ. ಇಲ್ಲಿ ಪ್ರಜೆಗಳಲ್ಲದೆ ಬೇರೆ ಪ್ರಭುಗಳಿಲ್ಲ. ಇಲ್ಲಿ ಪ್ರಜೆಗಳೇ ಪ್ರಭುಗಳು. ಇಲ್ಲಿ ಪ್ರಜೆಗಳು ತಮಗೆ ಬೇಕಾದ ಸರ್ಕಾರವನ್ನು ತಾವೇ ರಚಿಸಿಕೊಳ್ಳುತ್ತಾರೆ. ತಮಗೆ ಬೇಡವಾದ ಸರ್ಕಾರವನ್ನು ಪ್ರಜೆಗಳೇ ಕಿತ್ತುಹಾಕುತ್ತಾರೆ. ಇಲ್ಲಿ ಕಾಲಕಾಲಕ್ಕೆ ನಡೆಯುವ ಲೋಕಸಭಾ, ವಿಧಾನಸಭಾ ಚುನಾವಣೆಗಳ ಮೂಲಕ ಪ್ರಜೆಗಳು ತಮ್ಮ ಸಾರ್ವಭೌಮ ಅಧಿಕಾರವನ್ನು ಚಲಾಯಿಸುತ್ತಾರೆ. ಅಂತಹ ಒಂದು ಮಹಾಚುನಾವಣೆಯ ಹೊಸ್ತಿಲಲ್ಲಿ ನಾವಿದ್ದೇವೆ. 17ನೇ ಲೋಕಸಭೆಯನ್ನು ಚುನಾಯಿಸಲು ನಾವೆಲ್ಲರು ಸಜ್ಜಾಗುತ್ತಿದ್ದೇವೆ. ಕಳೆದ 5 ವರ್ಷಗಳ ನಮ್ಮ ಅನುಭವದ ಆಧಾರದಲ್ಲಿ, ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿದ್ದ ಬಿಜೆಪಿ ನೇತೃತ್ವದ ಮೋದಿ ಸರ್ಕಾರವನ್ನು ಮುಂದುವರೆಯಲು ಬಿಡಬೇಕೋ ಅಥವ ಅದನ್ನು ಅಧಿಕಾರದಿಂದ ಕೆಳಗಿಳಿಸಬೇಕೋ ಎಂಬುದನ್ನು ನಾವು ನಿರ್ಧರಿಸಬೇಕಾಗಿದೆ.

ನಂಬಿಕೆಗೆ ಅರ್ಹವಲ್ಲದ ಸರ್ಕಾರ:

2014 ರ ಲೋಕಸಭಾ ಚುನಾವಣೆಯಲ್ಲಿ ನರೇಂದ್ರ ಮೋದಿಯವರು ಮತ್ತು ಬಿಜೆಪಿ ಪಕ್ಷದವರು ದೇಶದ ಜನತೆಗೆ ನೀಡಿದ ಒಂದೊಂದು ಭರವಸೆಗೂ ದ್ರೋಹ ಮಾಡಿದ್ದಾರೆ. ನಮ್ಮ ದೇಶದ ಯುವಜನರಿಗಾಗಿ ಪ್ರತಿ ವರ್ಷ 2 ಕೋಟಿ ಉದ್ಯೋಗಗಳನ್ನು ಸೃಷ್ಟಿ ಮಾಡುತ್ತೇನೆ ಎಂದು ಮಾತು ಕೊಟ್ಟಿದ್ದರು. ಇದಕ್ಕೆ ಮರುಳಾದ ದೇಶದ ಯುವಜನರು 'ಮೋದಿ, ಮೋದಿ, ಮೋದಿ' ಎಂದು ಕನಸ್ಸಿನಲ್ಲೂ ಕನವರಿಸುತ್ತಿದ್ದರು. ಈಗ 5 ವರ್ಷಗಳ ವರೆಗೆ ಕಾದು ನಿರಾಶೆಗೊಂಡಿದ್ದಾರೆ. ಕೊಟ್ಟ ಮಾತಿನಂತೆ ನಡೆದುಕೊಂಡಿದ್ದರೆ 5 ವರ್ಷಗಳಲ್ಲಿ 10 ಕೋಟಿ ನಿರುದ್ಯೋಗಿಗಳಿಗೆ ಉದ್ಯೋಗ ಸಿಗುತಿತ್ತು. ಅವರು 'ದಂಡಪಿಂಡ' ಗಳೆಂದು ಅವಮಾನಕ್ಕೆ ಒಳಗಾಗುವುದು ತಪ್ಪುತಿತ್ತು. ಈಗ ಮತ್ತೆ ಚುನಾವಣೆ ಬಂದದ್ದು ನೋಡಿ ನಮ್ಮ ಯುವಜನರು ಆಕ್ರೋಶಭರಿತರಾಗಿದ್ದರೆ ಆಶ್ಚರ್ಯಪಡಬೇಕಾಗಿಲ್ಲ. ಮೊದಲ ಸಲ ಮತದಾನ ಮಾಡುವ ಉತ್ಸಾಹದಲ್ಲಿದ್ದ ಯುವಜನರೂ ಸಹ ಆಸಕ್ತಿಯನ್ನು ಕಳೆದುಕೊಂಡಿದ್ದಾರೆ.

ವಿದೇಶಗಳಲ್ಲಿ ಮುಚ್ಚಿಡಲಾದ ಕೋಟಿ ಕೋಟಿ ರೂ. ಕಪ್ಪು ಹಣವನ್ನು ದೇಶಕ್ಕೆ ತಂದೇ ತರುತ್ತೇನೆ ಎಂದೂ, ಪ್ರತಿಯೊಬ್ಬ ಭಾರತೀಯನ ಬ್ಯಾಂಕ್ ಖಾತೆಗೆ 15 ಲಕ್ಷದಂತೆ ಜಮಾ ಮಾಡಲಾಗುವುದೆಂದು ಭರವಸೆ ನೀಡಲಾಗಿತ್ತು. ಬಡವರಲ್ಲಿ ಬಹಳಷ್ಟು ಆಸೆಗಳನ್ನು ಚಿಗುರಿಸಿದ ಮೋದಿಯವರ ಈ ಭರವಸೆ ಈಗ ಅವರನ್ನು ತೀವ್ರ ನಿರಾಸೆಯಲ್ಲಿ ಮುಳುಗಿಸಿದೆ. ರೈತರ ಬೆಳೆಗಳಿಗೆ ಡಾ. ಸ್ವಾಮಿನಾಥನ್ ಆಯೋಗದ ಶಿಫಾರಸಿನಂತೆ ಒಟ್ಟು ಖರ್ಚಿನ ಮೇಲೆ ಶೇಕಡಾ 50 ರಷ್ಟು ಲಾಭ ದೊರೆಯುವಂತೆ ಕನಿಷ್ಠ ಬೆಂಬಲ ಬೆಲೆ ನೀಡುವ ಭರವಸೆಗೆ ದ್ರೋಹ ಬಗೆದಿರುವ ಮೋದಿಯವರನ್ನು ಶಪಿಸುತ್ತಾ ರೈತರ ಆತ್ಮಹತ್ಯೆಯಲ್ಲಿ ಪರಿಹಾರ ಕಾಣುತ್ತಾರೆ. ರೈತರ ಎಲ್ಲಾ ಸಾಲವನ್ನು ಇದೊಂದೇ ಬಾರಿ ಮನ್ನಾ ಮಾಡಿ ರೈತರಿಗಾದರೂ 'ಒಳ್ಳೆಯ ದಿನ' ಪ್ರಾಪ್ತವಾಗುವಂತೆ ಮಾಡಬಹುದಾದ ಅವಕಾಶವನ್ನೇ ಮೋದಿ ತಿರಸ್ಕರಿಸಿದ್ದಾರೆ.

ಇವು 2014 ರ ಚುನಾವಣೆಯ ಮೊದಲ ಓಟು ಗಿಟ್ಟಿಸಿಕೊಳ್ಳಲು ಮೋದಿಯವರು ನೀಡಿದ ಕೆಲವು ಭರವಸೆಗಳು. ಅಧಿಕಾರಕ್ಕೆ ಬಂದ ನಂತರವೂ ಅವರು ಹೊಸ ಭರವಸೆಗಳನ್ನು ನೀಡುತ್ತಾ ಬಂದಿದ್ದಾರೆ ಮತ್ತು ಅದಕ್ಕಾಗಿ 'ಸುಳ್ಳು ಭರವಸೆಗಳ ಸರದಾರ' ಎಂಬ ಬಿರುದನ್ನು ಸಂಪಾದಿಸಿದಾರೆ. ಇಂತಹ ವಚನಭ್ರಷ್ಟ, ವಿಶ್ವಾಸ ದ್ರೋಹಿ ಸರ್ಕಾರವನ್ನು ಮತ್ತೆ ಮರಳಿ ಅಧಿಕಾರಕ್ಕೆ ತರುವುದು ಉಂಟೆ?

ಕಾರ್ಮಿಕ ಹಕ್ಕುಗಳ ದಮನ:

ಮೋದಿಯವರು ದೇಶದ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ದಿನದಿಂದಲೂ ಕಾರ್ಮಿಕರ ಸಂಘಟಿತ ಹೋರಾಟಗಳು ಹೆಚ್ಚಾಗಿವೆ. ಆದರೆ ಕೇಂದ್ರ ಬಿಜೆಪಿ ಸರ್ಕಾರ ಕಾರ್ಮಿಕರು ದಶಕಗಳ ಹೋರಾಟದಿಂದ ಪಡೆದ ಹಕ್ಕುಗಳನ್ನು ಕಿತ್ತುಕೊಳ್ಳಲು ಮುಂದಾಗಿದೆ. 44 ಕೇಂದ್ರ ಕಾರ್ಮಿಕ ಕಾನೂನುಗಳನ್ನು ತೆಗೆದುಹಾಕಿ 4 ಕಾರ್ಮಿಕ ಸಂಹಿತೆಗಳಲ್ಲಿ ವಿಲೀನಗೊಳಿಸಲು ಹೊರಟಿದೆ. ಕಾಯಂ ಕಾರ್ಮಿಕರಂತೆ ಕೆಲಸ ಮಾಡುತ್ತಿರುವ ಗುತ್ತಿಗೆ, ಹೊರಗುತ್ತಿಗೆ, ತಾತ್ಕಾಲಿಕ ಕಾರ್ಮಿಕರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕೆಂಬ ಸುಪ್ರೀಂ ಕೋರ್ಟ್ ತೀರ್ಪು ಮತ್ತು ಭಾರತೀಯ ಕಾರ್ಮಿಕ ಸಮ್ಮೇಳನದ ಶಿಫಾರಸ್ಸನ್ನು ಜಾರಿ ಮಾಡುತ್ತಿಲ್ಲ. ಅಂಗನವಾಡಿ, ಬಿಸಿಯೂಟ, ಆಶಾ ಮೊದಲಾದ ಮಹಿಳೆಯರೇ ಆಗಿರುವ ವಿವಿಧ ಸ್ಕೀಂ ನೌಕರರನ್ನು ಕಾರ್ಮಿಕರೆಂದು ಪರಿಗಣಿಸಿ ಕಾರ್ಮಿಕ ಕಾನೂನುಗಳ ಸೌಲಭ್ಯಗಳನ್ನು ಅವರಿಗೆ ವಿಸ್ತರಿಸಲು ಬಿಜೆಪಿ ಸರ್ಕಾರ ನಿರಾಕರಿಸುತ್ತಿದೆ. ಕಟ್ಟಡ ನಿರ್ಮಾಣ, ಪಂಚಾಯತಿ ಹಾಗೂ ಪುರಸಭಾ ನೌಕರರು, ಆಟೋ ಚಾಲಕರು, ಹಮಾಲಿ ಕಾರ್ಮಿಕರು, ಮನೆ ಕೆಲಸಗಾರರು ಮೊದಲಾದ ಅಸಂಘಟಿತ ವಲಯದ ಕಾರ್ಮಿಕರಿಗೆ ಕಾರ್ಮಿಕ ಕಾನೂನುಗಳನ್ನು ಅನ್ವಯಿಸಿ ಜಾರಿ ಮಾಡಲು ಮೋದಿ ಸರ್ಕಾರ ತಯಾರಿಲ್ಲ.

ಮುಚ್ಚಿರುವ ಕೋಲಾರ ಚಿನ್ನದ ಗಣಿ, ಭದ್ರಾವತಿ ಉಕ್ಕಿನ ಕಾರ್ಖಾನೆ ಮುಂತಾದವುಗಳನ್ನು ಪುನರಾರಂಭಿಸಲು ಸರ್ಕಾರಕ್ಕೆ ಆಸಕ್ತಿ ಇಲ್ಲ. ಸಾರ್ವಜನಿಕ ವಲಯದ ಕಾರ್ಖಾನೆಗಳ ಖಾಸಗೀಕರಣ ನೀತಿ ಮುಂದುವರೆಯುತ್ತಿದೆ. ರಕ್ಷಣಾ ಉತ್ಪಾದನೆ, ರೈಲ್ವೆ, ವಿಮಾ, ಬ್ಯಾಂಕಿಂಗ್ ಮುಂತಾದ ನಿರ್ಣಾಯಕ ವಲಯಗಳಲ್ಲಿ ಶೇ. 100 ರಷ್ಟು ವಿದೇಶಿ ನೇರ ಬಂಡವಾಳಕ್ಕೆ ಅನುವುಮಾಡಿಕೊಡಲಾಗುತ್ತಿದೆ. ಗ್ರಾಮೀಣ ಕೆಲಸಗಾರರಿಗೆ ಉದ್ಯೋಗ ಒದಗಿಸುವ, ಬಾಳಿಕೆಯ ಆಸ್ತಿಯನ್ನು ನಿರ್ಮಾಣ ಮಾಡುವ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಬಲಪಡಿಸಿ ವಿಸ್ತರಿಸುವ ಇಚ್ಛಾಶಕ್ತಿ ಮೋದಿ ಸರ್ಕಾರಕ್ಕೆ ಇಲ್ಲ. ನಿಗದಿಯಾದ ಅನುದಾನವನ್ನು ಸಕಾಲದಲ್ಲಿ ಬಿಡುಗಡೆ ಮಾಡದೆ ಗ್ರಾಮೀಣ ಕೆಲಸಗಾರರನ್ನು ಸತಾಯಿಸಲಾಗುತ್ತದೆ. ಇಂತಹ ಸರ್ಕಾರವನ್ನು ಮತ್ತೊಮ್ಮೆ ಅಧಿಕಾರಕ್ಕೆ ತರಲು ಕಾರ್ಮಿಕರು ಇಷ್ಟಪಡಬಹುದೆ?

ಶ್ರೀಮಂತರನ್ನು ಇನ್ನಷ್ಟು ಶ್ರೀಮಂತರಾಗಿಸುವ ಸರ್ಕಾರ

ಕಳೆದ 5 ವರ್ಷಗಳಲ್ಲಿ ನಮ್ಮ ದೇಶದ ಜನಸಂಖ್ಯೆಯ ಶೇಕಡಾ 1 ರಷ್ಟು ಇರುವ ಆಗರ್ಭ ಶ್ರೀಮಂತರ ಸಂಪತ್ತು 2014 ರಲ್ಲಿ ಶೇಕಡ 49 ಇದ್ದದ್ದು 2018 ರಲ್ಲಿ ಶೇಕಡ 73 ಕ್ಕೆ ಏರಿದೆ. ಈ ಪ್ರಮಾಣದಲ್ಲಿ ಕಾರ್ಮಿಕರ, ಬಡರೈತರ, ಕೂಲಿಕಾರರ ಆಸ್ತಿಯಲ್ಲಿ ಹೆಚ್ಚಳ ಆಗಿಲ್ಲ.

ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳು ಗಗನಕ್ಕೇರುತ್ತಾ ಅಗತ್ಯ ವಸ್ತುಗಳ ಬೆಲೆಗಳು ಹೆಚ್ಚಾಗುತ್ತಾ ಹೋದರೂ ಮೋದಿ ಸರ್ಕಾರ ಪೆಟ್ರೋಲಿಂ ಉತ್ತನ್ನಗಳ ಮೇಲಿನ ತೆರಿಗೆಗಳನ್ನು ಸುಂಕಗಳನ್ನು ಇಳಿಸಲಿಲ್ಲ. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಲಿಲ್ಲ. ಕೃಷಿ ಆದಾಯ ತೀವ್ರವಾಗಿ ಕುಸಿಯಿತು. ಮರುಪಾವತಿ ಮಾಡಲಾಗದ ರೈತರ ಸಾಲ 2017 ರಲ್ಲಿ 70,000 ಕೋಟಿ ರೂ. ಇದ್ದದ್ದು 2018 ರಲ್ಲಿ 1 ಲಕ್ಷ ಕೋಟಿ ರೂ. ಗೆ ಏರಿತು. ಇದು ರೈತರನ್ನು ಆತ್ಮಹತ್ಯೆಗೆ ತಳ್ಳುತ್ತಿರುವ ಕಾರ್ಷಿಕ ಬಿಕ್ಕಟ್ಟಿನ ತೀವ್ರತೆಯನ್ನು ತೋರಿಸುತ್ತದೆ. ನಿರುದ್ಯೋಗ ದರವು 2018 ರಲ್ಲಿ ಶೇಕಡಾ 5.9 ರಷ್ಟು ಇದ್ದದ್ದು 2019 ರಲ್ಲಿ ಶೇಕಡ 7.1 ಕ್ಕೆ ಏರಿತು.

ಒಟ್ಟು ಆಂತರಿಕ ಉತ್ಪನ್ನವನ್ನು ಲೆಕ್ಕಹಾಕುವ ವಿಧಾನದಲ್ಲಿ ಮೋದಿ ಸರ್ಕಾರ ಬದಲಾವಣೆ ಮಾಡಿದರೂ 2018–19 ರಲ್ಲಿ ಅದು ಶೇ. 7 ಕ್ಕೆ ಕುಸಿದಿದೆ. 2013–14 ರಲ್ಲಿ ಅದು ಶೇ. 8.2 ಇತ್ತು. ಹಿಂದಿನ ಲೆಕ್ಕಾಚಾರದ ಪ್ರಕಾರ 2018–19 ರ ಜಿಡಿಪಿ ಕೇವಲ ಶೇ. 4.7. ನೋಟು ರದ್ದತಿಯಿಂದ ಏಕಾಏಕಿ ಶೇ. 86 ರಷ್ಟು ನೋಟುಗಳನ್ನು ಹಿಂಪಡೆದ ಕಾರಣ ಸಾಮಾನ್ಯ ಜನತೆಗೆ ಅಪಾರ ಸಂಕಷ್ಟ ಉಂಟಾಯಿತು. ಲಕ್ಷಾಂತರ ಸಣ್ಣ ಮತ್ತು ಮಧ್ಯಮ ಉದ್ದಿಮೆಗಳು ಮುಚ್ಚಿಹೋದವು. ಅಸಂಘಟಿತ ವಲಯದ ಲಕ್ಷಾಂತರ ಕಾರ್ಮಿಕರು ಕೆಲಸ ಕಳೆದುಕೊಂಡರು. ಲಕ್ಷಾಂತರ ಸಣ್ಣ ರೈತರು ಮತ್ತು ಕೂಲಿಕಾರರು ತಮ್ಮ ಆದಾಯ ಕಳೆದುಕೊಂಡರು. ಮೋದಿಯವರು ಹೇಳಿಕೊಂಡಂತಹ ಯಾವುದೇ ಗುರಿಯನ್ನು ಸಾಧಿಸಲಾಗಲಿಲ್ಲ. ನಂತರ ಹೇರಲಾದ ಜಿಎಸ್‌ಟಿ ಕೂಡ ಸಣ್ಣ ಉದ್ದಿಮೆಗಳು ಮತ್ತು ಅಲ್ಲಿ ಕೆಲಸ ಮಾಡುವ ಲಕ್ಷಾಂತರ ಕಾರ್ಮಿಕರು ತೀವ್ರ ಸಂಕಷ್ಟ ಎದುರಿಸುವಂತೆ ಮಾಡಿತು. ಬೇಕಾ ನಮಗೆ ಇಂತಹ ಸರ್ಕಾರ? ಶ್ರೀಮಂತರನ್ನು ಇನ್ನಷ್ಟು ಶ್ರೀಮಂತರಾಗಿಸುವ, ಬಡವರ ಮೇಲೆ ಹೊರೆ ಹೇರುವ ಸರ್ಕಾರ ಬೇಕಾ?

ಮನುವಾದಿಗಳ ಮೇಲ್ಮೈ :

ಮೋದಿ ಸರ್ಕಾರ ಮನುವಾದಿಗಳಿಗೆ ಕುಮಕ್ಕು ನೀಡುತ್ತಾ ಬಂದಿದೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ವಿರುದ್ಧ ದಾಳಿ ದೌರ್ಜನ್ಯಗಳು ಹೆಚ್ಚಾಗಿವೆ. ಮುಖ್ಯವಾಗಿ ಬಿಜೆಪಿ ಆಡಳಿತ ಇರುವ ರಾಜ್ಯಗಳಲ್ಲಿ.

ಆದಿವಾಸಿಗಳ ದೊಡ್ಡ ಸಮೂಹಗಳು ಭೂಮಿಯ ಹಕ್ಕಿನಿಂದ ವಂಚಿತರಾಗುತ್ತಿದ್ದಾರೆ. ಅವರ ಪರವಾಗಿ ಸುಪ್ರೀಂ ಕೋರ್ಟ್‌ನಲ್ಲಿ ಮೋದಿ ಸರ್ಕಾರ ಸಮರ್ಪಕವಾದ ವಾದವನ್ನು ಮಂಡಿಸಿಲ್ಲ.

ಮೌಢ್ಯಾಚರಣೆಗೆ, ಕಂದಾಚಾರಗಳಿಗೆ ಪ್ರೋತ್ಸಾಹ ದೊರೆಯುತ್ತಿದೆ. ಮೂಢ ನಂಬಿಕೆಗಳ ವಿರುದ್ಧ ಮಾತನಾಡುವವರಿಗೆ ಬೆದರಿಕೆ ಹಾಕಲಾಗುತ್ತದೆ. ಗೌರಿ ಲಂಕೇಶ್, ಡಾ॥ ಎಂ.ಎಂ. ಕಲ್ಬುರ್ಗಿ ಮುಂತಾದವರನ್ನು ಕೊಲ್ಲಲಾಗಿದೆ.


ಸರ್ಕಾರವನ್ನು ಟೀಕಿಸುವವರನ್ನು ದೇಶದ್ರೋಹಿಗಳೆಂದು ಆರೋಪಿಸಲಾಗುತ್ತದೆ. ಬಂಧಿಸಿ ಜೈಲಿನಲ್ಲಿ ಇಡಲಾಗುತ್ತದೆ. ದೇಶದಲ್ಲಿ ಅಘೋಷಿತ ತುರ್ತುಪರಿಸ್ಥಿತಿ ಜಾರಿಯಲ್ಲಿದ್ದಂತೆ ಭಾಸವಾಗುತ್ತದೆ. ಮೋದಿ ಸರ್ಕಾರ ನಿಧಾನವಾಗಿ ಸರ್ವಾಧಿಕಾರಿ ಸರ್ಕಾರ ಆಗುತ್ತಿದೆ. ಇವರ ಬೆದರಿಕೆಗಳಿಗೆ ಹೆದರಿ ನಾವು ಈ ಸರ್ಕಾರವನ್ನು ಮತ್ತೊಮ್ಮೆ ಅಧಿಕಾರಕ್ಕೆ ತರುವುದು ಶರಣಾಗತಿಯಲ್ಲವೆ?


ಫ್ಯಾಸಿಸ್ಟ್ ಪ್ರವೃತ್ತಿಗಳ ಅನಾವರಣ :

ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಾಗಿನಿಂದ ದೇಶದೊಳಗೆ ಬೇರು ಬಿಟ್ಟಿರುವ ಕೋಮುವಾದಿ, ಮತೀಯವಾದಿ ಶಕ್ತಿಗಳಿಗೆ ಕುಮ್ಮಕ್ಕು ಸಿಕ್ಕಿದೆ. ಫ್ಯಾಸಿಸ್ಟ್ ಪ್ರವೃತ್ತಿಗಳು ವ್ಯಕ್ತವಾಗುತ್ತಿವೆ. ದೇಶದ ಕಾರ್ಮಿಕ ವರ್ಗದಲ್ಲಿ ಅತೃಪ್ತಿ ತೀವ್ರಗೊಂಡಾಗ, ದೇಶಕ್ಕೆ ಅನ್ನ ನೀಡುವ ರೈತರು ಹತಾಶರಾದಾಗ, ಜನಸಾಮಾನ್ಯರು ಹೊಟ್ಟೆ ಬಟ್ಟೆಗಾಗಿ ಪರಿದಾಡುವಾಗ, ಅವರೆಲ್ಲರ ಆಕ್ರೋಶ ಒಂದು ಬಲಿಷ್ಠ ಪ್ರಜಾಸತ್ತಾತ್ಮಕ ಚಳುವಳಿಯಾಗಿ ಮಾರ್ಪಡುವ ಎಲ್ಲಾ ಸಾಧ್ಯತೆಗಳಿವೆ. ಇದರ ಅಪಾಯವನ್ನು ಮನಗಂಡಿರುವ ಆಳುವ ವರ್ಗಗಳು ದುಡಿಯುವ ಜನರನ್ನು ಒಡೆಯಲು ಕಾರ್ಯತಂತ್ರವನ್ನು ರೂಪಿಸಿಕೊಂಡಿವೆ. ಅದುವೇ ಮುಂದೆ ಮತೀಯ ಫ್ಯಾಸಿಸಂ ಆಗಿ ಬೆಳೆಯಬಹುದಾದ ಮತೀಯವಾದ. ಫ್ಯಾಸಿಸ್ಟ್ ನಾಯಕ ಚುನಾವಣೆಯ ಮೂಲಕವೇ ಅಧಿಕಾರ ಪಡೆಯುತ್ತಾನೆ. ಆನಂತರ ಸರ್ವಾಧಿಕಾರಿಯಾಗುತ್ತಾನೆ. ➡









ಕೃಪೆ: ಪಿ. ಮಹಮ್ಮದ್





ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಗುಡಿಬಂಡೆ ತಾಲ್ಲೂಕಿನ ಸೋಮೇನಹಳ್ಳಿಯಲ್ಲಿ ನಡೆಯುತ್ತಿರುವ ಸಿಪಿಐ(ಎಂ) ರಾಜಕೀಯ ಸಮಾವೇಶದಲ್ಲಿ ಪಕ್ಷದ ಅಭ್ಯರ್ಥಿ ಎಸ್.ವರಲಕ್ಷ್ಮಿ, ರಾಜ್ಯ ಕಾರ್ಯದರ್ಶಿ ಯು.ಬಸವರಾಜು, ಮಾಜಿ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ, ಜಿಲ್ಲಾ ಕಾರ್ಯದರ್ಶಿ ಜಯರಾಮರೆಡ್ಡಿ, ಗುಡಿಬಂಡೆ ತಾಲ್ಲೂಕು ಕಾರ್ಯದರ್ಶಿ ಎಚ್.ಪಿ. ಲಕ್ಷ್ಮಿನಾರಾಯಣ, ರಾಜ್ಯ ಮುಖಂಡರಾದ ಸುನಂದ, ಚನ್ನರಾಯಪ್ಪ, ಮಂಜುನಾಥ್ ರೆಡ್ಡಿ ಮುಂತಾದವರು ಇದ್ದರು.



ದಾಬಸಪೇಟೆ ಕೈಗಾರಿಕಾ ಪ್ರದೇಶದಲ್ಲಿ ನೂರಾರು ಕಾರ್ಮಿಕರೊಂದಿಗೆ ಚಿಕ್ಕಬಳ್ಳಾಪುರ ಸಿಪಿಎಂ ಅಭ್ಯರ್ಥಿ ವರಲಕ್ಷ್ಮಿ ಪ್ರಚಾರ ನಡೆಸಿದರು.



ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಹೊಸಕೋಟೆ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ಸಿಪಿಐ(ಎಂ) ರಾಜಕೀಯ ಸಮಾವೇಶ ಇಂದು ಹೊಸಕೋಟೆಯಲ್ಲಿ ನಡೆಯಿತು. ಸಮಾವೇಶದಲ್ಲಿ ಅಭ್ಯರ್ಥಿ ಎಸ್.ವರಲಕ್ಷ್ಮಿ, ಪಕ್ಷದ ಮುಖಂಡರಾದ ಮೀನಾಕ್ಷಿ ಸುಂದರಂ, ಕೆ.ಪ್ರಕಾಶ್, ವಿ.ಗೀತ, ಚಂದ್ರತೇಜಸ್ವಿ, ಹರೀಂದ್ರ, ಲೀಲಾವತಿ ಮುಂತಾದವರು ಭಾಗವಹಿಸಿದ್ದರು.

➡ ಯಾವ ಪ್ರಜಾಸತ್ತಾತ್ಮಕ ಸಂವಿಧಾನವನ್ನೂ ಆತ ಮಾನ್ಯ ಮಾಡುವುದಿಲ್ಲ.

ಕಳೆದ 5 ವರ್ಷಗಳ ಅವಧಿಯಲ್ಲಿ ಇಂತಹ ಪ್ರವೃತ್ತಿಯ ಹಲವು ಉದಾಹರಣೆಗಳನ್ನು ನಾವು ಕಂಡಿದ್ದೇವೆ. ಸಂಸತ್ತಿನ ಸ್ವತಂತ್ರ ಕಾರ್ಯನಿರ್ವಹಣೆಯಲ್ಲಿ ಹಸ್ತಕ್ಷೇಪ, ಹಣಕಾಸು ಮಸೂದೆ ಹೆಸರಿನಲ್ಲಿ ರಾಜ್ಯ ಸಭೆಯ ಕಡೆಗಣನೆ, ನ್ಯಾಯಾಂಗದಲ್ಲಿ ಹಸ್ತಕ್ಷೇಪ, ಸಿಬಿಐ ದುರ್ಬಳಕೆ ಮೊದಲಾದ ಪ್ರವೃತ್ತಿಗಳು ಮೋದಿಯವರು ಸರ್ವಾಧಿಕಾರದತ್ತ ಹೆಜ್ಜೆ ಹಾಕುತ್ತಿರುವುದು ಗೋಚರಿಸುತ್ತದೆ.

ಸರ್ಕಾರದ ಕುಮ್ಮಕ್ಕಿನಿಂದ, ಗೋ ರಕ್ಷಣೆ ಹೆಸರಿನಲ್ಲಿ ದಲಿತರ ಮತ್ತು ಅಲ್ಪಸಂಖ್ಯಾತರ ಮೇಲೆ ಮಾರಣಾಂತಿಕ ಹಲ್ಲೆ, ಮತಾಂತರದ ಆರೋಪ ಹೊರಿಸಿ ಕ್ರಿಶ್ಚಿಯನ್ನರ ಮೇಲೆ ಹಲ್ಲೆ, ಮಹಿಳೆಯರ ಮೇಲೆ, ಮಕ್ಕಳ ಮೇಲೆ ಅತ್ಯಾಚಾರದ ಪ್ರಕರಣಗಳು ಕಳೆದ 5 ವರ್ಷಗಳಲ್ಲಿ ಆತಂಕಕಾರಿಯಾಗಿ ಹೆಚ್ಚಾಗಿವೆ.

ಗಡಿಯಲ್ಲಿ ನಡೆಯುತ್ತಿರುವ ಸೈನಿಕ ದಾಳಿ, ಪ್ರತಿದಾಳಿಗಳ ಪ್ರಕರಣಗಳ ರಾಜಕೀಕರಣ, ಎರಡು ದೇಶಗಳ ನಡುವೆ ಯುದ್ಧೋನ್ಮಾದವನ್ನು ಬಡಿದೆಬ್ಬಿಸಿ ಅದರ ರಾಜಕೀಯ ಲಾಭ ಪಡೆಯುವ ಪ್ರವೃತ್ತಿ, ಮಸೀದಿ ಇದ್ದ ಜಾಗದಲ್ಲಿ ಮಂದಿರ ಕಟ್ಟುವ ಹುನ್ನಾರ ಮುಂದಿನ ಅಪಾಯದ ಮುನ್ಸೂಚನೆಗಳಾಗಿವೆ. ಇಂತಹ ಆತಂಕಕಾರಿ ಸರ್ಕಾರ ಮತ್ತೊಮ್ಮೆ ಅಧಿಕಾರಕ್ಕೆ ಬರುವುದನ್ನು ತಡೆಯುವುದು ನಮ್ಮೆಲ್ಲರ ಇಂದಿನ ಪ್ರಮುಖ ದೇಶಪ್ರೇಮಿ ಕರ್ತವ್ಯವಾಗಿದೆ.

ಮೋದಿ ಸರ್ಕಾರದ 'ಜಮ್ಮು ಮತ್ತು ಕಾಶ್ಮೀರ' ನೀತಿ ಒಂದು ದೊಡ್ಡ ವೈಫಲ್ಯವಾಗಿದೆ. ಈ ಅವಧಿಯಲ್ಲಿ ಭಯೋತ್ಪಾದನಾ ಪ್ರಕರಣಗಳು ಶೇ. 176 ರಷ್ಟು ಹೆಚ್ಚಾಗಿವೆ. ಭಯೋತ್ಪಾದನಾ ಕೃತ್ಯಗಳಲ್ಲಿ ಪ್ರಾಣ ಕಳೆದುಕೊಂಡಿರುವ ರಕ್ಷಣಾ ಸಿಬ್ಬಂದಿಗಳ ಸಂಖ್ಯೆ ಶೇ. 93 ರಷ್ಟು ಹೆಚ್ಚಾಗಿದೆ. ಭಯೋತ್ಪಾದಕಾ ಗುಂಪುಗಳಿಗೆ ಸೇರಿಕೊಳ್ಳುತ್ತಿರುವ ಸ್ಥಳೀಯ ಕಾಶ್ಮೀರಿ ಯುವಕರ ಸಂಖ್ಯೆ 2013 ರಲ್ಲಿ ಶೇ. 16 ಇದ್ದದ್ದು 2018 ರಲ್ಲಿ ಶೇ. 164 ಆಗಿದೆ. ಇದು ಕಾಶ್ಮೀರ ಯುವಕರಲ್ಲಿ ಆಳವಾಗುತ್ತಿರುವ ಹತಾಶೆ ಮತ್ತು ಪರಕೀಯತೆಯನ್ನು ತೋರಿಸುತ್ತದೆ. ಸಂಬಂಧಪಟ್ಟವರೆಲ್ಲ ಜೊತೆಯಲ್ಲಿ ಮಾತುಕತೆಯ ರಾಜಕೀಯ ಪ್ರಕ್ರಿಯೆಯನ್ನು ಆರಂಭಿಸುವ ಭರವಸೆಯನ್ನು ಮೋದಿ ಸರ್ಕಾರ ಅನುಷ್ಠಾನ ಮಾಡದಿರುವುದು ಇದಕ್ಕೆ ಮುಖ್ಯ ಕಾರಣವಾಗಿದೆ. ಮೋದಿ ಸರ್ಕಾರ ಮತ್ತೆ ಅಧಿಕಾರಕ್ಕೆ ಬಂದರೆ ಭಾರತ–ಪಾಕಿಸ್ತಾನ ನಡುವಿನ ಯಾವುದೇ ವಿವಾದ ಬಗೆಹರಿಯುವ ಸಾಧ್ಯತೆ ಇಲ್ಲ.

ಕೇಂದ್ರದಲ್ಲಿ ಪರ್ಯಾಯ ಜಾತ್ಯಾತೀತ ಸರ್ಕಾರ ಅಧಿಕಾರಕ್ಕೆ ಬರಲಿ:

ಕೇಂದ್ರದಲ್ಲಿ ಮತ್ತೊಮ್ಮೆ ಬಿಜೆಪಿ ಸರ್ಕಾರ ಬರುವುದನ್ನು ಈ ದೇಶದ ರೈತರಾಗಲಿ, ಕಾರ್ಮಿಕರಾಗಲಿ, ದಲಿತರಾಗಲಿ, ಮಹಿಳೆಯರಾಗಲಿ, ವಿದ್ಯಾರ್ಥಿ ಯುವಜನರಾಗಲಿ ಬಯಸಲಾರರು. ಅವರು ಪರ್ಯಾಯಕ್ಕಾಗಿ ಹುಡುಕಾಟ ನಡೆಸುತ್ತಾರೆ. ಕೋಮುವಾದಿ ಅಲ್ಲದ, ಮನುವಾದಿ ಅಲ್ಲದ, ಫ್ಯಾಸಿಸ್ಟ್ ಅಲ್ಲದ ಒಂದು ಪರ್ಯಾಯ ಸರ್ಕಾರ ಅವರ ಗುರಿಯಾಗುತ್ತದೆ. ಒಂದು ಸೆಕ್ಯುಲರ್ (ಜಾತ್ಯಾತೀತ) ಸರ್ಕಾರ ಮಾತ್ರ ನಮ್ಮ ಪ್ರಜಾಸತ್ತಾತ್ಮಕ ಜಾತ್ಯಾತೀತ ಸಂವಿಧಾನವನ್ನು ರಕ್ಷಣೆ ಮಾಡಬಲ್ಲದು. ಒಂದು ಜಾತ್ಯಾತೀತ ಸರ್ಕಾರ ಮಾತ್ರ ದಲಿತರಿಗೆ, ಅಲ್ಪಸಂಖ್ಯಾತರಿಗೆ, ಆದಿವಾಸಿಗಳಿಗೆ ಮತ್ತು ಮಹಿಳೆಯರಿಗೆ ಸಮಾನತೆ ಮತ್ತು ಸ್ವಾಭಿಮಾನದ ಬದುಕನ್ನು ಗ್ಯಾರಂಟಿ ಮಾಡಬಲ್ಲದು. ಈ ಚುನಾವಣೆಯಲ್ಲಿ ಬಿಜೆಪಿಯನ್ನು ಮತ್ತು ಅದರ ಮೈತ್ರಿಕೂಟವನ್ನು (ಎನ್‌ಡಿಎ) ನಿರ್ಣಾಯಕವಾಗಿ ಸೋಲಿಸುವುದರಿಂದ ಮಾತ್ರ ಇದು ಸಾಧ್ಯ.

ಇದುವೆ ಇಂದಿನ ತುರ್ತಿನ ದೇಶ ಪ್ರೇಮಿ ಕರ್ತವ್ಯ. ದೇಶದಲ್ಲಿ ಕೋಮು ಸಾಮರಸ್ಯ, ಗಡಿಯಲ್ಲಿ ಶಾಂತಿ, ಸಹಕಾರ, ಎಲ್ಲ ರೀತಿಯ ಭಯೋತ್ಪಾದನೆ ವಿರುದ್ಧ ದೃಢವಾದ ಐಕ್ಯ ಹೋರಾಟದ ಮೂಲಕ ಮಾತ್ರ ನಾವು ಈ ದೇಶವನ್ನು ಅಭಿವೃದ್ಧಿಯತ್ತ ಹೆಜ್ಜೆ ಹಾಕಿಸಬಹುದು.

ಸಿಪಿಐ(ಎಂ) ಮತ್ತು ಎಡ ಪಕ್ಷಗಳ ಪ್ರಾತಿನಿಧ್ಯ ಹೆಚ್ಚಾಗಲಿ :

ಕೇಂದ್ರದಲ್ಲಿ ಅಧಿಕಾರಕ್ಕೆ ಬರುವ ಜಾತ್ಯಾತೀತ ಸರ್ಕಾರ ಜನಪರವಾಗಿ ಕೆಲಸಮಾಡಿ ದಾಖಲೆ ಸೃಷ್ಟಿಸಬೇಕಾದರೆ ಪ್ರಸಕ್ತ ಸರ್ಕಾರದ ಆರ್ಥಿಕ, ಸಾಮಾಜಿಕ ಮೊದಲಾದ ನೀತಿಗಳು ಬದಲಾಗಬೇಕು. ಅದು ಕೇವಲ ಒಂದು ಜಾತ್ಯಾತೀತ ಸರ್ಕಾರದಿಂದ ಸಾಧ್ಯವಾಗದು. 17ನೇ ಲೋಕಸಭೆಯಲ್ಲಿ ಸಿಪಿಐ(ಎಂ) ಮತ್ತು ಎಡ ಪಕ್ಷಗಳ ಪ್ರಾತಿನಿಧ್ಯ ಗಣನೀಯವಾಗಿ ಹೆಚ್ಚಾಗಬೇಕು.

2004 ರ ಚುನಾವಣೆಯಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳ ಒಟ್ಟು 61 ಪ್ರತಿನಿಧಿಗಳನ್ನು ಜನತೆ ಲೋಕಸಭೆಗೆ ಆರಿಸಿ ಕಳುಹಿಸಿತ್ತು. ಬಿಜೆಪಿ ಸರ್ಕಾರದಲ್ಲಿ ಪಾಲ್ಗೊಳ್ಳುವುದನ್ನು ತಡೆಯಲು ಎಡಪಕ್ಷಗಳು ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರಕ್ಕೆ ಬಾಹ್ಯ ಬೆಂಬಲ ನೀಡಿದ್ದವು. ಮಾತ್ರವಲ್ಲ ಮಾಹಿತಿ ಹಕ್ಕು ಕಾಯ್ದೆ, ಅರಣ್ಯ ಹಕ್ಕುಗಳ ಕಾಯ್ದೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ ಅಂತಹ ಕೆಲವು ಜನಪರವಾದ ಕಾಯ್ದೆಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸಿದ್ದವು. ಆದರೆ ನಂತರದ ವರ್ಷಗಳಲ್ಲಿ ಲೋಕಸಭೆಯಲ್ಲಿ ಎಡಪಕ್ಷಗಳ ಪ್ರಾತಿನಿಧ್ಯ ಕುಸಿಯಿತು. ಅದರ ದುಷ್ಪರಿಣಾಮ ದೇಶದ ರಾಜಕೀಯದ ಮೇಲೆ ಆಗಿರುವುದನ್ನೂ ನಾವು ಕಾಣುತ್ತಿದ್ದೇವೆ. ಇದರಿಂದಾಗಿ ಭಾರತದ ರಾಜಕೀಯಕ್ಕೆ ಗುಣಾತ್ಮಕವಾಗಿ ಹಿನ್ನಡೆಯಾಗಿದೆ ಎಂದು ಜನಪರ ರಾಜನೀತಿ ತಜ್ಞರು ವಿಶ್ಲೇಷಣೆ ಮಾಡುತ್ತಾರೆ.

ಲೋಕಸಭೆಯಲ್ಲಿ ತೀವ್ರ ಹಾಗೂ ಅಧ್ಯಯನ ಪೂರ್ಣವಾದ ಚರ್ಚೆಗೆ ಸಿಪಿಐ(ಎಂ) ಹೆಸರುವಾಸಿಯಾಗಿದೆ. ಸಿಪಿಐ(ಎಂ) ಪ್ರತಿನಿಧಿಗಳು ಯಾರ ಮುಲಾಜಿಲ್ಲದೆ ನಿರ್ಭಿಡೆಯಿಂದ ಮಾತನಾಡುತ್ತಾರೆ. ಸೈದ್ಧಾಂತಿಕ ಹಾಗೂ ಜನಪರ ನಿಲುವುಗಳ ವಿಷಯದಲ್ಲಿ ಅವರು ರಾಜಿ ಮಾಡಿಕೊಳ್ಳುವುದಿಲ್ಲ. ತಾನು ಬೆಂಬಲಿಸುವ ಒಂದು ರಾಜಕೀಯ ಮೈತ್ರಿ ಕೂಟವನ್ನು ಅಗತ್ಯಬಿದ್ರೆ ಟೀಕಿಸಲು ಸಿಪಿಐ(ಎಂ) ಹಿಂಜರಿಯುವುದಿಲ್ಲ.

ಆದ್ದರಿಂದ ಲೋಕಸಭೆಯಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳ ಪ್ರಾತಿನಿಧ್ಯವನ್ನು ಹೆಚ್ಚಿಸಲು ಸಾಧ್ಯವಾಗಬೇಕು. •

1. ಬಿಜೆಪಿ ಮೈತ್ರಿ ಕೂಟವನ್ನು ಸೋಲಿಸಿರಿ
2. ಲೋಕಸಭೆಯಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳ ಬಲವನ್ನು ಹೆಚ್ಚಿಸಿರಿ
3. ಕೇಂದ್ರದಲ್ಲಿ ಒಂದು ಪರ್ಯಾಯ ಜಾತ್ಯಾತೀತ ಸರ್ಕಾರ ರಚನೆಯಾಗುವುದನ್ನು ಖಚಿತಪಡಿಸಿರಿ

ಲೋಕಸಭಾ ಚುನಾವಣೆ-2019
ಮಹಿಳಾ ಬೇಡಿಕೆಗಳ ಪಟ್ಟಿ ಬಿಡುಗಡೆ

ಶಾರದಾ ಕೆ.ಎಸ್.

ದೇಶದ ಭವಿಷ್ಯವನ್ನೇ ನಿರ್ಧರಿಸುವ ಚುನಾವಣೆಯೆಂದು ಬಿಂಬಿಸಲ್ಪಡುತ್ತಿರುವ ಹದಿನೇಳನೇ ಲೋಕಸಭಾ ಚುನಾವಣೆಯಲ್ಲಿ ಮಹಿಳೆಯರ ವಿಷಯಗಳಿಗೆ ಪ್ರಾಮುಖ್ಯತೆ ಕೊಡಬೇಕೆನ್ನುವ ನಿಟ್ಟಿನಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಮಹಿಳಾ ಸಂಘಟನೆಗಳು ಮಾರ್ಚ್ 9 ರಂದು ಮಹಿಳಾ ಬೇಡಿಕೆಗಳ ಪಟ್ಟಿಯನ್ನು ಬಿಡುಗಡೆ ಮಾಡಿವೆ. ಅದರ ಕನ್ನಡ ಅವತರಣಿಕೆಯನ್ನು 2 ಏಪ್ರಿಲ್ 2019 ರಂದು ಬೆಂಗಳೂರಿನಲ್ಲಿ ರಾಜ್ಯದ ವಿವಿಧ ಸಂಘಟನೆಗಳು ಮತ್ತು ಪ್ರಗತಿಪರ ಚಿಂತಕರು ಜೊತೆಗೂಡಿ ಬಿಡುಗಡೆ ಮಾಡಲಾಯಿತು.

ಖ್ಯಾತ ಚಿಂತಕರು, ಹಿರಿಯ ಪತ್ರಕರ್ತರೂ ಆದ ಡಾ.ವಿಜಯಾ ಸಭೆಯ ಅಧ್ಯಕ್ಷತೆ ವಹಿಸಿ ಬೇಡಿಕೆಗಳನ್ನು ಬಿಡುಗಡೆ ಮಾಡಿದರು.

ಸಮಾಜದ ವಿವಿಧ ಸಮಸ್ಯೆಗಳನ್ನು ಎಂಟು ವಿಭಾಗಗಳಲ್ಲಿ ಪ್ರಸ್ತಾಪಿಸಿ ಅದು ಮಹಿಳೆಯರಿಗೆ ಹೇಗೆ ಪ್ರಸ್ತುತ ಮತ್ತು ಬಾಧಿಸುತ್ತದೆ ಎಂದು ವಿವರಿಸಿದ ಕಿರುಹೊತ್ತಿಗೆ ಕಳೆದ ಐದು ವರ್ಷಗಳಲ್ಲಿ ಮೋದಿಯವರ ಜುಮ್ಲಾ ಸರ್ಕಾರ ಮಹಿಳೆಯರನ್ನು ಹೇಗೆ ವಂಚಿಸಿದೆ ಎಂಬುದನ್ನು ವಿವರಿಸಿದೆ.

ಶಾಸನ ಸಭೆಗಳಲ್ಲಿ ಮಹಿಳಾ ಮೀಸಲಾತಿ:

ವಿಭಾಗವನ್ನು ಕುರಿತು ಮಾತನಾಡಿದ ಹಿರಿಯ ಪತ್ರಕರ್ತೆ ಡಾ.ಆರ್. ಪೂರ್ಣಿಮಾ ಇದು ನಮ್ಮ ಬೇಡಿಕೆಗಳಲ್ಲ ಹಕ್ಕುಗಳು ಎಂದರು. 1996 ರಲ್ಲಿಯೇ ಪ್ರಾರಂಭವಾದ ಚರ್ಚೆ 26 ವರ್ಷಗಳಾದರೂ ಜಾರಿಗೆ ಮಾತ್ರ ಬಾರದ ಸಂಗತಿಯನ್ನು ಕುರಿತು ಮಾತನಾಡಿ ಸಮಾನತೆಯ ದಾರಿಯಲ್ಲಿ ಇದೊಂದು ಅಡಿಗಲ್ಲೆಂದು ಬೇಡಿಕೆಯನ್ನು ಮಂಡಿಸಿದರು.

ಆಹಾರ ಭದ್ರತೆ ಮತ್ತು ಬೆಲೆ ಏರಿಕೆಯ ಬಗ್ಗೆ ಮಾತನಾಡಿ ಜನವಾದಿ ಮಹಿಳಾ ಸಂಘಟನೆಯ ಕೆ.ಎಸ್.ಲಕ್ಷ್ಮಿ ಕಳೆದ ಐದು ವರ್ಷಗಳಲ್ಲಿ ಸಂಭವಿಸಿದ ಹಸಿವಿನ ಸಾವುಗಳು, ಅಪೌಷ್ಟಿಕತೆ, ಆ ಕಾರಣದಿಂದ ಹುಟ್ಟುವ ಕೂಸುಗಳಲ್ಲಿರುವ ಕಡಿಮೆ ತೂಕದ ಪ್ರಶ್ನೆಗಳನ್ನು ವಿವರಿಸಿದರು. ಸಮಾಜವಾದೀ ರಾಷ್ಟ್ರಗಳಲ್ಲಿ ಪ್ರಜೆಗಳ ಆರೋಗ್ಯ ಹೇಗೆ ಆದ್ಯತೆಯಾಗುತ್ತದೆ ಎಂಬುದನ್ನು ವಿವರಿಸಿ ಮೋದಿ ಸರ್ಕಾರ ಯಾವುದೇ ಕಾರಣಕ್ಕೂ ಮರಳಿ ಬರುವ ಅರ್ಹತೆ ಪಡೆದಿಲ್ಲ ಎಂಬುದನ್ನು ಸೂಚ್ಯವಾಗಿ ತಿಳಿಸಿದರು.

ಡಾ.ಕೆ. ಷರೀಫಾ ನಾಗರಿಕ ಹಕ್ಕುಗಳ ರಕ್ಷಣೆಯ ಕುರಿತು ಮಾತನಾಡಿ ದೇಶದಲ್ಲಿ ವ್ಯಾಪಕವಾಗಿ ಹಬ್ಬುತ್ತಿರುವ ಕೋಮುವಾದೀ ವಿಷದ ಬಗ್ಗೆ ಖಡಕ್ ನುಡಿಗಳನ್ನಾಡಿದರು. ಸನಾತನ ಸಂಸ್ಥೆಯಂತಹ ಸಂಘಟನೆಗಳನ್ನು ನಿಷೇಧಿಸುವುದಲ್ಲದೇ ಅನ್ಯ ಮಾರ್ಗವಿಲ್ಲವೆಂಬುದನ್ನು ಸ್ಪಷ್ಟಪಡಿಸಿದರು. ಜನಾಂಗೀಯ ದ್ವೇಷವನ್ನು ಬೆಳೆಸುವವರಿಗೆ ನಮ್ಮ ಮತವಿಲ್ಲ ಎಂಬುದು ಮಹಿಳೆಯರ ಘೋಷಣೆಯಾಗಬೇಕು ಎಂದು ವಿವರಿಸಿದರು.

ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಪರವಾಗಿ ಮಾತನಾಡಿದ ಎಚ್.ಎಸ್.ಸುನಂದ ಉದ್ಯೋಗ ಮತ್ತು ವೇತನ ಕುರಿತು ಬೇಡಿಕೆಯನ್ನು ಮಂಡಿಸಿದರು. 1.5ಕೋಟಿ ಉದ್ಯೋಗ ಕಡಿತಗೊಂಡಿದ್ದು ಪ್ರಧಾನ ಮಂತ್ರಿಗಳ ವರ್ಷಕ್ಕೆ ಎರಡು ಕೋಟಿ ಉದ್ಯೋಗ ಸೃಷ್ಟಿ ಕೇವಲ ಕಟ್ಟುಕಥೆಯಾಗಿದೆ ಎಂದರು. ಅಸಂಘಟಿತ ಕ್ಷೇತ್ರ ವಿಸ್ತಾರಗೊಳ್ಳುತ್ತಿದ್ದು ಸಂಘಟಿತ ಕ್ಷೇತ್ರ ಸಂಕುಚಿತಗೊಳ್ಳುತ್ತಿದೆ ಎಂದರು. 18000/ ಕನಿಷ್ಟ ಕೂಲಿಗಾಗಿ ಹೋರಾಟ ಮಾಡಲಾಗುತ್ತಿದೆ. ಸಮಾನ ಕೆಲಸಕ್ಕೆ ಸಮಾನ ವೇತನ ಮತ್ತು ಕನಿಷ್ಟ ಕೂಲಿಗಾಗಿ ಹೋರಾಟ ಮುಂದುವರೆಯಬೇಕು ಎಂದರು.

ಸಾಮಾಜಿಕ ಅಭಿವೃದ್ಧಿಯ ಮೇಲೆ ಮಾತನಾಡಿದ ಸಮಕಾಲೀನ ಸಾಮಾಜಿಕ ಸಾಂಸ್ಕೃತಿಕ ವೇದಿಕೆಯ ಡಾ.ಎಚ್.ಜಿ.ಜಯಲಕ್ಷ್ಮಿ ಶಿಕ್ಷಣ ಆರೋಗ್ಯ ವಿಷಯಗಳಲ್ಲಿ 189 ರಾಷ್ಟ್ರಗಳಲ್ಲಿ ಭಾರತ 130ನೇ ಸ್ಥಾನದಲ್ಲಿದೆ. ಸರಕಾರೀ ಶಾಲೆಗಳು ಮುಚ್ಚಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದರು. ಇಂದಿಗೂ ಛಾವಣಿಗಳಿಲ್ಲದ, ಕಪ್ಪು ಹಲಗೆಗಳೂ ಇಲ್ಲದ ಏಕೋಪಾಧ್ಯಾಯರ ಶಾಲೆಗಳಿರುವ ಬಗ್ಗೆ ಆರೋಗ್ಯ, ಶಿಕ್ಷಣ ಸರ್ಕಾರಗಳ ಆದ್ಯತೆಯಾಗಿಲ್ಲದಿರುವ ಬಗ್ಗೆ ವಿವರಿಸಿದರು. ಜಾಗತೀಕರಣದ ಷರತ್ತುಗಳು ಜನಕಲ್ಯಾಣ ಯೋಜನೆಗಳನ್ನು ತಿಂದು ಹಾಕಿದ ಬಗ್ಗೆ, ರಷ್ಯಾದಲ್ಲಿ ಮಹಿಳೆಯರಿಗೆ ಅಂದು ಶಿಕ್ಷಣಕ್ಕೆ ಸಿಕ್ಕ ಆದ್ಯತೆಗಳನ್ನು ಪ್ರಸ್ತಾಪಿಸಿದರು. ಅಡುಗೆ ಮನೆಯಿಂದ ಸಾಮೂಹಿಕ ಸಾಮಾಜಿಕ ಕಾರ್ಯಕ್ಷೇತ್ರದಲ್ಲಿ ತೊಡಗಿಕೊಳ್ಳಲು ನೀಡಿದ ಅವಕಾಶವನ್ನು ವಿವರಿಸಿ ಒಂದು ಸಮಾಜವಾದೀ ವ್ಯವಸ್ಥೆ ಮತ್ತು ಇತರ ವ್ಯವಸ್ಥೆಗಳನ್ನು ತುಲನೆ ಮಾಡಿ ತಮ್ಮ ಬೇಡಿಕೆಯನ್ನು ಮಂಡಿಸಿದರು.

ಸಂಪನ್ಮೂಲ ಕ್ರೋಢೀಕರಣ ಮತ್ತು ಅನುದಾನ ಹಂಚಿಕೆಯ ಕುರಿತು ಪ್ರಸ್ತಾಪಿಸಿದ ಡಾ.ಲೀಲಾ ಸಂಪಿಗೆ ವೈಜ್ಞಾನಿಕ ಮತ್ತು ಪರಿಣಾಮಕಾರಿಯಾದ ಇಚ್ಛಾ ಶಕ್ತಿಯ ಕೊರತೆಯಿಂದಾಗಿ ಬೆಳೆದ ಅಸಮಾನತೆಗಳು ಎಲ್ಲೆಡೆಯೂ ವ್ಯಾಪಿಸಿರುವುದನ್ನು ಪ್ರಸ್ತಾಪಿಸಿದರು. ಮೋದಿ ಸರ್ಕಾರ ತನ್ನ ಅಸಲೀ ರೂಪವನ್ನು ಎಚ್.ಐ.ವಿ.ಏಡ್ಸ್ ಗೆ ಅನುದಾನ ಕಡಿತದ ಮೂಲಕ ಹೇಗೆ ತೋರಿಸಿತು. ಮತ್ತು ಅದರಿಂದಾಗಿ ಇನ್ನೆಷ್ಟೋ ವರ್ಷಗಳ ವರೆಗೆ ಈ ದೇಶದ ಸಾಮಾನ್ಯ ಮಹಿಳೆಯರು ಸೋಂಕು ತಗುಲಿದ ಮಕ್ಕಳೂ ಸೇರಿದಂತೆ ತಮ್ಮನ್ನು ತಾವು ಸಂಭಾಳಿಸಿಕೊಳ್ಳಬೇಕಾಗಿ ಬರುತ್ತದೆ ಎಂಬುದನ್ನು ಮನಮಿಡಿಯುವಂತೆ ಮಂಡಿಸಿದರು. ಈ ಅತ್ಯಾಧುನಿಕ ಎಂದು ಹೇಳಿಕೊಳ್ಳುವ ಕಾಲದಲ್ಲಿಯೂ ಮಹಿಳಾ ಕಾಂಡೂಮ್ ಗಳ ತಯಾರಿಕೆ ಬಳಕೆಯತ್ತ ಗಮನ ಹರಿಸದ ಆಳ್ವಿಕೆ ಮಹಿಳೆಯರನ್ನು ಇನ್ನೆಷ್ಟು ದಾರುಣ ಸ್ಥಿತಿಗೆ ತಳ್ಳಬಹುದೆಂಬ ಪರಿವೆಯೇ ಇಲ್ಲದ ಜಗತ್ತಿನ ಪರಿಚಯ ಮಾಡಿಕೊಟ್ಟರು.

ನೆಲ ನೀರು ನೈಸರ್ಗಿಕ ಸಂಪನ್ಮೂಲಗಳ ಕುರಿತು ಗೌರಿ ಮಹಿಳಾ ಮುನ್ನಡೆ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯಗಳ ಕುರಿತು ಗಾರ್ಮೆಂಟ್ ಲೇಬರ್ಸ್ ಯೂನಿಯನ್ ನ ರುಕ್ಮಿಣಿ ಬೇಡಿಕೆ ಮಂಡಿಸಿದರು.

ಅಧ್ಯಕ್ಷತೆ ವಹಿಸಿದ ಡಾ.ವಿಜಯಾ ಪ್ರಸ್ತುತ ವಿಪರೀತ ಸ್ಥಿತಿಗಳ ವಿಶ್ಲೇಷಣೆ ಮಾಡುತ್ತ ಮುಂದಿರುವ ಚುನಾವಣೆಯಲ್ಲಿ ಆಯ್ಕೆ ಮತ್ತು ಅನಿವಾರ್ಯತೆಯ ಮಧ್ಯೆ ನಾವು ಸಿಲುಕಿಕೊಂಡಿರುವುದನ್ನು ಪ್ರಸ್ತಾಪಿಸಿದರು. ಕೊಳೆತ ಹಣ್ಣಿನ ಬುಟ್ಟಿಯ ಮುಂದೆ ನಿಂತು ಆರಿಸಿಕೊಳ್ಳುವಾಗ ಅರ್ಧಕೊಳೆತ ಹಣ್ಣನ್ನು ಆರಿಸಿ ತಿನ್ನುವ ಪರಿಸ್ಥಿತಿಯಲ್ಲಿದ್ದೇವೆ. ಈಗ ಉಳಿದಿರುವ ದಾರಿ ಅದೇ ಎಂದರು.

ಎಲ್ಲರ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಮಾತನಾಡಿದ ಜನವಾದಿ ಮಹಿಳಾ ಸಂಘಟನೆಯ ಉಪಾಧ್ಯಕ್ಷೆ ಕೆ.ಎಸ್. ವಿಮಲ ಕೋಮುವಾದೀ ಬಿ.ಜೆ.ಪಿಯನ್ನು ಸೋಲಿಸುವ ಗುರಿಯನ್ನು ಮುಂದಿಟ್ಟುಕೊಂಡೇ ಮುಂದಿನ ದಿನಗಳಲ್ಲಿ ಕೆಲಸ ಮಾಡುವ ಅನಿವಾರ್ಯತೆಯನ್ನು ವಿವರಿಸಿದರು. ಕೇಂದ್ರದಲ್ಲಿ ಜನಪರ ಪರ್ಯಾಯಗಳನ್ನು ಸೂಚಿಸುವ ಶಕ್ತಿಗಳ ಪ್ರಾಬಲ್ಯವನ್ನು ಹೆಚ್ಚಿಸುವುದೂ ಸೇರಿದಂತೆ ಜಾತ್ಯಾತೀತ ಭಾರತವನ್ನು ಉಳಿಸಲು ಕೆಲಸ ಮಾಡಬೇಕೆಂದು ಕರೆ ನೀಡಿದರು.



ಜನವಾದಿ ಮಹಿಳಾ ಸಂಘಟನೆಯ ಉತ್ತರ ಜಿಲ್ಲಾ ಕಾರ್ಯದರ್ಶಿ ಕೆ.ಎಸ್.ಶಾರದಾ ಸ್ವಾಗತಿಸಿದರು. ರಾಜ್ಯ ಸಹಕಾರ್ಯದರ್ಶಿ ಶ್ರೀಮತಿ ಕೆ. ವಂದನಾರ್ಪಣೆ ಮಾಡಿದರು.

ಬೇಡಿಕೆಗಳು

ಭಾರತದ ಜನಸಂಖ್ಯೆಯಲ್ಲಿ ಅರ್ಧಷ್ಟಿರುವ ಈ ನಾಡಿನ ಮಹಿಳೆಯರಾದ ನಾವು, ದೇಶದ ಎಲ್ಲ ರಾಷ್ಟ್ರೀಯ ಮತ್ತು ಪ್ರಾಂತೀಯ ರಾಜಕೀಯ ಪಕ್ಷಗಳ ಮುಂದೆ ಮಹಿಳೆಯರ ಬೇಡಿಕೆ ಪಟ್ಟಿಯನ್ನು ಮಂಡಿಸುತ್ತಿದ್ದು, ಇವುಗಳನ್ನು ನಿಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ಅಳವಡಿಸಿಕೊಳ್ಳುವಂತೆ ಆಗ್ರಹಿಸುತ್ತೇವೆ. ನೀವು ಎಷ್ಟರ ಮಟ್ಟಿಗೆ ಈ ಬೇಡಿಕೆಗಳನ್ನು ಅಳವಡಿಸಿಕೊಳ್ಳುತ್ತೀರಿ ಎನ್ನುವುದರ ಮೇಲೆ ಮಹಿಳೆಯರಾದ ನಮ್ಮ ಬೆಂಬಲ ನಿಮಗೆ ಸಿಗಲಿದೆ ಎನ್ನುವುದನ್ನು ಸ್ಪಷ್ಟಪಡಿಸುತ್ತೇವೆ.

ರಾಜಕೀಯ ಮೀಸಲಾತಿ:

1. ಸಂಸತ್ತು ಮತ್ತು ವಿಧಾನಸಭೆಯಲ್ಲಿ ಮಹಿಳೆಯರಿಗೆ ಶೇ.33 ಮೀಸಲಾತಿ ನೀಡುವ ಮಹಿಳಾ ಮೀಸಲಾತಿ ಮಸೂದೆಯನ್ನು ಆದ್ಯತೆಯ ಮೇಲೆ ಜಾರಿಗೆ ತರಬೇಕು.
2. ಪಂಚಾಯತ್ ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಭಾಗವಹಿಸಲು ಮಹಿಳೆಯರಿಗೆ ಇರಬಹುದಾದ ಅಸಾಂವಿಧಾನಿಕ ಅಡೆ-ತಡೆಗಳನ್ನು ತೆಗೆದುಹಾಕಿ, ಶೇ.50ರ ಮೀಸಲಾತಿಯ ಅನುಸಾರ ಮಹಿಳೆಯರು ಚುನಾವಣೆ ಎದುರಿಸಲು ಎಲ್ಲ ಅನುಕೂಲಗಳನ್ನು ಮಾಡಿಕೊಡಬೇಕು.

ಆಹಾರದ ಭದ್ರತೆ ಮತ್ತು ಬೆಲೆ ಏರಿಕೆ:

3. ಆದಾಯ ತೆರಿಗೆದಾರರನ್ನು ಹೊರತುಪಡಿಸಿ ಉಳಿದ ಎಲ್ಲರಿಗೂ ಪಡಿತರ (ಪಿಡಿಎಸ್) ವ್ಯವಸ್ಥೆಯನ್ನು ವಿಸ್ತರಿಸಬೇಕು. ಒಂಟಿ ಮಹಿಳೆಯರು, ಅಸಂಘಟಿತ ವಲಯದ ಕಾರ್ಮಿಕರು, ವಿಕಲಚೇತನರು, ವಲಸಿಗರು ಮತ್ತು ಬೀದಿ ನಿವಾಸಿಗಳಿಗೆ ಆದ್ಯತೆಯ ಮೇರೆಗೆ, ಕಡ್ಡಾಯವಾಗಿ ಪಡಿತರ ಚೀಟಿ ಒದಗಿಸಬೇಕು.
4. ಪಡಿತರ ವ್ಯವಸ್ಥೆಯನ್ನು ಬಲಪಡಿಸಬೇಕು; ಬೇಳೆಕಾಳು, ಸಕ್ಕರೆ, ಟೀ, ಕಾಫಿ, ಅಡಿಗೆ ಎಣ್ಣೆ, ಹಾಲು ಮತ್ತು ತರಕಾರಿಗಳನ್ನೂ ನಿಯಂತ್ರಿತ ಬೆಲೆಯಲ್ಲಿ ಒದಗಿಸಬೇಕು. ಆಹಾರ ಸಾಮಗ್ರಿಗಳನ್ನು ಕಳ್ಳತನದಲ್ಲಿ ಕೂಡಿಟ್ಟವರ ಮೇಲೆ ಅಗತ್ಯ ಸಾಮಗ್ರಿಗಳ ಕಾಯಿದೆಯ ಅನುಸಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು.
5. ಸಬ್ಸಿಡಿ ದರದಲ್ಲಿ ಎಲ್.ಪಿ.ಜಿ. ಸಿಲಿಂಡರ್ ಒದಗಿಸುವುದಕ್ಕೆ ಯಾವುದೇ ಮಿತಿ ಹೇರಬಾರದು. ಪಡಿತರ ಅಂಗಡಿಗಳಲ್ಲಿ ನಿಯಂತ್ರಿತ ದರದಲ್ಲಿ ತಲಾ 5 ಲೀಟರ್ ಸೀಮೆ ಎಣ್ಣೆ ಒದಗಿಸಬೇಕು. ಅಂಗನವಾಡಿ ಮತ್ತು ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿ ಊಟ ಬೇಯಿಸಲು ಸಬ್ಸಿಡಿ ದರದಲ್ಲಿ ಎಲ್‌ಪಿಜಿ ಸಿಲಿಂಡರ್ ಒದಗಿಸಬೇಕು.
6. ಪೆಟ್ರೋಲ್ ಮತ್ತು ಡೀಸೆಲ್ ದರವನ್ನು ಇಳಿಸಬೇಕು.
7. ಪಡಿತರ ಚೀಟಿ ಮೂಲಕ ಪಡೆಯುವ ಆಹಾರ ಸಾಮಗ್ರಿ ಮತ್ತು ಗ್ಯಾಸ್‌ಗೆ ನೀಡುವ ಸಬ್ಸಿಡಿಯನ್ನು ಬ್ಯಾಂಕ್ ಮೂಲಕ ವಿತರಿಸುವುದನ್ನು ಹಾಗೂ ಬ್ಯಾಂಕ್ ಖಾತೆಗೆ ಆಧಾರ್ ಜೋಡಿಸುವುದನ್ನು ರದ್ದುಪಡಿಸಬೇಕು. ಸಬ್ಸಿಡಿ ಮೊತ್ತವನ್ನು ದರಕ್ಕೆ ಅನ್ವಯಿಸಬೇಕು.
8. ಸಮಗ್ರ ಶಿಶು ಅಭಿವೃದ್ಧಿ ಯೋಜನೆಯನ್ನು ಸಾರ್ವತ್ರಿಕಗೊಳಿಸಬೇಕು ಹಾಗೂ ಅಂಗನವಾಡಿಗಳಲ್ಲಿ ಬಿಸಿಯೂಟ ಒದಗಿಸಬೇಕು.
9. ಅಗತ್ಯ ಔಷಧಿಗಳ ಬೆಲೆಯನ್ನು ನಿಯಂತ್ರಿಸಬೇಕು.
10. ದೇಶದ ಎಲ್ಲ ಕಡೆಗಳಲ್ಲೂ ಆಹಾರ ಧಾನ್ಯಗಳನ್ನು ಉತ್ತಮ ಬೆಲೆಯಲ್ಲಿ ಸರ್ಕಾರ ಖರೀದಿಸುವ ವ್ಯವಸ್ಥೆಯನ್ನು ಸಮರ್ಪಕವಾಗಿ ಜಾರಿಗೆ ತರಬೇಕು.

ಉದ್ಯೋಗ ಮತ್ತು ವೇತನ:

11. ಉದ್ಯೋಗ ಖಾತ್ರಿ ಯೋಜನೆಯಲ್ಲಿ ವಾರ್ಷಿಕ ಕೆಲಸದ ದಿನಗಳಿಗೆ ವಿಧಿಸಿರುವ 100 ದಿನಗಳ ಮಿತಿಯನ್ನು ತೆಗೆಯಬೇಕು. ಮಹಿಳೆಯರಿಗೆ ಕೆಲಸದ ನಿಯಮಗಳನ್ನು ಮರು ವಿಮರ್ಶಿಸಬೇಕು ಹಾಗೂ ಕನಿಷ್ಠ ಕೂಲಿ ದೊರೆಯುವಂತೆ ಖಾತ್ರಿಪಡಿಸಬೇಕು.
12. ಉದ್ಯೋಗ ಖಾತ್ರಿ ಯೋಜನೆಯ ಕೆಲಸದ ಸ್ಥಳದಲ್ಲಿ ಮಕ್ಕಳನ್ನು ನೋಡಿಕೊಳ್ಳುವ ವ್ಯವಸ್ಥೆಯ ಜೊತೆಗೆ ಕುಡಿಯುವ ನೀರು, ನೆರಳು ಇತ್ಯಾದಿ ವ್ಯವಸ್ಥೆಗಳನ್ನು ಕಡ್ಡಾಯವಾಗಿ ಮಾಡಬೇಕು.
13. ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಬಾಕಿ ಇರುವ ಕೂಲಿಯನ್ನು ಒಮ್ಮೆಗೇ ಪಾವತಿ ಮಾಡಿ, ಯಾವುದೇ ಬಾಕಿ ಉಳಿಸದಂತೆ ಕ್ರಮವಹಿಸಬೇಕು.
14. ಉದ್ಯೋಗ ಖಾತ್ರಿ ಯೋಜನೆಯನ್ನು ನಗರ ಪ್ರದೇಶಗಳಿಗೂ ವಿಸ್ತರಿಸಬೇಕು.
15. ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಆಶಾ, ಮಧ್ಯಾಹ್ನದ ಬಿಸಿಯೂಟ ಮೊದಲಾದ ಯೋಜನೆಗಳಲ್ಲಿ ಕೆಲಸ ಮಾಡುವವರಿಗೆ ಕನಿಷ್ಠ ವೇತನ, ನಿವೃತ್ತಿ ವೇತನ ಮತ್ತು ಸುರಕ್ಷತಾ ಸೌಲಭ್ಯಗಳನ್ನು ಒದಗಿಸಬೇಕು.
16. ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತೆ ಕಾಯಿದೆ 2008ನ್ನು ಸಾರ್ವತ್ರಿಕವಾಗಿ ಈ ಕೂಡಲೇ ಜಾರಿಗೆ ತರಬೇಕು. ಎಲ್ಲ ಬಗೆಯ ಸಾಮಾಜಿಕ ಭದ್ರತೆ ಸೌಲಭ್ಯಗಳನ್ನು ಏಕ ಗವಾಕ್ಷಿ ವ್ಯವಸ್ಥೆಗೆ ಒಳಪಡಿಸಬೇಕು ಹಾಗೂ ಸಾಕಷ್ಟು ಅನುದಾನ ಒದಗಿಸಬೇಕು.
17. ಕೃಷಿ ಕೂಲಿಕಾರರ ಹಿತರಕ್ಷಣೆಗೆ ಪ್ರತ್ಯೇಕವಾದ ಕಾಯಿದೆಯನ್ನು ಜಾರಿಗೆ ತರಬೇಕು ಮತ್ತು ಅದರ ಮೂಲಕ ಅವರಿಗೂ ಕನಿಷ್ಠ ಕೂಲಿ, ಸಮಾನ ಕೂಲಿ, ಹೆರಿಗೆ ರಜೆ ಮತ್ತು ಹೆರಿಗೆ ಭತ್ಯೆ, ನಿವೃತ್ತಿ ಭತ್ಯೆ, ಮೊದಲಾದ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಒದಗಿಸಬೇಕು.
18. ಸಂಘಟಿತ ಮತ್ತು ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಮಹಿಳೆಯರನ್ನು ಸ್ವತಂತ್ರ ಆರ್ಥಿಕ ಘಟಕವಾಗಿ ಪರಿಗಣಿಸಬೇಕು.
19. ತಿಂಗಳಿಗೆ ಕನಿಷ್ಠ ರೂ. 18,000/- ವೇತನ ದೊರೆಯುವಂತೆ ಕ್ರಮ ವಹಿಸಬೇಕು.
20. ಸಾರ್ವತ್ರಿಕ ಮತ್ತು ಕಡ್ಡಾಯ ಶಿಶು ಸಂರಕ್ಷಣೆ ಯೋಜನೆಯನ್ನು ಜಾರಿಗೆ ತರಬೇಕು.
21. ಕೆಲಸದ ಸ್ಥಳದಲ್ಲಿ ದುಡಿಯುವ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯವನ್ನು ತಡೆಗಟ್ಟಲು ಕಾಯಿದೆಯ ಅನುಷ್ಠಾನವನ್ನು ಮತ್ತಷ್ಟು ಬಿಗಿಗೊಳಿಸಬೇಕು. ಅನುಷ್ಠಾನ ಮೇಲ್ವಿಚಾರಣೆಗೆ ಅಗತ್ಯ ಸಮಿತಿಗಳನ್ನು ನೇಮಕ ಮಾಡಬೇಕು.
22. ಚಿಲ್ಲರೆ ವ್ಯಾಪಾರದಲ್ಲಿ ಬೃಹತ್ ಉದ್ದಿಮೆದಾರರು ಪ್ರವೇಶಿಸದಂತೆ ಹಾಗೂ ಚಿಲ್ಲರೆ ವ್ಯಾಪಾರಿಗಳ ಹಿತರಕ್ಷಣೆಗೆ ಕ್ರಮ ಕೈಗೊಳ್ಳಬೇಕು. ವಿದೇಶೀ ಬಂಡವಾಳ ಹೂಡಿಕೆಯನ್ನು ನಿಷೇಧಿಸಬೇಕು.
23. ಮಹಿಳೆಯರ ಸ್ವಸಹಾಯ ಗುಂಪುಗಳಿಗೆ ಶೇ.4ರ ಬಡ್ಡಿದರದಲ್ಲಿ ಸಾಲ ನೀಡಬೇಕು; ಅವರಿಗೆ ಕೌಶಲ್ಯಾಭಿವೃದ್ಧಿ ತರಬೇತಿ ನೀಡಬೇಕು. ಅವರ ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯ ಒದಗಿಸಬೇಕು; ಕಿರು ಫೈನಾನ್ಸ್ ಸಂಸ್ಥೆಗಳ (ಒಈಖ) ನಿಯಂತ್ರಣಕ್ಕೆ ಕಾಯಿದೆ ರೂಪಿಸಬೇಕು.
24. ಎಲ್ಲ ಸಾರ್ವಜನಿಕ ಉದ್ಯಮಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಬೇಕು ಹಾಗೂ ಸಾರ್ವಜನಿಕ ಉದ್ದಿಮೆಗಳನ್ನು ಬಲಪಡಿಸಬೇಕು.

➡

ಸಾಮಾಜಿಕ ಅಭಿವೃದ್ಧಿ:

25. 55 ವರ್ಷ ಮೇಲ್ಪಟ್ಟ ಎಲ್ಲ ಮಹಿಳೆಯರಿಗೆ ಹಾಗೂ ವಯಸ್ಸಿನ ಮಿತಿ ಇಲ್ಲದೆ ಎಲ್ಲ ವಿಧವೆಯರು ಮತ್ತು ವಿಕಲಾಂಗ ಮಹಿಳೆಯರಿಗೆ ರೂ.2000/– ಮಾಸಿಕ ಭತ್ಯೆ ನೀಡಬೇಕು.
26. ಶಿಕ್ಷಣಕ್ಕಾಗಿ ಮಾಡುವ ವೆಚ್ಚದ ಒಟ್ಟು ಮೊತ್ತವನ್ನು ಶೇ.6ಕ್ಕೆ ಮತ್ತು ಆರೋಗ್ಯದ ಒಟ್ಟು ವೆಚ್ಚವನ್ನು ಶೇ.5ಕ್ಕೆ ಹೆಚ್ಚಿಸಬೇಕು.
27. ಖಾಸಗಿ ಆರೋಗ್ಯ ಸೇವೆಗಳನ್ನು ನಿಯಂತ್ರಣಕ್ಕೆ ಒಳಪಡಿಸಬೇಕು; ದೇಶದ ಎಲ್ಲ ಪ್ರಜೆಗಳಿಗೂ ಉಚಿತವಾದ ಸಾರ್ವತ್ರಿಕ ಆರೋಗ್ಯ ಮತ್ತು ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸಬೇಕು.
28. ಔಷಧಿಗಳ ಪ್ರಯೋಗಗಳನ್ನು ಸೂಕ್ತ ನಿಯಂತ್ರಣಕ್ಕೆ ಒಳಪಡಿಸಬೇಕು.
29. 18 ವರ್ಷ ವಯಸ್ಸಿನವರೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಒದಗಿಸಬೇಕು; ಹೆಣ್ಣು ಮಕ್ಕಳ ಶಿಕ್ಷಣಕ್ಕೆ ವಿಶೇಷ ಆದ್ಯತೆ ನೀಡಬೇಕು. ಶಾಲೆ ಮತ್ತು ಉನ್ನತ ಶಿಕ್ಷಣದಲ್ಲಿ ಖಾಸಗಿಯವರ ಪ್ರವೇಶವನ್ನು ನಿಯಂತ್ರಿಸಬೇಕು; ದುರ್ಬಲ ವರ್ಗಗಳ ವಿದ್ಯಾರ್ಥಿಗಳಿಗೆ ಹೆಚ್ಚು ಹೆಚ್ಚು ವಿದ್ಯಾರ್ಥಿ ವೇತನ ಮೊದಲಾದ ಸೌಲಭ್ಯಗಳನ್ನು ಒದಗಿಸಬೇಕು.
30. ಎಲ್ಲ ಅಭಿವೃದ್ಧಿ ಹಾಗೂ ಸುರಕ್ಷಣೆ ಯೋಜನೆಗಳಲ್ಲಿ ಒಂಟಿ ಮಹಿಳೆಯರು, ಪರಿಶಿಷ್ಟ ಜಾತಿ ಮತ್ತು ವರ್ಗದ ಮಹಿಳೆಯರು, ಅಲ್ಪಸಂಖ್ಯಾತ ಮಹಿಳೆಯರು ಮುಖ್ಯಸ್ಥರಾಗಿರುವ ಕುಟುಂಬಗಳು ಹಾಗೂ ವಿಕಲಾಂಗ ಮಹಿಳೆಯರಿಗೆ ವಿಶೇಷ ಆದ್ಯತೆ ನೀಡಬೇಕು.
31. ಆತ್ಮಹತ್ಯೆಗೆ ಶರಣಾದ ರೈತರು, ನೇಕಾರರು ಮತ್ತು ಕೃಷಿ ಕಾರ್ಮಿಕರ ಕುಟುಂಬದ ಮಹಿಳೆಯರು ಮತ್ತು ಮಕ್ಕಳ ಸೂಕ್ತ ಪುನರ್ವಸತಿಗೆ ನಿರ್ದಿಷ್ಟ ಯೋಜನೆಗಳನ್ನು ರೂಪಿಸಬೇಕು. ರೈತ ಕುಟುಂಬಗಳ ಮಹಿಳೆಯರನ್ನೂ ರೈತರೆಂದೇ ಗುರುತಿಸಿ ಸೌಲಭ್ಯಗಳ ಫಲಾನುಭವಿಗಳನ್ನಾಗಿಸಬೇಕು.
32. ಶಿಕ್ಷಣ ಮತ್ತು ಉದ್ಯೋಗದಲ್ಲಿ ಮುಸ್ಲಿಮರಿಗೆ ಮೀಸಲಾತಿ ನೀಡುವುದಕ್ಕೆ ಸಂಬಂಧಿಸಿದ ಸಾಚಾರ್ ಸಮಿತಿ ಮತ್ತು ರಂಗನಾಥ್ ಮಿಶ್ರಾ ಸಮಿತಿಗಳ ವರದಿಗಳನ್ನು ಅನುಷ್ಠಾನಗೊಳಿಸಬೇಕು.

ನೆಲ, ನೀರು ಮತ್ತು ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ:

33. ಭೂರಹಿತ ಕುಟುಂಬಗಳಿಗೆ ಮಹಿಳೆಯರೊಂದಿಗೆ ಜಂಟಿ ಒಡೆತನದಲ್ಲಿ ಭೂ ಒಡೆತನ ನೀಡಬೇಕು.
34. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಮನೆ ಇಲ್ಲದವರಿಗೆ ನಿವೇಶನಗಳನ್ನು ಒದಗಿಸಬೇಕು; ಇದರಲ್ಲಿ ಒಂಟಿ ಮಹಿಳೆಯರಿಗೆ ಆದ್ಯತೆ ನೀಡಬೇಕು ಹಾಗೂ ಇತರೆ ಪ್ರಕರಣಗಳಲ್ಲಿ ಗಂಡ –ಹೆಂಡತಿಗೆ ಜಂಟಿ ಒಡೆತನದಲ್ಲಿ ನಿವೇಶನ ನೀಡುವುದನ್ನು ಕಡ್ಡಾಯಗೊಳಿಸಬೇಕು.
35. ಅರಣ್ಯ ಹಕ್ಕು ಕಾಯಿದೆಯನ್ನು ಸಮರ್ಥವಾಗಿ ಅನುಷ್ಠಾನಗೊಳಿಸಬೇಕು. ಅರಣ್ಯದೊಳಗೆ ಬದುಕುವ ಆದಿವಾಸಿಗಳನ್ನು ಯಾವುದೇ ಕಾರಣಕ್ಕೂ ಒಕ್ಕಲೆಬ್ಬಿಸಬಾರದು.
36. ಗೋಮಾಳ, ಸಮುದಾಯ ಅರಣ್ಯ, ಕುರುಚಲು ಅರಣ್ಯ ಪ್ರದೇಶಗಳ ಅತಿಕ್ರಮಣ, ಹಸ್ತಾಂತರ, ವಶಪಡಿಸಿಕೊಳ್ಳುವಿಕೆಗಳನ್ನು ನಿಷೇಧಿಸಬೇಕು ಹಾಗೂ ಇಂತಹ ಸಾರ್ವಜನಿಕ ಭೂಮಿಗಳ ಸಾಮುದಾಯಿಕ ಬಳಕೆ ಹಕ್ಕನ್ನು ಮಹಿಳೆಯರಿಗೆ, ವಲಸಿಗರಿಗೆ, ಅಲೆಮಾರಿ ಸಮುದಾಯಗಳಿಗೆ, ಪರಿಶಿಷ್ಟ ಜಾತಿ ಮತ್ತು ವರ್ಗದ ಸಮುದಾಯಗಳಿಗೆ ವಹಿಸಿಕೊಡಬೇಕು.
37. ಕೈಗಾರಿಕೆಗಳು, ಮೂಲಸೌಕರ್ಯ ಅಭಿವೃದ್ಧಿ ಮತ್ತು ನಗರೀಕರಣ ಯೋಜನೆಗಳ ಕಾರಣ ಸ್ಥಳಾಂತರಗೊಳ್ಳುವ ಸಮುದಾಯಗಳಲ್ಲಿ ಇರುವ ಮಹಿಳೆಯರನ್ನು ಪ್ರತ್ಯೇಕ ಸಂತ್ರಸ್ತರೆಂದು ಗುರುತಿಸಬೇಕು; ಮುಂಚಿತವಾಗಿ ತಿಳಿಸಿ, ಅವರ ಸಮ್ಮತಿ ಪಡೆಯದೆ ಅವರನ್ನು ಸ್ಥಳಾಂತರ ಮಾಡಬಾರದು; ಸ್ಥಳಾಂತರಗೊಂಡ ಮಹಿಳೆಯರಿಗೆ ಬದಲಿ ಉದ್ಯೋಗ ಅಥವಾ ಜೀವನಾಧಾರ ಮೂಲವನ್ನು ಒದಗಿಸಿಕೊಡಬೇಕು.
38. ನೀರಿನ ಮೂಲಗಳು ಹಾಗೂ ನೀರು ಸರಬರಾಜು ವ್ಯವಸ್ಥೆಯ ಖಾಸಗೀಕರಣವನ್ನು ಈ ಕೂಡಲೆ ನಿಲ್ಲಿಸಬೇಕು. ಕುಡಿಯುವ ನೀರು ಮತ್ತು ಕಿರು ನೀರಾವರಿ ಯೋಜನೆಗಳು ನೀರಿನ ಸಂಪನ್ಮೂಲ ಬಳಕೆಗೆ ಮೊದಲ ಆದ್ಯತೆಯಾಗಿರಬೇಕು.

ಸಂಪನ್ಮೂಲ ಕ್ರೋಢೀಕರಣ ಮತ್ತು ಅನುದಾನ ವಿತರಣೆ:

39. ಜನಪರವಾದ ಯೋಜನೆಗಳಿಗೆ ಅನುದಾನ ಕಡಿತ ಮಾಡುವುದನ್ನು ಈ ಕೂಡಲೆ ನಿಲ್ಲಿಸಬೇಕು; ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಯೋಜನೆಗಳಿಗೆ ಅನುದಾನದ ಮೊತ್ತವನ್ನು ಗಮನಾರ್ಹವಾಗಿ ಹೆಚ್ಚಿಸಬೇಕು; ಮೀಸಲಿಟ್ಟ ಅನುದಾನವನ್ನು ಪೂರ್ಣವಾಗಿ ಬಳಕೆ ಮಾಡಿಕೊಳ್ಳುವಂತಹ ವ್ಯವಸ್ಥೆಯನ್ನು ಜಾರಿಗೆ ತರಬೇಕು.
40. ಮಹಿಳೆಯರ ಮೇಲಿನ ದೌರ್ಜನ್ಯ ನಿಯಂತ್ರಿಸುವ ಉದ್ದೇಶದ ಕಾಯಿದೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಕೇಂದ್ರದ ಆರ್ಥಿಕ ನೆರವನ್ನು ಹೆಚ್ಚಿಸಬೇಕು; ಲೈಂಗಿಕ ದೌರ್ಜನ್ಯ, ಆಸಿಡ್ ದಾಳಿ, ಮರ್ಯಾದೆಗೇಡು ಹತ್ಯೆ, ಮೊದಲಾದ ಹಿಂಸಾ ಕೃತ್ಯಗಳ ಸಂತ್ರಸ್ತ ಮಹಿಳೆಯರ ನೆರವಿಗಾಗಿ ವಿಶೇಷ ಯೋಜನೆಗಳನ್ನು ರೂಪಿಸಬೇಕು.
41. ಎಲ್ಲ ಇಲಾಖೆಗಳು ತಮ್ಮ ಆಯವ್ಯಯದಲ್ಲಿ ಅರ್ಧದಷ್ಟನ್ನು ಮಹಿಳೆಯರಿಗಾಗಿಯೇ ಮೀಸಲಿಡುವಂತೆ ನಿರ್ದೇಶನ ನೀಡಬೇಕು; ಪರಿಶಿಷ್ಟ ಜಾತಿ, ವರ್ಗ, ಅಲ್ಪಸಂಖ್ಯಾತರು ಮತ್ತು ಇತರೆ ದುರ್ಬಲ ವರ್ಗಗಳಿಗೆ ಮೀಸಲಿಟ್ಟ ಅನುದಾನದಲ್ಲಿ ಅರ್ಧದಷ್ಟು ಅನುದಾನ ಆಯಾ ವರ್ಗದ ಮಹಿಳೆಯರಿಗಾಗಿ ವಿನಿಯೋಗ ಆಗುವಂತೆ ಕ್ರಮ ವಹಿಸಬೇಕು.
42. ಶ್ರೀಮಂತರು ಮತ್ತು ಕಾರ್ಪೊರೆಟ್ ಕಂಪೆನಿಗಳಿಗೆ ತೆರಿಗೆ ವಿನಾಯಿತಿ ನೀಡುವುದನ್ನು ನಿಲ್ಲಿಸಬೇಕು. ಶ್ರೀಮಂತರು ಮತ್ತು ಕಾರ್ಪೊರೆಟ್ ಕಂಪೆನಿಗಳ ಮೇಲಿನ ತೆರಿಗೆ ಮೊತ್ತವನ್ನು ಆದಾಯಕ್ಕೆ ತಕ್ಕಂತೆ ಹೆಚ್ಚಿಸಬೇಕು; ಕಪ್ಪು ಹಣವನ್ನು ಪತ್ತೆ ಮಾಡಿ ಆ ಹಣವನ್ನು ಶಿಕ್ಷಣ, ಆರೋಗ್ಯ, ಮೊದಲಾದ ಅಭಿವೃದ್ಧಿ ಯೋಜನೆಗಳಲ್ಲಿ ತೊಡಗಿಸಬೇಕು.
43. ಬ್ಯಾಂಕುಗಳಿಗೆ ಸಾಲ ಮರುಪಾವತಿ ಮಾಡದೆ ಇರುವ ಶ್ರೀಮಂತರನ್ನು ಪತ್ತೆ ಮಾಡಿ ಅವರ ಮೇಲೆ ತೀವ್ರ ಕ್ರಮಕೈಗೊಳ್ಳಲು ಕಾನೂನು ರೂಪಿಸಬೇಕು.

ನಾಗರಿಕ ಹಕ್ಕುಗಳ ರಕ್ಷಣೆ:

44. ಕೋಮು ಗಲಭೆಗಳನ್ನು ನಿಯಂತ್ರಿಸಲು ಕಟ್ಟುನಿಟ್ಟಿನ ಕಾಯಿದೆಯನ್ನು ಜಾರಿಗೆ ತರಬೇಕು. ಕೋಮು ಗಲಭೆಗಳ ಸಂತ್ರಸ್ತರಿಗೆ, ಅದರಲ್ಲೂ ಮುಖ್ಯವಾಗಿ ಮಹಿಳೆಯರು ಮತ್ತು ಮಕ್ಕಳಿಗೆ ಅತ್ಯಂತ ಶೀಘ್ರವಾಗಿ ಪರಿಹಾರ ದೊರೆಯುವಂತೆ ಮಾಡಬೇಕು.
45. ಮೂಢನಂಬಿಕೆಗಳು ಮತ್ತು ಅವೈಜ್ಞಾನಿಕ ನಡವಳಿಕೆಗಳನ್ನು ನಿಯಂತ್ರಿಸಲು ಕಾಯಿದೆ ಜಾರಿಗೆ ತರಬೇಕು. ಸನಾತನ ಸಂಸ್ಥೆಯಂತಹ ಕೊಲೆಗಾರ ಸಂಸ್ಥೆಗಳನ್ನು ನಿಷೇಧಿಸಬೇಕು.
46. ಪರಿಶಿಷ್ಟ ಜಾತಿ ಮತ್ತು ವರ್ಗಗಳ (ದೌರ್ಜನ್ಯ ನಿಯಂತ್ರಣ) ಕಾಯಿದೆಯನ್ನು ಮತ್ತಷ್ಟು ಬಲಪಡಿಸಬೇಕು. ಸಾರ್ವಜನಿಕ ಬಾವಿ, ದೇವಸ್ಥಾನ, ಹೊಟೇಲು, ಚಹಾ ಅಂಗಡಿ ಮೊದಲಾದ ಸಾರ್ವಜನಿಕ ಸ್ಥಳಗಳನ್ನು ಬಳಸಲು ತಡೆಯೊಡ್ಡುವುದನ್ನು, ಸಾಮಾಜಿಕ ಮತ್ತು ಆರ್ಥಿಕ ಬಹಿಷ್ಕಾರ ಹಾಕುವುದನ್ನು, ಚುನಾವಣೆಗೆ ಸ್ಪರ್ಧಿಸದಂತೆ ತಡೆಯುವುದನ್ನೂ ದೌರ್ಜನ್ಯ ತಡೆಕಾಯಿದೆಯ ವ್ಯಾಪ್ತಿಗೆ ತರಬೇಕು.



47. ಮಲ ತೆಗೆಯುವ ಪದ್ಧತಿ ನಿಷೇಧಕಾಯಿದೆಯನ್ನು ಸಮರ್ಪಕವಾಗಿ ಜಾರಿಗೆ ತರಬೇಕು ಮತ್ತು ಮಲಹೊರುವ ಸಮುದಾಯದ ವ್ಯಕ್ತಿಗಳ ಪುನರ್ವಸತಿಗೆ ಸಮರ್ಪಕ ಯೋಜನೆ ರೂಪಿಸಿ, ಹೆಚ್ಚಿನ ಅನುದಾನವನ್ನು ಒದಗಿಸಬೇಕು.
48. ಸುಳ್ಳು ಮೊಕದ್ದಮೆಗಳ ಮೇರೆಗೆ ಬಂಧಿಸಲಾದ ಅಲ್ಪಸಂಖ್ಯಾತ ಮತ್ತು ಆದಿವಾಸಿ ಸಮುದಾಯಗಳ ಕುಟುಂಬಗಳಿಗೆ ಪರಿಹಾರ ಮತ್ತು ನ್ಯಾಯ ದೊರಕಿಸಿಕೊಡಲು ಸೂಕ್ತ ಕ್ರಮಕೈಗೊಳ್ಳಬೇಕು. ಕಾಶ್ಮೀರವೂ ಸೇರಿದಂತೆ ಗಲಭೆ ಪೀಡಿತ ಪ್ರದೇಶಗಳಲ್ಲಿ ಮಾನವ ಹಕ್ಕುಗಳನ್ನು ಉಲ್ಲಂಘಿಸುವ ಹಾಗೂ ಮಾನವ ಹಕ್ಕುಗಳಿಗೆ ಚ್ಯುತಿ ತರುವ ಸೇನೆ, ಅರೆಸೇನೆ, ಪೊಲೀಸ್ ಹಾಗೂ ಇತರೆರಕ್ಷಣಾ ಸಿಬ್ಬಂದಿಗಳ ಮೇಲೆ ಉಗ್ರಕ್ರಮ ಕೈಗೊಳ್ಳಬೇಕು.
49. ಗಲಭೆ ಪೀಡಿತ ಪ್ರದೇಶಗಳಲ್ಲಿ ಆಂತರಿಕ ಕ್ಷೋಭೆ ಹೆಚ್ಚದಂತೆ ತಡೆಯಲು ಸಮುದಾಯಗಳ ಜೊತೆಗೆ ಮಾತುಕತೆ ನಡೆಸಬೇಕು. ಸ್ಥಳೀಯ ಸಮುದಾಯಗಳ ಸಮಸ್ಯೆಗಳ ಪರಿಹಾರಕ್ಕೆ ವಿಶೇಷ ಆರ್ಥಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕು. ಆ ಜನರ ಬದುಕಿನ ಹಕ್ಕನ್ನು ಹಾಗೂ ಘನತೆಯನ್ನು ಎತ್ತಿ ಹಿಡಿಯಬೇಕು.
50. ವಸಾಹತುಶಾಹಿ ಧೋರಣೆಯ ದೇಶದ್ರೋಹದ ಕಾನೂನನ್ನು ರದ್ದು ಪಡಿಸಬೇಕು ಮತ್ತು ಭಯದ ಸಂಸ್ಕೃತಿ ಹರಡದಂತೆ ಕ್ರಮ ಕೈಗೊಳ್ಳಬೇಕು.
51. ಈಶಾನ್ಯ ರಾಜ್ಯಗಳ ಜನರ ಮೇಲೆ ನಡೆಯುವ ಜನಾಂಗೀಯ ಹಲ್ಲೆಯನ್ನು ನಿಷೇಧಿಸಲು ಸೂಕ್ತ ಕಾಯಿದೆಯನ್ನು ರೂಪಿಸಬೇಕು. ಸಿಟಿಜನ್‌ಶಿಪ್ ಮಸೂದೆಯನ್ನು ರದ್ದುಪಡಿಸಬೇಕು ಮತ್ತು ಅಸ್ಸಾಂನಲ್ಲಿ ಜನರ ಮೇಲೆ ಆಡಳಿತ ಸಂಸ್ಥೆಗಳೇ ನಡೆಸುತ್ತಿರುವ ದೌರ್ಜನ್ಯವನ್ನು ಕೊನೆಗಾಣಿಸಬೇಕು.

ಮಹಿಳೆಯರ ಮೇಲಿನ ದೌರ್ಜನ್ಯ ಮತ್ತು ಕಾನೂನು ಸಂಬಂಧಿ ವಿಷಯಗಳು:

52. ನ್ಯಾಯಮೂರ್ತಿ ವರ್ಮಾ ಆಯೋಗದ ಎಲ್ಲ ಶಿಫಾರಸ್ಸುಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ಪರಿಶಿಷ್ಟ ಜಾತಿ, ವರ್ಗ ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಮಹಿಳೆಯರ ಮೇಲೆ ನಡೆಯುವ ಅತ್ಯಾಚಾರವನ್ನು ಗಂಭೀರ ಲೈಂಗಿಕ ಅಪರಾಧಗಳಾಗಿ ಪರಿಗಣಿಸಬೇಕು.
53. ವೈವಾಹಿಕ ಅತ್ಯಾಚಾರವನ್ನು ಅಪರಾಧವನ್ನಾಗಿ ಪರಿಗಣಿಸಬೇಕು. ಭಾರತೀಯ ದಂಡ ಸಂಹಿತೆಯ ಸೆಕ್ಷನ್ 498ಎ ವರದಕ್ಷಿಣೆ ನಿಷೇಧಕಾಯ್ದೆಯನ್ನು ಸಂರಕ್ಷಿಸಬೇಕು.
54. ಕೌಟುಂಬಿಕ ದೌರ್ಜನ್ಯತಡೆ ಕಾಯಿದೆ, ಲೈಂಗಿಕ ದೌರ್ಜನ್ಯ ನಿಯಂತ್ರಣ ಕಾಯಿದೆ, ಹಾಗೂ ಮಹಿಳೆಯರ ಮೇಲಿನ ದೌರ್ಜನ್ಯಗಳು ಮತ್ತು ಲೈಂಗಿಕ ಹಿಂಸೆಯನ್ನು ತಡೆಗಟ್ಟಲು ಇರುವ ಕಾಯಿದೆಗಳನ್ನು ಹಾಗೂ ಪರಿಹಾರ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಕೇಂದ್ರದಿಂದ ಅನುದಾನ ಒದಗಿಸಬೇಕು.
55. ಮಹಿಳೆಯರ ಮೇಲಿನ ದೌರ್ಜನ್ಯಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ನಿಗದಿತ ಸಮಯದೊಳಗೆ ಪರಿಹರಿಸಬೇಕು.
56. ಗರ್ಭಾವಸ್ಥೆಯಲ್ಲಿ ಶಿಶು ಲಿಂಗಪತ್ತೆ ನಿಷೇಧಿಸುವ ಕಾಯಿದೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು ಮತ್ತು ಸುರಕ್ಷಿತ ಗರ್ಭಪಾತದ ಮಹಿಳೆಯರ ಹಕ್ಕನ್ನು ರಕ್ಷಿಸಬೇಕು.
57. ಜೀವನ ಸಂಗಾತಿಗಳನ್ನು ಆಯ್ಕೆ ಮಾಡಿಕೊಳ್ಳುವ ಯುವಜನರ ಹಕ್ಕನ್ನು ರಕ್ಷಿಸಬೇಕು. ಖಾಪ್ ಪಂಚಾಯತ್‌ಗಳನ್ನು ಹಾಗೂ ಮರ್ಯಾದೆಯ ಹೆಸರಿನಲ್ಲಿ ನಡೆಯುವ ಹತ್ಯೆಗಳನ್ನು ನಿಷೇಧಿಸಲು ಪ್ರತ್ಯೇಕ ಕಾಯಿದೆ ರೂಪಿಸಬೇಕು.
58. 16 ವರ್ಷಕ್ಕಿಂತ ಹೆಚ್ಚಿನ ವಯಸ್ಸಿನ ಹುಡುಗಿಯು, ತನ್ನ ಒಪ್ಪಿಗೆಯ ಮೇರೆಗೆ ಲೈಂಗಿಕ ಸಂಪರ್ಕ ಹೊಂದಿದ್ದರೆ ಹಾಗೂ ಇಬ್ಬರ ನಡುವಿನ ವಯಸ್ಸಿನ ಅಂತರ ಮೂರು ವರ್ಷಕ್ಕಿಂತ ಹೆಚ್ಚು ಇಲ್ಲದಿದ್ದಲ್ಲಿ ಅದನ್ನು ಅತ್ಯಾಚಾರವೆಂದು ಪರಿಗಣಿಸಬಾರದು.
59. ದುಡಿಮೆ ಮತ್ತು ಲೈಂಗಿಕ ಕಾರಣಗಳಿಗೆ ಮಹಿಳೆಯರು ಮತ್ತು ಮಕ್ಕಳನ್ನು ಕದ್ದು ಸಾಗಿಸುವುದನ್ನು, ಬಳಕೆ ಮಾಡುವುದನ್ನು ನಿಲ್ಲಿಸಲು ಸಮಗ್ರ ಕಾಯಿದೆಯನ್ನು ರೂಪಿಸಬೇಕು. ಮಾನವ ಕಳ್ಳಸಾಗಣೆ ಮತ್ತು ವೇಶ್ಯಾವಾಟಿಕೆಯ ನಡುವೆ ಇರುವ ಸಂಬಂಧವನ್ನು ಗುರುತಿಸಬೇಕು.
60. ಎಲ್ಲ ಬಗೆಯ ಬಾಲ್ಯ ದುಡಿಮೆಯನ್ನು ನಿಷೇಧಿಸಬೇಕು. ಕೌಟುಂಬಿಕ ವೃತ್ತಿಯಲ್ಲಿಯೂ ಬಾಲ್ಯ ದುಡಿಮೆಯನ್ನು ನಿಷೇಧಿಸಬೇಕು.
61. ಹುಟ್ಟಿದ ಮನೆ ಹಾಗೂ ಮದುವೆಯಾದ ಮನೆ ಎರಡರಲ್ಲೂ ಮಹಿಳೆಯರಿಗೆ ಸಮಾನ ಆಸ್ತಿಯ ಹಕ್ಕನ್ನು ಒದಗಿಸಬೇಕು. ಮಹಿಳೆ ಮತ್ತು ಮಕ್ಕಳ ಜೀವನಾಂಶ ಕಾಯಿದೆಯನ್ನು ಬಲಪಡಿಸಬೇಕು. ವಿಚ್ಛೇದಿತ ಹಾಗೂ ಪ್ರತ್ಯೇಕಗೊಂಡ ಮಹಿಳೆಯರಿಗೆ ರಕ್ಷಣೆ, ಜೀವನಾಂಶ ಮತ್ತು ಪರಿಹಾರ ಒದಗಿಸಲು ಹೆಚ್ಚಿನ ಬಿಗಿಯಾದ ಕ್ರಮಗಳನ್ನು ಕೈಗೊಳ್ಳಬೇಕು.
62. ತ್ರಿವಳಿ ತಲಾಖನ್ನು ಕ್ರಿಮಿನಲ್ ಅಪರಾಧವೆಂದು ಪರಿಗಣಿಸುವ ಕಾಯಿದೆಯನ್ನು ರದ್ದುಪಡಿಸಬೇಕು.
63. ಎಲ್ಲ ಮದುವೆಗಳ ನೋಂದಣಿಯನ್ನು ಕಡ್ಡಾಯಗೊಳಿಸಬೇಕು.
64. ಮದ್ಯ ತಯಾರಿ ಮತ್ತು ಮಾರಾಟದ ಮೇಲೆ ನಿಯಂತ್ರಣ ಹೇರುವ ಅಧಿಕಾರವನ್ನು ಗ್ರಾಮ ಸಭೆ ಮತ್ತು ವಾರ್ಡ್ ಸಭೆಗಳಲ್ಲಿ ಇರುವ ಮಹಿಳೆಯರಿಗೆ ವಹಿಸಿಕೊಡಬೇಕು. ಮದ್ಯಪಾನದ ಕೆಡುಕುಗಳ ಕುರಿತು ತಿಳುವಳಿಕೆ ಮೂಡಿಸುವ ಕಾರ್ಯಕ್ರಮಗಳನ್ನು ತೀವ್ರಗೊಳಿಸಬೇಕು. ಅಬಕಾರಿ ಕಾನೂನನ್ನು ಸಮರ್ಪಕವಾಗಿ ಜಾರಿಗೊಳಿಸಬೇಕು.
65. ಲಿಂಗಾಂತರಿಗಳು, ಸಮಾನ ಲಿಂಗಿಗಳು, ದ್ವಿಲಿಂಗಿಗಳಿಗೆ ಸಾಮಾಜಿಕ ಮತ್ತು ಆರ್ಥಿಕ ರಕ್ಷಣೆ ಒದಗಿಸಬೇಕು. ಇವರುಗಳ ನಡುವಿನ ಲೈಂಗಿಕ ಸಂಬಂಧವನ್ನು ಮಾನ್ಯತೆ ಮಾಡಬೇಕು.

ಇತರೆ ಬೇಡಿಕೆಗಳು:

66. ಚುನಾಯಿತ ಪ್ರತಿನಿಧಿಗಳು, ಆಡಳಿತಗಾರರು ಹಾಗೂ ಮಾಧ್ಯಮಗಳು ಮಹಿಳೆಯರ ಕುರಿತು ಅವಹೇಳನಕಾರಿ ಮಾತುಗಳನ್ನು ಆಡದಂತೆ ನಿಯಮಗಳನ್ನು ರೂಪಿಸಬೇಕು ಮತ್ತು ಇದನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು.
67. ರಾಷ್ಟ್ರ ಮತ್ತು ರಾಜ್ಯ ಮಟ್ಟದ ಮಹಿಳಾ ಆಯೋಗಗಳು ಸ್ವತಂತ್ರವಾಗಿ ಕೆಲಸ ನಿರ್ವಹಿಸುವಂತೆ ಬಲಪಡಿಸಬೇಕು. ಈ ಆಯೋಗಗಳಿಗೆ ಸದಸ್ಯರು ಮತ್ತು ಅಧ್ಯಕ್ಷರನ್ನು ನೇಮಕ ಮಾಡಲು ಸಮಿತಿಯೊಂದನ್ನು ರಚಿಸಬೇಕು. ಈ ಸಮಿತಿಯಲ್ಲಿ ಹಾಗೂ ಆಯೋಗದಲ್ಲಿ ಮಹಿಳಾ ವಿಷಯಗಳ ಬಗ್ಗೆ ಸರಿಯಾದ ತಿಳುವಳಿಕೆ ಇರುವಂತಹ ಮಹಿಳಾ ಪರ ಹೋರಾಟಗಾರರು, ಚಿಂತಕರು, ವೃತ್ತಿಪರರನ್ನು ನೇಮಕ ಮಾಡಬೇಕು. ಆಯೋಗಕ್ಕೆರಾಜಕೀಯ ನೇಮಕಾತಿ ಮಾಡುವುದನ್ನು ನಿಲ್ಲಿಸಬೇಕು.
68. ದೇಶದ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಮಹಿಳಾ ಅಧ್ಯಯನ ವಿಭಾಗಗಳನ್ನು ಆರಂಭಿಸಬೇಕು ಮತ್ತು ಅದಕ್ಕೆ ಬೇಕಾದ ಧನ ಸಹಾಯವನ್ನು ವಿಶ್ವ ವಿದ್ಯಾಲಯ ಧನ ಸಹಾಯ ಆಯೋಗದ ಮೂಲಕ ಒದಗಿಸಬೇಕು.

ಧ್ರುವೀಕರಣದ, ದ್ವೇಷದ, ವಿಜ್ಞಾನ ಮತ್ತು ವೈಚಾರಿಕತೆಯ ವಿರೋಧಿ ಆಡಳಿತವನ್ನು ಕೊನೆಗೊಳಿಸಲು ಬರಹಗಾರರು, ರಂಗಕರ್ಮಿಗಳು, ವಿಜ್ಞಾನಿಗಳು ಮತ್ತು ಸಿನೆಮಾ ನಿರ್ದೇಶಕರುಗಳ ಮನವಿಗಳು

17ನೇ ಸಾರ್ವತ್ರಿಕ ಚುನಾವಣೆ ಅಕ್ಷರಶಃ ಒಂದು ವಿಶಿಷ್ಟ ಚುನಾವಣೆಯಸ್ವರೂಪ ಪಡೆಯುತ್ತಿದೆ. ಒಂದೆಡೆಯಲ್ಲಿ ಪ್ರಧಾನ ಮಂತ್ರಿಗಳೂ ಸೇರಿದಂತೆ ಆಳುವ ಮಂದಿ ಅಧಿಕಾರ ಉಳಿಸಿಕೊಳ್ಳಲು ಯಾವುದೇ ಮಟ್ಟಕ್ಕೂ ಇಳಿಯಲು ಹೇಸುತ್ತಿಲ್ಲ. ಇನ್ನೊಂದೆಡೆಯಲ್ಲಿ ಇದುವರೆಗೆ ರಾಜಕೀಯ ತಮಗಲ್ಲ ಎಂದು ದೂರವುಳಿದಿದ್ದ ವಿಭಾಗಗಳೂ ಈ ಬಾರಿ ಮತದಾರರಿಗೆ ಬುದ್ಧಿವಂತಿಕೆಯಿಂದ ಮತ ಚಲಾಯಿಸುವಂತೆ ಮನವಿ ಮಾಡುತ್ತಿದ್ದಾರೆ. ಮಾರ್ಚ್ 29ರಂದು ದೇಶದ 103 ಪ್ರಮುಖ ಸಿನೇಮಾ ನಿರ್ದೇಶಕರುಗಳು, ಎಪ್ರಿಲ್ 1ರಂದು 200ಕ್ಕೂ ಹೆಚ್ಚು ಸಾಹಿತಿಗಳು, ಎಪ್ರಿಲ್ 3ರಂದು 150ಕ್ಕೂ ಹೆಚ್ಚು ವಿಜ್ಞಾನಿಗಳು ಹಾಗೂ ಎಪ್ರಿಲ್ 4ರಂದು 600ಕ್ಕೂ ಹೆಚ್ಚು ರಂಗಕರ್ಮಿಗಳು ದೇಶದ ಮಮವಿ ಮಾಡಿದ್ದಾರೆ. ಅವುಗಳ ಒಂದು ನೋಟ.

ದ್ವೇಷ ರಾಜಕೀಯದ ವಿರುದ್ಧ ಮತ ನೀಡಿ–200ಕ್ಕೂ ಹೆಚ್ಚು ಬರಹಗಾರರ ಮನವಿ

17ನೇ ಲೋಕಸಭಾ ಚುನಾವಣೆಗಳ ಸಂದರ್ಭದಲ್ಲಿ ಭಾರತದ ಉದ್ದಗಲದಲ್ಲೂ ಹರಡಿರುವ 200ಕ್ಕೂ ಹೆಚ್ಚಿನ ಬರಹಗಾರರು ಸಹಿ ಮಾಡಿದ ಮನವಿಯೊಂದನ್ನು ಬಿಡುಗಡೆ ಮಾಡಿದ್ದಾರೆ. "ನಾವು ದ್ವೇಷ ರಾಜಕೀಯದ ವಿರುದ್ಧ ಮತ ನೀಡೋಣ. ನಾವು ಸಮಾನ ಹಾಗೂ ಬಹುತ್ವ ಭಾರತಕ್ಕಾಗಿ ಮತ ನೀಡೋಣ" ಎಂದಿದ್ದಾರೆ.

ಭಾರತದ ಬರಹಗಾರರ ವೇದಿಕೆಯ ಪರವಾಗಿ ಕೆ.ಸಚ್ಚಿದಾನಂದನ್ ಮತ್ತು ಗೀತಾ ಹರಿಹರನ್ ಎಪ್ರಿಲ್ 1ರಂದು ಸೋಮವಾರ ಈ ಹೇಳಿಕೆ ನೀಡಿದ್ದಾರೆ.

"ನಮ್ಮ ದೇಶವಿಂದು ಚುನಾವಣೆಯ ಸಂದರ್ಭದಲ್ಲಿ ಕವಲು ದಾರಿಯಲ್ಲಿದೆ. ನಮ್ಮ ಸಂವಿಧಾನವು ತನ್ನ ಪ್ರಜೆಗಳಿಗೆ ಸಮಾನ ಹಕ್ಕುಗಳನ್ನು, ತಿನ್ನುವ, ಆರಾಧಿಸುವ ಹಾಗೂ ಬಯಸಿದಂತೆ ಬದುಕುವ ಸ್ವಾತಂತ್ರ್ಯವನ್ನು, ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಭಿನ್ನತೆಯ ಹಕ್ಕನ್ನು ಖಾತ್ರಿಗೊಳಿಸಿದೆ. ಆದರೆ ಕಳೆದ ಕೆಲವು ವರ್ಷಗಳಿಂದ ಜನರನ್ನು ಅವರ ಕೋಮು, ಜಾತಿ, ಲಿಂಗ, ಅಥವಾ ಪ್ರದೇಶದ ಆಧಾರದಲ್ಲಿ ಬಡಿದು ಕೊಲ್ಲುವ ಅಥವಾ ಹಲ್ಲೆ ಮಾಡುವ ಅಥವಾ ತಾರತಮ್ಯ ತೋರುವ ಸಂಗತಿಗಳನ್ನು ನೋಡುತ್ತಿದ್ದೇವೆ."

"ದ್ವೇಷ ರಾಜಕೀಯವು ದೇಶವನ್ನು ಒಡೆಯುತ್ತಿದೆ; ಭೀತಿ ಹುಟ್ಟಿಸುತ್ತಿದೆ; ಮತ್ತು ಹೆಚ್ಚು ಹೆಚ್ಚು ಜನರನ್ನು ಪೂರ್ಣ ಪ್ರಜೆಗಳಾಗಿ ಬದುಕದಂತೆ ಮಾಡುತ್ತಿದೆ. ಬರಹಗಾರರು, ಕಲಾವಿದರು, ಸಂಗೀತಗಾರರು ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವವರನ್ನು ಬೆಟೆಯಾಡಲಾಗುತ್ತಿದೆ, ಹೆದರಿಸಲಾಗುತ್ತಿದೆ ಮತ್ತು ಸೆನ್ಸಾರ್ ಗೆ ಒಳಪಡಿಸಲಾಗುತ್ತಿದೆ. ಆಳುವವರನ್ನು ಪ್ರಶ್ನಿಸುವವರಿಗೆ ಕಿರುಕುಳ ನೀಡಲಾಗುತ್ತಿದೆ ಅಥವಾ ಸುಳ್ಳು ಹಾಗೂ ಹಾಸ್ಯಾಸ್ಪದ ಆರೋಪ ಹೊರಿಸಿ ಬಂಧಿಸಲಾಗುತ್ತಿದೆ."

"ಇದು ಬದಲಾಗಬೇಕೆಂದು ನಾವೆಲ್ಲರೂ ಬಯಸುತ್ತೇವೆ. ವಿಚಾರವಾದಿಗಳು, ಬರಹಗಾರರು ಮತ್ತು ಕಾರ್ಯಕರ್ತರನ್ನು ಬೇಟೆಯಾಡುವ ಅಥವಾ ಹತ್ಯೆಮಾಡುವುದನ್ನು ನಾವು ಬಯಸುವುದಿಲ್ಲ. ಮಹಿಳೆಯರು, ದಲಿತರು, ಆದಿವಾಸಿಗಳು ಮತ್ತು ಅಲ್ಪ ಸಂಖ್ಯಾತರ ಮೇಲೆ ಮಾತಿನ ಅಥವಾ ಕೃತ್ಯಗಳ ಮೂಲಕ ನಡೆಯುತ್ತಿರುವ ಹಿಂಸೆಯ ವಿರುದ್ಧ ಕಠಿಣ ಕ್ರಮ ಜರುಗಿಸಬೇಕೆಂದು ಬಯಸುತ್ತೇವೆ. ಎಲ್ಲರಿಗೂ ಉದ್ಯೋಗ, ಶಿಕ್ಷಣ, ಸಂಶೋಧನೆ, ಆರೋಗ್ಯಸೇವೆ ಮತ್ತು ಸಮಾನ ಅವಕಾಶಗಳು ಸಿಗುವಂತೆ ಸಂಪನ್ಮೂಲ ಹಾಗೂ ಕ್ರಮ ಕೈಗೊಳ್ಳುವಂತಾಗಬೇಕೆಂದು ನಾವು ಬಯಸುತ್ತೇವೆ. . . ಜನರ ಐಕ್ಯತೆ ಒಡೆಯುವವರನ್ನು ಸೋಲಿಸಿ, ಅಸಮಾನತೆಯನ್ನು ಹೊಡೆದೋಡಿಸಿ, ಹಿಂಸೆ, ಭಯೋತ್ಪಾದನೆ ಮತ್ತು ಸೆನ್ಸಾರ್ ಮಾಡುವವರಿಗೆ ಮತ ಹಾಕಬೇಡಿ. ಈ ರೀತಿಯಲ್ಲಿ ನಮ್ಮ ಸಂವಿಧಾನದ ಆಶ್ವಾಸನೆಗಳನ್ನು ಮರುಸ್ಥಾಪಿಸುವ ಭಾರತವನ್ನು ನಾವು ಆಯ್ಕೆ ಮಾಡೋಣ. ಆದ್ದರಿಂದಲೇ ನಾವು ದೇಶದ ಎಲ್ಲಾ ಪ್ರಜೆಗಳಲ್ಲಿ ಮನವಿ ಮಾಡುತ್ತೇವೆ – ಬಹುತ್ವ ಮತ್ತು ಸಮಾನ ಭಾರತಕ್ಕಾಗಿ ಮತ ನೀಡಿ ಎಂದು."

ಹಿಂದಿ, ಇಂಗ್ಲಿಷ್, ಪಂಜಾಬಿ, ಮರಾಠಿ, ಗುಜರಾತಿ, ಬಂಗಾಳಿ, ಮಲಯಾಳಂ, ಕನ್ನಡ, ತೆಲುಗು, ತಮಿಳು, ಉರ್ದು, ಕಾಶ್ಮೀರಿ ಮತ್ತು ಕೊಂಕಣಿ ಭಾಷೆಗಳಲ್ಲಿ ಬರೆಯುವ ಮತ್ತು ಕೆಲಸಮಾಡುವ ಎಲ್ಲರೂ ಸೇರಿ ಈ ಮನವಿಯನ್ನು ಮಾಡುತ್ತಿದ್ದೇವೆ ಎಂದು ಈ ಹೇಳಿಕೆ ತಿಳಿಸಿದೆ.

"ಮತಾಂಧತೆ, ದ್ವೇಷ, ಅಸಡ್ಡೆಯನ್ನು ಅಧಿಕಾರದಿಂದ ಇಳಿಸಲು ಮತ ನೀಡಿ" –600ಕ್ಕೂ ಹೆಚ್ಚು ರಂಗಕರ್ಮಿಗಳ ಮನವಿ

ಎಪ್ರಿಲ್ 1ರಂದು 200ಕ್ಕೂ ಹೆಚ್ಚು ಲೇಖಕರ ಮನವಿಯ ನಂತರ ದೇಶದೆಲ್ಲೆಡೆ ಹರಡಿರುವ 12 ಭಾಷೆಗಳ 600ಕ್ಕೂ ಹೆಚ್ಚು ರಂಗ ಕಲಾವಿದರೂ ಎಪ್ರಿಲ್ 4ರಂದು ಲೋಕಸಭಾ ಚುನಾವಣೆಗಳ ಸಂದರ್ಭದಲ್ಲಿ ಅಧಿಕಾರಸ್ಥ ಮೈತ್ರಿಕೂಟದ ಮತಾಂಧತೆ, ದ್ವೇಷ ಮತ್ತು ಅಸಡ್ಡೆಯ ವಿರುದ್ಧ ಮತನೀಡಿ ಅವರನ್ನು ಅಧಿಕಾರದಿಂದ ಹೊರದಬ್ಬಿ ಎಂದು ಮನವಿ ಮಾಡಿದ್ದಾರೆ. ಆರ್ಟಿಸ್ಟ್‌ಯುನೈಟೆಡ್ ಇಂಡಿಯಾ' ಈ ಜಂಟಿ ಹೇಳಿಕೆಯನ್ನು ಪ್ರಕಟಿಸಿದೆ. ಅಮೋಲ್ ಪಾಲೇಕರ್, ನಸಿರುದ್ದೀನ್ ಷಾ, ಗಿರೀಶ ಕಾರ್ನಾಡ್, ಶಾಂತಾ ಗೋಖಲೆ, ಕೀರ್ತಿ ಜೈನ್, ಎಂ ಕೆ ರೈನ, ಮಲಯಶ್ರೀ ಹಾಶ್ಮಿ ಮುಂತಾದ ಗಣ್ಯರು ಈ ಜಂಟಿ ಹೇಳಿಕೆಗೆ ಸಹಿ ಮಾಡಿದವರಲ್ಲಿ ಸೇರಿದ್ದಾರೆ.

"ನಾವು ನೂರ್ರೈವತ್ತು ವರ್ಷಗಳಿಂದಲೂ ಹಾಡು ಮತ್ತು ನೃತ್ಯದ ಮೂಲಕ, ಹಾಸ್ಯ ಮತ್ತು ಕಾರುಣ್ಯದೊಂದಿಗೆ ಒಂದು ಜಾತ್ಯತೀತ, ಪ್ರಜಾಸತ್ತಾತ್ಮಕ, ಎಲ್ಲರನ್ನೂ ಒಳಗೊಳ್ಳುವ ನ್ಯಾಯಯುತ ಭಾರತವನ್ನು ಕಲ್ಪಿಸಿಕೊಂಡಿದ್ದೇವೆ. ಇಂದು ಈ ಭಾರತದ ಕಲ್ಪನೆಯೇ ಬೆದರಿಕೆಗೆ ಒಳಗಾಗಿದೆ. ಇಂದು ಹಾಡು, ಕುಣಿತ, ನಗೆ ಬೆದರಿಕೆಗೆ ಒಳಗಾಗಿದೆ. ನಮ್ಮ ನೆಚ್ಚಿನ ಸಂವಿಧಾನ ಬೆದರಿಕೆಗೆ ಒಳಗಾಗಿದೆ. ತರ್ಕ, ಚರ್ಚೆ ಮತ್ತು ಭಿನ್ನಮತವನ್ನು ಪೋಷಿಸಬೇಕಾದ ಸಂಸ್ಥೆಗಳ ಉಸಿರುಗಟ್ಟಿಸಲಾಗಿದೆ. ಸುಳ್ಳನ್ನು ಸುಳ್ಳು ಎಂದು ಹೇಳುವುದು, ಸತ್ಯ ಮಾತಾಡುವುದಕ್ಕೆ "ರಾಷ್ಟ್ರ-ವಿರೋಧಿ" ಎಂಬ ಹಣೆಪಟ್ಟಿ ಕಟ್ಟಲಾಗುತ್ತಿದೆ. ದ್ವೇಷದ ಬೀಜಗಳು ನಮ್ಮ ಆಹಾರ, ಪ್ರಾರ್ಥನೆ ಮತ್ತು ಹಬ್ಬಗಳ ಒಳಹೊಕ್ಕಿವೆ. ನಮ್ಮ ದೈನಂದಿನ ಬದುಕಿನೊಳಕ್ಕೆ ದ್ವೇಷ ಒಳಸೂಸುತ್ತಿರುವ ವಿಧಾನಗಳು ಆತಂಕ ಹುಟ್ಟಿಸುತ್ತಿವೆ. ಇವು ನಿಲ್ಲಬೇಕು" ಎಂದು ಈ ಹೇಳಿಕೆ ತಿಳಿಸುತ್ತದೆ.

"ಅಭಿವೃದ್ಧಿಯ ಆಶ್ವಾಸನೆಯೊಂದಿಗೆ ಅಧಿಕಾರಕ್ಕೆ ಬಂದ ಬಿಜೆಪಿ ಹಿಂದುತ್ವ ಗೂಂಡಾಗಳಿಗೆ ದ್ವೇಷದ ರಾಜಕೀಯದಲ್ಲಿ, ಹಿಂಸಾಚಾರದಲ್ಲಿ ತೊಡಗಲು ಮುಕ್ತ ಅವಕಾಶ ನೀಡಿದೆ. ಐದು ವರ್ಷಗಳ ಹಿಂದೆ ದೇಶದ ಉದ್ಧಾರಕ ಎಂದು ಚಿತ್ರಿಸಲ್ಪಟ್ಟ ವ್ಯಕ್ತಿ ತನ್ನ ಧೋರಣೆಗಳ ಮೂಲಕ ಕೋಟ್ಯಂತರ ಜನಗಳ ಜೀವನಾಧಾರಗಳನ್ನು ಧ್ವಂಸ ಮಾಡಿದ್ದಾರೆ" ಎಂದು ಮುಂದುವರೆದು ಹೇಳಿರುವ ಈ ಹೇಳಿಕೆ ನಮ್ಮ ಸಂವಿಧಾನವನ್ನು ಮತ್ತು ನಮ್ಮ ಸಮ್ಮಿಶ್ರ, ಜಾತ್ಯತೀತ ಹಂದರವನ್ನು ಕಾಪಾಡಿಕೊಳ್ಳಲು ಪ್ರೀತಿ ಮತ್ತು ಅನುಕಂಪಕ್ಕೆ, ಸಮಾನತೆ ಮತ್ತು ಸಾಮಾಜಿಕ ನ್ಯಾಯಕ್ಕೆ ಮತನೀಡಿ, ಕರಾಳತೆ ಮತ್ತು ಬರ್ಬರತೆಯ ಶಕ್ತಿಗಳನ್ನು ಸೋಲಿಸಿ ಎಂದು ಕರೆ ನೀಡಿದೆ.

"ನಮ್ಮ ಮನವಿ–ಮತಾಂಧತೆ, ದ್ವೇಷ ಮತ್ತ ಅಸಡ್ಡೆಯನ್ನು ಅಧಿಕಾರದಿಂದ ಇಳಿಸಿ. ಬಿಜೆಪಿ ಮತ್ತು ಅವರ ಮಿತ್ರಪಕ್ಷಗಳ ವಿರುದ್ಧ ಮತನೀಡಿ. ಅತ್ಯಂತ ದುರ್ಬಲರನ್ನು ಸಬಲೀಕರಿಸಿ, ಸ್ವಾತಂತ್ರ್ಯವನ್ನು, ಪರಿಸರವನ್ನು ರಕ್ಷಿಸಿ, ಮತ್ತು ವೈಜ್ಞಾನಿಕ ಚಿಂತನೆಯನ್ನು ಪೋಷಿಸಿ. ಜಾತ್ಯತೀತ ಪ್ರಜಾಸತ್ತಾತ್ಮಕ, ಎಲ್ಲರನ್ನೂ ಒಳಗೊಳ್ಳುವ ಭಾರತಕ್ಕೆ ಮತನೀಡಿ, ಕನಸು ಕಾಣುವ ಸ್ವಾತಂತ್ರ್ಯಕ್ಕೆ ಮತನೀಡಿ. ಬುದ್ಧಿವಂತಿಕೆಯಿಂದ ಮತನೀಡಿ" ಎಂದು ಹಿಂದಿ, ಇಂಗ್ಲಿಷ್, ತಮಿಳು, ಬಂಗಾಲಿ, ಮರಾಠಿ, ಮಲೆಯಾಳಂ, ಕನ್ನಡ, ಅಸ್ಸಾಮಿ, ತೆಲುಗು, ಪಂಜಾಬಿ, ಕೊಂಕಣಿ ಮತ್ತು ಉರ್ದು ಈ 12 ಭಾಷೆಗಳ 600ಕ್ಕೂ ಹೆಚ್ಚು ರಂಗಕರ್ಮಿಗಳು ಕಳಕಳಿಯ ಮನವಿ ಮಾಡಿದ್ದಾರೆ.

ಅತಾರ್ಕಿಕತೆ, ಬೆದರಿಕೆ, ಕಿರುಕುಳದ ವಾತಾವರಣ ಸೃಷ್ಟಿಯ ವಿರುದ್ಧ ಮತ ನೀಡಿ- 150ಕ್ಕೂ ಹೆಚ್ಚು ವಿಜ್ಞಾನಿಗಳ ಮನವಿ

ಅವೈಜ್ಞಾನಿಕತೆಗೆ, ಅತಾರ್ಕಿಕತೆಗೆ ಅಧಿಕಾರಸ್ಥರ ಕೃಪಾಪೋಷಣೆ ರಾರಾಜಿಸುತ್ತಿರುವ, ಇದು ಡಾ. ನರೇಂದ್ರ ದಭೋಲಕ್ರ್, ಕಾಂ. ಗೋವಿಂದ ಪನ್ಸರೆ, ಡಾ.ಎಂ.ಎಂ. ಕಲ್ಬುರ್ಗಿ ಮತ್ತು ಗೌರಿ ಲಂಕೇಶ್ ಅವರನ್ನು ಬಲಿ ತೆಗೆದುಕೊಂಡಿರುವ ಹಿನ್ನೆಲೆಯಲ್ಲಿ 152 ವಿಜ್ಞಾನಿಗಳೂ, ಈ ನಡುವೆ ಎಪ್ರಿಲ್ 3ರಂದು, ಬಹುಶಃ ಮೊದಲ ಬಾರಿಗೆ, ನಾಗರಿಕರಿಗೆ, ಬುದ್ಧಿವಂತಿಕೆಯಿಂದ, ತರ್ಕಗಳನ್ನು ಮತ್ತು ಸಾಕ್ಷ್ಯಗಳನ್ನು ವಿಮರ್ಶಾತ್ಮಕವಾಗಿ ತೂಗಿ ನೋಡಿ ಮತ ನೀಡಿ ಎಂದು ಮನವಿ ಮಾಡಿದ್ದಾರೆ.

ನಮ್ಮ ಸಂವಿಧಾನ ನಮಗೆ ಹಕ್ಕುಗಳನ್ನು ಕೊಟ್ಟಿದೆ. ಅವು ನಮಗೆ ವ್ಯಕ್ತಿಗತವಾಗಿ ಸಿಗುತ್ತವೆ. ಆದರೆ ಅವು ಎಲ್ಲ ಭಾರತೀಯ ನಾಗರಿಕರಿಗೂ, ಪಕ್ಷಪಾತ ಮತ್ತು ತಾರತಮ್ಯವಿಲ್ಲದೆ ಲಭ್ಯವಾದರೆ ಮಾತ್ರವೇ ಅಸ್ತಿತ್ವದಲ್ಲಿರುತ್ತವೆ. ಈ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ನಾವು ಜನಗಳನ್ನು ಬಡಿದು ಸಾಯಿಸುವವರನ್ನು, ಹಲ್ಲೆ ಮಾಡುವವರನ್ನು, ಧರ್ಮ, ಜಾತಿ, ಭಾಷೆ ಅಥವ ಪ್ರದೇಶದ ಹೆಸರಿನಲ್ಲಿ ತಾರತಮ್ಯ ಮಾಡುವವರನ್ನು ತಿರಸ್ಕರಿಸಬೇಕಾಗಿದೆ ಎಂದು ಹೇಳಿರುವ ಈ ಮನವಿ "ನಾವು ನಮ್ಮನ್ನು ವಿಭಜಿಸುವ, ಭೀತಿ ಹುಟ್ಟಿಸುವ, ಸಮಾಜದ ಬಹುಪಾಲು ಜನಗಳನ್ನು ಅಂಚಿಗೆ ತಳ್ಳುವ ಒಂದು ರಾಜಕೀಯವನ್ನು ಅನುಮೋದಿಸಲು ಸಾಧ್ಯವಿಲ್ಲ...ವೈವಿಧ್ಯತೆ ನಮ್ಮ ಪ್ರಜಾಪ್ರಭುತ್ವದ ದೊಡ್ಡ ಶಕ್ತಿ; ತಾರತಮ್ಯ ಮತ್ತು ಒಳಗೊಳ್ಳದಿರುವುದು ಇದರ ಬುಡಕ್ಕೇ ಏಟು ಕೊಡುತ್ತದೆ" ಎಂದು ಎಚ್ಚರಿಸಿದೆ.

"ವಿಜ್ಞಾನಿಗಳು, ವಿಚಾರವಾದಿಗಳು, ಕಾರ್ಯಕರ್ತರನ್ನು ಅಟ್ಟಾಡಿಸುವ, ಕಿರುಕುಳಕ್ಕೆ ಒಳಪಡಿಸುವ, ಬೆದರಿಸುವ, ಬಾಯಿಮುಚ್ಚಿಸುವ, ಜೈಲಿಗಟ್ಟುವ, ಅಷ್ಟೇ ಏಕೆ, ಸಾಯಿಸುವ ಒಂದು ವಾತಾವರಣ ನಮ್ಮ ದೇಶದ ಭವಿಷ್ಯಕ್ಕೆ ತಕ್ಕುದಲ್ಲ. ನಮ್ಮ ಯುವಜನರಿಗೆ ನಾವು ಇಂತಹ ಭವಿಷ್ಯವನ್ನು ಕೊಡಬಯಸುವುದಿಲ್ಲ. ವಿಜ್ಞಾನ ಮುಕ್ತಮನಸ್ಸಿನಿಂದ ಪ್ರಶ್ನೆಗಳನ್ನು ಕೇಳುವ ಮೂಲಕ ಪ್ರಜಾಸತ್ತಾತ್ಮಕ ಸಬಲೀಕರಣದ ಒಂದು ಸಾಧನವಾಗಿ ನಮ್ಮ ಯುವಜನತೆಯನ್ನು ಜಾಗೃತಗೊಳಿಸಬೇಕೇ ಹೊರತು, ಕೇವಲ ಒಂದು ವಾಣಿಜ್ಯ ಉದ್ದಿಮೆಯಾಗಿ ಅಲ್ಲ. ವೈಚಾರಿಕ, ಸಾಕ್ಷ್ಯ-ಆಧಾರಿತ ಸಾರ್ವಜನಿಕ ಸಂವಾದವನ್ನು ತುಚ್ಛೀಕರಿಸುವುದು ನಿಲ್ಲಬೇಕು; ಆಗ ಮಾತ್ರವೇ ಉದ್ಯೋಗಕ್ಕೆ, ಶಿಕ್ಷಣಕ್ಕೆ ಮತ್ತು ಸಂಶೋಧನೆಗೆ ಉತ್ತಮ ಸಂಪನ್ಮೂಲಗಳನ್ನು ಮತ್ತು ಅವಕಾಶಗಳನ್ನು ನಾವು ನಿರ್ಮಿಸಲು ಸಾಧ್ಯ" ಎಂದು ಈ ಮನವಿ ಹೇಳಿದೆ.

ಈ ಹಿನ್ನೆಲೆಯಲ್ಲಿ "ಬುದ್ಧಿವಂತಿಕೆಯಿಂದ, ತರ್ಕಗಳನ್ನು ಮತ್ತು ಸಾಕ್ಷ್ಯಗಳನ್ನು ವಿಮರ್ಶಾತ್ಮಕವಾಗಿ ತೂಗಿ ನೋಡಿ ಮತ ನೀಡಿ. ವೈಜ್ಞಾನಿಕ ಮನೋಭಾವಕ್ಕೆ ನಮ್ಮ ಸಂವಿಧಾನಿಕ ಬದ್ಧತೆಯನ್ನು ಎಲ್ಲ ನಾಗರಿಕರು ನೆನಪಿಸಿಕೊಳ್ಳಬೇಕು ಎಂದು ನಾವು ಮನವಿ ಮಾಡುತ್ತೇವೆ. ಅಸಮಾನತೆ, ಬೆದರಿಕೆ, ತಾರತಮ್ಯ ಮತ್ತು ಅತಾರ್ಕಿಕತೆಯ ವಿರುದ್ಧ ಮತ ನೀಡಬೇಕು ಎಂದು ನಾವು ನಿಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ. ಇವು ನಮ್ಮ ಸಂವಿಧಾನದ ಮೌಲ್ಯಗಳಿಗೆ ಕೇಡು ತರುವಂತವುಗಳು" ಎಂದು ವಿಜ್ಞಾನಿಗಳ ಈ ಮನವಿ ಹೇಳಿದೆ.

"ಮತ್ತೆ ಇಂತಹ ಹಾನಿಕಾರಕ ಆಡಳಿತ ಬರದಂತೆ ಮಾಡಿ" –100ಕ್ಕೂ ಹೆಚ್ಚು ಸಿನೆಮಾ ನಿರ್ದೇಶಕರುಗಳ ಮನವಿ

ಮಾರ್ಚ್ 29 ರಂದು ದೇಶದ 103 ಚಲನಚಿತ್ರ ನಿರ್ದೇಶಕರು ಕೂಡ ಒಂದು ಮನವಿಗೆ ಸಹಿ ಹಾಕಿದ್ದು, ವಾಕ್ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಸಿದುಕೊಳ್ಳುತ್ತಿರುವ ಈ ಹಾನಿಕಾರಕ ಆಡಳಿತ ಮತ್ತೆ ಬರದಂತೆ ಮಾಡಿ ಎಂದು ದೇಶದ ನಾಗರಿಕರಿಗೆ ಮನವಿ ಮಾಡಿದ್ದಾರೆ.

ಇವರೆಲ್ಲರೂ ಸ್ವತಂತ್ರ ಸಿನೆಮಾ ರಚನೆಗೆ ಹೆಸರಾದವರು. ಆನಂದ ಪಟವರ್ಧನ್, ವೇಟ್ರಿ ಮಾರನ್, ದೀಪ ಧನರಾಜ್, ಸುದೇವನ್, ಬೀನಾ ಪಾಲ್ ಮುಂತಾದವರು ಈ ಮನವಿಗೆ ಸಹಿ ಮಾಡಿದ್ದಾರೆ. ದೇಶದ ಪ್ರಜಾಪ್ರಭುತ್ವದ ರಕ್ಷಣೆಗಾಗಿ ತಾವು ಈ ಮನವಿ ಮಾಡುತ್ತಿರುವುದಾಗಿ ಅವರು ಹೇಳಿದ್ದಾರೆ.

"ನಮ್ಮ ದೇಶ ಹಿಂದೆಂದೂ ಕಾಣದಂತಹ ಪರೀಕ್ಷಾ ಕಾಲದ ಮೂಲಕ ಸಾಗುತ್ತಿದೆ. ಸಾಂಸ್ಕೃತಿಕವಾಗಿ ವೈವಿಧ್ಯಮಯವಾಗಿದ್ದರೂ ಮತ್ತು ಭೌಗೋಳಿಕವಾಗಿ ವಿಭಿನ್ನತೆಗಳಿಂದ ಕೂಡಿದ್ದರೂ, ನಾವು ಸದಾ ಒಂದಾಗಿಯೇ ಇದ್ದೆವು. ಒಂದು ರಾಷ್ಟ್ರವಾಗಿ. ಈ ಅದ್ಭುತ ದೇಶದ ನಾಗರಿಕರಾಗಿರುವುದು ನಿಜಕ್ಕೂ ಒಂದು ಭವ್ಯ ವಿಚಾರವಾಗಿತ್ತು. ಆದರೆ ಈಗ ಅದೆಲ್ಲ ಪಣಕ್ಕೆ ಒಡ್ಡಲ್ಪಟ್ಟಿದೆ. ಮುಂದಿನ ಲೋಕಸಭಾ ಚುನಾವಣೆಗಳಲ್ಲಿ ನಾವು ಬುದ್ಧಿವಂತಿಕೆಯಿಂದ ಆಯ್ದುಕೊಳ್ಳದಿದ್ದರೆ, ಫ್ಯಾಸಿಸಂ ತನ್ನೆಲ್ಲ ಶಕ್ತಿಯನ್ನು ಬಳಸಿ ನಮ್ಮ ಮೇಲೆ ಪ್ರಹಾರ ಮಾಡುವ ಬೆದರಿಕೆ ಒಡ್ಡಿದೆ " ಎಂದು ಈ ಮನವಿ ಎಚ್ಚರಿಸಿದೆ.

ತಾವು ಈ ಮನವಿ ಮಾಡುವ ನಿರ್ಧಾರಕ್ಕೆ ಬರಲು ಕಾರಣ "ಧ್ರುವೀಕರಣದ ಮತ್ತು ದ್ವೇಷದ ರಾಜಕಾರಣವನ್ನು ಹರಿಯಬಿಟ್ಟಿರುವುದು, ಗೋವಿನ ಹೆಸರಿನಲ್ಲಿ ಕಾವಲುಕೋರತನ, ದಲಿತರು, ಮುಸ್ಲಿಮರು ಮತ್ತು ರೈತರನ್ನು ಅಂಚಿಗೆ ತಳ್ಳಿರುವುದು, ಹಾಗೂ ಸೆನ್ಸಾರ್‌ಶಿಪ್ ಹೆಚ್ಚುತ್ತಿರುವುದು" ಎಂದು ಅವರು ಹೇಳಿದ್ದಾರೆ.

2014 ರ ನಂತರ ಬಹಳಷ್ಟು ಬದಲಾಗಿದೆ, ಆದರೆ ಒಳಿತಿಗಾಗಿ ಅಲ್ಲ, ಕೆಡುಕಿಗಾಗಿ. 'ದೇಶಭಕ್ತಿ' ಈ ಮಂದಿಯ ಟ್ರಂಪ್ ಕಾರ್ಡ್. ಯಾವುದೇ ಸಂಸ್ಥೆ ಅಥವ ವ್ಯಕ್ತಿ ತುಸು ಭಿನ್ನಮತ ವ್ಯಕ್ತಪಡಿಸಿದರೂ 'ರಾಷ್ಟ್ರ-ವಿರೋಧಿ' ಹಣೆಪಟ್ಟಿ ಹಚ್ಚುತ್ತಾರೆ. ಈ ತಮ್ಮ ವೋಟ್ ಬ್ಯಾಂಕ್ ವಿಸ್ತರಿಸಲು ಅವರು ಇದನ್ನೇ ಅವಲಂಬಿಸಿದ್ದಾರೆ ಎಂದಿರುವ ಈ ಮನವಿ "ಈ ಹಾನಿಕಾರಕ ಆಡಳಿತ ಮತ್ತೆ ಬರದಂತೆ ನಿಮಗೆ ಏನು ಸಾಧ್ಯವೋ ಅದನ್ನೆಲ್ಲ ಮಾಡಬೇಕೆಂದು ನಾವು ನಿಮ್ಮನ್ನೆಲ್ಲ ಆಗ್ರಹಿಸುತ್ತೇವೆ. ನಿಮ್ಮ ಜನಾದೇಶ ಭಾರತದ ಸಂವಿಧಾನವನ್ನು ಗೌರವಿಸುವ, ನಮ್ಮ ವಾಕ್ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ರಕ್ಷಿಸುವ , ಮತ್ತು ಎಲ್ಲ ರೀತಿಯ ಸೆನ್ಸಾರ್‌ಶಿಪ್‌ಗಳಿಂದ ದೂರವಿರುವ ಒಂದು ಸರಕಾರ ಆಯ್ಕೆಯಾಗುವಂತೆ ಮಾಡಲಿ" ಎಂದು ಆಶಿಸಿದೆ.

ಆರ್ಥಿಕ ನಿರ್ಧಾರ ಕೈಗೊಳ್ಳುವವರ ಈ ಪರಿಯ ಅಜ್ಞಾನ!



ನೋಟುರದ್ಧತಿ ಕುರಿತಂತೆ ರಿಝರ್ವ್ ಬ್ಯಾಂಕಿನ ಬೋರ್ಡಿನ ಸಭೆಯ ಮಾಹಿತಿ ಈಗ 'ಮಾಹಿತಿ ಹಕ್ಕು ಕಾಯ್ದೆಯ ಅಡಿಯಲ್ಲಿ ಲಭ್ಯವಿದ್ದು, ಆ ಇಡೀ ಘಟನೆ ಇಂದು ದೇಶದಲ್ಲಿನ ನಿರ್ಧಾರ ಕೈಗೊಳ್ಳುವವವರ ಗುಣಮಟ್ಟ ಎಂತಹದ್ದು ಎಂಬುದನ್ನು ಪ್ರದರ್ಶಿಸಿದೆ. ನೋಟುರದ್ದತಿಗೆ ಮುಂದಿಟ್ಟ ತರ್ಕಗಳು ಎಷ್ಟು ಅಸಂಬದ್ಧವೆಂದರೆ, ಇಂತಹ ವಾದಗಳನ್ನು ಮಡಿಸಲಾಗುತ್ತಿದೆ ಎಂಬುದೇ ಈ ಸರ್ಕಾರದ ಕಾರ್ಯ ವೈಖರಿಯ ಬಗ್ಗೆ ಬಹಳಷ್ಟನ್ನು ಹೇಳುತ್ತದೆ. ಅದು ಒಂದೋ ಅಜ್ಞಾನದಿಂದ ತುಂಬಿದೆ ಅಥವ ಸಿನಿಕತನದಿಂದ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಎಂ.ಜಿ.ವೆಂಕಟೇಶ್

ರೂ. 500 ಮತ್ತು ರೂ. 1000 ನೋಟುರದ್ಧತಿಯ ಮುಂಚೆ ನಡೆದ ರಿಸರ್ವ್ ಬ್ಯಾಂಕ್(ಆರ್‌ಬಿಐ) ಬೋರ್ಡ್ ಮೀಟಿಂಗ್‌ನ ಕಲಾಪದ ವರದಿ ಮಾಹಿತಿ ಹಕ್ಕು ಕಾಯ್ದೆಯಡಿ ಕೇಳಿದ ಪ್ರಶ್ನೆಯಿಂದಾಗಿ ಸಾರ್ವಜನಿಕವಾಗಿ ಲಭ್ಯವಿದೆ. ಅವು ನಮ್ಮ ಆರ್ಥಿಕ ವಿಚಾರಗಳಲ್ಲಿ ನಿರ್ಧಾರ ತೆಗೆದುಕೊಳ್ಳುವಲ್ಲಿರುವ ಆಳವಾದ ಅಜ್ಞಾನದ ಪ್ರತೀಕವಾಗಿದೆ. ಮೋದಿ ಸರಕಾರದ ಅಢಿಯಲ್ಲಿ ಆರ್ಥಿಕ ವಿಚಾರಗಳಲ್ಲಿ ನೀತಿ ನಿರ್ಧಾರಣೆಯ ಸ್ಥಿತಿ ಎಷ್ಟೊಂದು ಕೆಳಮಟ್ಟದಲ್ಲಿದೆ ಎಂಬುದನ್ನು ಹೊರಗೆಡಹಿದೆ.

ಆರ್ಥಿಕ ವಿಚಾರಗಳಲ್ಲಿ ನಿರ್ಧಾರ ತೆಗೆದುಕೊಳ್ಳುವಾಗ ವರ್ಗ ಪಕ್ಷಪಾತ ಸದಾ ಇರುತ್ತದೆ. ಆದರೆ ನಾನು ಇಲ್ಲಿ ಹೇಳಹೊರಟಿರುವುದು ಆ ವಿಷಯವನ್ನಲ್ಲ. ಆಳುವ ವರ್ಗದ ಆಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಆರ್ಥಿಕ ನಿರ್ಧಾರಗಳನ್ನು ಕೈಗೊಳ್ಳುವಾಗಲೂ, ಆ ನಿರ್ಧಾರವನ್ನು ಸಮರ್ಥಿಸಿಕೊಳ್ಳಲು ಅದು ಯಾವುದಾದರೂ ಆರ್ಥಿಕ ನೀತಿಯ ಚೌಕಟ್ಟಿನಲ್ಲಿರುತ್ತದೆ. ಆಳವಾಗಿ ಪರಿಶೀಲಿಸುವಾಗ ಅವು ಪ್ರಶ್ನಾರ್ಹವಾಗಿ ಕಂಡರೂ, ಮೇಲ್ನೋಟಕ್ಕೇ ಅವು ಅಸಂಗತವಾಗಿ ಕಾಣುವುದಿಲ್ಲ. ಈ ಸರ್ಕಾರದಲ್ಲಿ ನಿರ್ಧಾರಗಳು ಒಬ್ಬ ವ್ಯಕ್ತಿ ಮೋದಿ ತೆಗೆದುಕೊಳ್ಳುತ್ತಾರೆ. ವಾಸ್ತವಿಕವಾಗಿ ಅಂತಹ ನಿರ್ಧಾರಗಳಿಗೆ ಆಧಾರವನ್ನು ನಿರ್ಮಿಸಬೇಕಾಗಿರುವ ಆರ್ಥಿಕ ಅಧಿಕಾರಶಾಹಿ ಇಲ್ಲಿ ಮೋದಿಯ ನಿರ್ಧಾರದ ನಂತರ ಅವಕ್ಕೆ ಸಮರ್ಥನೆ ಒದಗಿಸಬೇಕಾಗಿದೆ. ಆದರೆ ಇಲ್ಲಿಯೂ ಅಂತಹ ಸಮರ್ಥನೆ ಪ್ರಶ್ನಾರ್ಹವಾಗಿರಬಹುದಾದರೂ ಎಷ್ಟೆ ಅಸಂಗತವಾಗಿರಬೇಕಿಲ್ಲ.

ಆದರೆ ರಿಸರ್ವ್ ಬ್ಯಾಂಕಿನ ಬೋರ್ಡ್ ಮೀಟಿಂಗ್ ಕಲಾಪವನ್ನು ನೋಡಿದರೆ ನಾವು ಈಗ ಅಸಂಬದ್ಧತೆಯ ಆಳವನ್ನು ಅಳೆಯಬೇಕಾದ ಪರಿಸ್ಥಿತಿಯಿದೆ. ಅಧಿಕೃತ ಟಿಪ್ಪಣಿಗಳ ಅಸಂಬದ್ಧತೆ ನಿಜಕ್ಕೂ ಸೋಜಿಗ ಉಂಟು ಮಾಡುವಂತದ್ದು. ನವಂಬರ್ 2016ರಲ್ಲಿ ಹಣಕಾಸು ಇಲಾಖೆ ಆರ್‌ಬಿಐ ಗೆ ನೋಟುರದ್ಧತಿಯ ವಾದ ಮಂಡಿಸಿದ ಒಂದು ಪತ್ರವನ್ನು ಕಳಿಸಿರುವಂತೆ ಕಾಣುತ್ತದೆ. ಅದನ್ನು ಬಲಪಂಥೀಯ ಬುದ್ಧಿಜೀವಿಗಳಾದ ಎಸ್. ಗುರುಮೂರ್ತಿ ಸಾರ್ವಜನಿಕವಾಗಿ ಅನುಮೋದಿಸಿದ್ದರು. ಅದರ ಪ್ರಕಾರ 2011–12 ಮತ್ತು 2015–16 ಅವಧಿಯಲ್ಲಿ ರಾಷ್ಟ್ರದ ಉತ್ಪಾದನಾ ಸಾಮರ್ಥ್ಯ ಶೇ. 30% ರಷ್ಟು ಹೆಚ್ಚಿದ್ದು ಅದೇ ಅವಧಿಯಲ್ಲಿ ರೂ. 500 ಮತ್ತು ರೂ. 1000 ನೋಟುಗಳ ಬೆಳವಣಿಗೆ ಅನುಕ್ರಮವಾಗಿ 36% ಮತ್ತು 109% ಆಗಿತ್ತು. ಹೀಗೆ ಇದು ತಾಳೆಯಾಗದಿರುವುದಕ್ಕೆ ಕಪ್ಪುಹಣ ಹೆಚ್ಚಿರುವುದು ಕಾರಣ, ಆದ್ದರಿಂದ ಇಂತಹ ನೋಟುಗಳನ್ನು ಹಿಂತೆಗೆದುಕೊಂಡರೆ ಕಪ್ಪುಹಣ ಚಲಾವಣೆಗೆ ದೊಡ್ಡ ಆಘಾತವುಂಟು ಮಾಡಬಹುದು ಎಂಬುದೇ ಆ ತರ್ಕ.

ಆದರೆ ಹಣಕಾಸು ಇಲಾಖೆಯ ದಸ್ತಾವೇಜು ಗಮನಿಸಲು ಮರೆತಿರುವುದು ಯಾವುದೆಂದರೆ ಜಿಡಿಪಿಯಲ್ಲಿ ಉಂಟಾದ ಹೆಚ್ಚಳ ನೈಜವಾಗಿದ್ದು ಮತ್ತು ಈ ಹೆಚ್ಚಳಕ್ಕೂ ವಾಸ್ತವವಲ್ಲದ ಹಣ ಚಲಾವಣೆಗೂ ಯಾವ ಸಂಬಂಧವೂ ಇರಬೇಕಿಲ್ಲ. ಪ್ರಸಕ್ತ ಜಿಡಿಪಿ ಮತ್ತು ಪ್ರಸಕ್ತ ಹಣ ಚಲಾವಣೆಯನ್ನು ಹೋಲಿಸಿ ನೋಡಿದ್ದರೆ ನಾಣ್ಯ ಚಲಾವಣೆ–ಜಿಡಿಪಿ ಅನುಪಾತದಲ್ಲಿ ಹೆಚ್ಚಳ ಇಲ್ಲದಿರುವುದನ್ನು ಅರಿತುಕೊಳ್ಳಬಹುದಿತ್ತು. ವಾಸ್ತವವಲ್ಲದ ನಾಮಿನಲ್ ಜಿಡಿಪಿ ಹೆಚ್ಚಳ 2011–12 ರಿಂದ 2015–16 ರ ಅವಧಿಯಲ್ಲಿ 54% (ಈಗ ಹೇಳಿರುವ 30% ಅಲ್ಲ, ಅದು ನಿಜ ಜಿಡಿಪಿಯ ಅಂಕಿ–ಅಂಶ): ಸಾರ್ವಜನಿಕರ ಬಳಿಯಿದ್ದ ಹಣ ಅಂದರೆ ಒಟ್ಟು ಕರೆನ್ಸಿಯಿಂದ ಬ್ಯಾಂಕ್‌ಗಳ ಬಳಿ ಇರುವ ಕರೆನ್ಸಿ ಕಳೆದರೆ 56% ಆಗುತ್ತದೆ. ಒಟ್ಟಾರೆಯಾಗಿ ಈ ಎರಡು ಪರಿಮಾಣಗಳು ಹೆಚ್ಚು ಕಡಿಮೆ ಸಮ–ಸಮನಾಗೇ ಹೆಚ್ಚಿದ್ದವು.

ಆದರೆ ವಾಸ್ತವವಲ್ಲದ ಹಣದ ದಾಸ್ತಾನು ಜಿಡಿಪಿಗಿಂತ ಹೆಚ್ಚಾದರೆ ಖಂಡಿತವಾಗಿ ಆರ್ಥಿಕವಾಗಿ ತಪ್ಪು ಮತ್ತು ಅದು ಹಣದುಬ್ಬರಕ್ಕೆ ಕಾರಣವಾಗುತ್ತದಲ್ಲವೇ ಎಂದು ಕೇಳಬಹುದು. ಈ ಪ್ರಶ್ನೆಯನ್ನು ನಾಲ್ಕು ಭಿನ್ನ ಸ್ತರಗಳಲ್ಲಿ ಉತ್ತರಿಸಬಹುದು. ಮೊದಲನೇಯದಾಗಿ ಹಣದುಬ್ಬರಕ್ಕೆ ಕಾರಣ ಸರಕುಗಳಿಗೆ ಬೇಡಿಕೆ ಮತ್ತು ಪೂರೈಕೆಯಲ್ಲಿನ ಅಸಮತೋಲನ ಎನ್ನಲಾಗುತ್ತದೆ. ಆದರೆ ಹೆಚ್ಚಿನ ಹಣದ ಸರಬರಾಜು ವಸ್ತುಗಳನ್ನು ಕೊಳ್ಳಲು ವಿನಿಯೋಗವಾಗುವುದಿಲ್ಲವಾದ್ದರಿಂದ ನೈಜ ಜಿಡಿಪಿ ಹೆಚ್ಚಳ ಮತ್ತು ವಾಸ್ತವವಲ್ಲದ ಹಣ ಸರಬರಾಜು ಹಣದುಬ್ಬರಕ್ಕೆ ಕಾರಣವಾಗ ಬೇಕಿಲ್ಲ. ಎರಡನೇಯದಾಗಿ, ಹಣ ಸರಬರಾಜ ಮತ್ತು ಜಿಡಿಪಿಯಲ್ಲಿ ಹೆಚ್ಚಳದಲ್ಲಿ ತಾಳ–ಮೇಳವಿಲ್ಲವಾದರೆ ಹಣದುಬ್ಬರ ಉಂಟಾಗಬಹುದು ಎಂಬ ಭಯವಿದ್ದಿದ್ದರೆ, ಅದಕ್ಕೆ ಪರಿಹಾರವೆಂದರೆ ಹಣಕ್ಕೆ ಮಿತಿ ಹಾಕುವ ಒಂದು ನೀತಿಯನ್ನು ಅನುಸರಿಸುವುದು. ತನ್ಮೂಲಕ ಹಣದ ಸರಬರಾಜಿನ ಹೆಚ್ಚಳ ತಡೆಯುವುದು. ಮೂರನೇಯದಾಗಿ, ಎಲ್ಲ ಪ್ರಕ್ರಿಯೆಗಳನ್ನು ಸಮನಾಗಿಸಿಕೊಳ್ಳಬೇಕಾದರೆ ಅಂದರೆ ಹಣದುಬ್ಬರ ತಡೆಯಲು ಈ ಹೆಚ್ಚಳಗಳು ಒಂದೇ ಪ್ರಮಾಣದಲ್ಲಿ ಇರಬೇಕು ಎಂದು ಒತ್ತಾಯಿಸುವುದಾದರೆ, ಅದು ಒಟ್ಟು ಹಣದ ಸರಬರಾಜನ್ನು ಮತ್ತು ನೈಜ ಜಿಡಿಪಿ ಮಧ್ಯೆ ಹೊರತು ಹಣ ಸರಬರಾಜಿನ ಒಂದು ಅಂಶವಾದ ರೂ. 500, 1000 ಮತ್ತು ಜಿಡಿಪಿ ಮಧ್ಯೆ ಅಲ್ಲ. ನಾಲ್ಕನೇಯದಾಗಿ, ಈ ಎಲ್ಲ ಅಂಶಗಳು ಹಣದುಬ್ಬರಕ್ಕೆ ಸಂಬಂಧಪಟ್ಟದ್ದೇ ಹೊರತು ಕಪ್ಪು ಹಣ ಅಥವ ನೋಟುರದ್ಧತಿಗೆ ಸಂಬಂಧಪಟ್ಟದ್ದಲ್ಲ. ಇದು ಹಣದುಬ್ಬರ ತಡೆಯಲು ಕೂಡ ಬಳಸಬಹುದಾದ ಉಪಕರಣವೇನಲ್ಲ.

ಅಂದರೆ ಹಣಕಾಸು ಸಚಿವಾಲಯದ ಟಿಪ್ಪಣಿಗೆ ಹೊಳಪನ್ನೇನೂ ಹಚ್ಚಲು ಸಾಧ್ಯವಿಲ್ಲ. ಅದು ಪ್ರಾಥಮಿಕ ದೋಷಗಳಿಂದ ಕೂಡಿದ ಅಸಂಬದ್ಧ ಟಿಪ್ಪಣಿ ಎಂಬುದು ಸರಳ ಮತ್ತು ನೇರ ಸಂಗತಿ. ಯಾವುದೇ ವಿಶ್ವವಿದ್ಯಾಲಯದ ಇನ್ನೂ ಪದವಿಗೆ ಓದುತ್ತಿರುವ ವಿದ್ಯಾರ್ಥಿ ಇದನ್ನು ತಯಾರಿಸಿದ್ದರೂ ಆತ ಹೆಚ್ಚಿನ ಅಂಕವನ್ನು ಕಳೆದುಕೊಳ್ಳಬೇಕಾಗುವ ತಪ್ಪು ಇದು. ನಿಜವಾದ ಜಿಡಿಪಿ ಮತ್ತು ನಾಮಮಾತ್ರದ ಜಿಡಿಪಿ ನಡುವೆ ಅನಗತ್ಯ ಗೊಂದಲ ಮಾಡಿಕೊಂಡು ದಾರಿ ತಪ್ಪಿಸಿದ ಅಂತಹ ಸಂಗತಿಯ ಆಧಾರದಲ್ಲಿ 85% ಭಾಗ ಕರೆನ್ಸಿ ಸ್ಟಾಕ್‌ನ್ನು ಅಮಾನ್ಯಗೊಳಿಸುವ ವಾದವನ್ನು ಮಂಡಿಸಲಾಯಿತು. ಈ ತಪ್ಪು ಮಾಡಿರುವುದು ದೇಶದ ಹಣಕಾಸು ಸಚಿವಾಲಯ!


ಇಂತಹ ಟಿಪ್ಪಣಿಯನ್ನು ರಿಸರ್ವ್ ಬ್ಯಾಂಕಿಗೆ ಕಳಿಸುವ ಮೊದಲು ಸಚಿವಾಲಯದ ಹಲವಾರು ಹಂತಗಳನ್ನು, ಸ್ತರಗಳನ್ನು ದಾಟಿದ್ದರೂ ಇಂತಹ ಪ್ರಾಥಮಿಕ ತಪ್ಪುಗ್ರಹಿಕೆ ಸಚಿವಾಲಯದ ಕ್ಷಮತೆಯ ಬಗ್ಗೆ ಸೂಚಿಸುತ್ತದೆ. ಅಥವಾ ಮೋದಿಯವರಿಗೆ ನೋಟುರದ್ಧತಿ ಬೇಕಾಗಿದ್ದು ಬಹುತೇಕ ಅಧಿಕಾರಿಗಳು ವಿಧಿಯಿಲ್ಲದೇ ಒಪ್ಪಿಕೊಳ್ಳಬೇಕಾದ್ದರಿಂದ ಅದನ್ನು ಓದುವ ಗೋಜಿಗೂ ಹೋಗಿರಲಿಕ್ಕಿಲ್ಲ, ಮತ್ತು ರಿಸರ್ವ್‌ಬ್ಯಾಂಕ್ ಸಹಿತ ಓದುವ ಗೋಜಿಗೇ ಹೋಗದೆ ಅನುಮೋದನೆಯ ಮುದ್ರೆ ಒತ್ತ ಬಹುದು ಎಂದು ಊಹಿಸಿರುತ್ತಾರೆ. ಈ ಎರಡೂ ಸಂದರ್ಭಗಳು ಮೋದಿ ಸರ್ಕಾರದ ಕಾರ್ಯವೈಖರಿಯ ಬಗ್ಗೆ ಹೊರಗೆಡಹುವ ಸಂಗತಿ ತತ್ತರಗೊಳಿಸುವಂತದ್ದು.

ಆದರೆ ಕೆಲವು ರಿಸರ್ವ್‌ಬ್ಯಾಂಕಿನ ಬೋರ್ಡ್ ಸದಸ್ಯರು ಪ್ರಶ್ನೆ ಮಾಡಿರುವುದನ್ನು ಶ್ಲಾಘಿಸಬೇಕಿದೆ. ನೋಟುರದ್ಧತಿಯ ಬಗ್ಗೆ ಇದ್ದ ಟಿಪ್ಪಣಿಗೆ ಬದಲಾಗಿ ಮತ್ತೊಂದು ಟಿಪ್ಪಣಿ "ಕಪ್ಪು ಹಣದ ಬಗ್ಗೆ ಶ್ವೇತ ಪತ್ರ" ಎಂಬ ಶೀರ್ಷಿಕೆಯಡಿಯಲ್ಲಿ ರೆವಿನ್ಯೂ ಇಲಾಖೆ ಸಿದ್ಧಪಡಿಸಿತ್ತು. ಅದರಲ್ಲಿಯ ನೋಟುರದ್ಧತಿಯ ತರ್ಕವನ್ನೂ ಅವರು ಪ್ರಶ್ನಿಸಿದ್ದರು. ಈ ಟಿಪ್ಪಣಿ ಕಪ್ಪು ಹಣ, ಮತ್ತು ಖೋಟಾನೋಟು ಹೆಚ್ಚುತ್ತಿರುವ ಬಗ್ಗೆ ವಿಶ್ವಬ್ಯಾಂಕ್ ಹೇಳಿರುವುದನ್ನು ಪ್ರಸ್ತಾಪಿಸಿ ಚಲಾವಣೆಯಲ್ಲಿರುವ ಖೋಟಾನೋಟು ರೂ. 400 ಕೋಟಿ ಎಂದು ಅಂದಾಜಿಸಿತ್ತು.

ಈ ವಾದಗಳೂ ಎಷ್ಟೊಂದು ಅಸಂಬದ್ಧವಾಗಿವೆಯೆಂದರೆ, ಇಂತಹ ವಾದಗಳನ್ನು ಮಡಿಸಲಾಗುತ್ತಿದೆ ಎಂಬುದೇ ಈ ಸರ್ಕಾರದ ಕಾರ್ಯ ವೈಖರಿಯ ಬಗ್ಗೆ ಬಹಳಷ್ಟನ್ನು ಹೇಳುತ್ತದೆ. ಅದು ಒಂದೋ ಅಜ್ಞಾನದಿಂದ ತುಂಬಿದೆ ಅಥವ ಸಿನಿಕತನದಿಂದ. ಬೋರ್ಡ್ ಸದಸ್ಯರು ಸಹಿತ ರೂ. 400 ಕೋಟಿ ಖೋಟಾ ನೋಟು ನಮ್ಮಲ್ಲಿರುವ ಒಟ್ಟು ಕರೆನ್ಸಿ ಸಂಗ್ರಹದಲ್ಲಿ ನಿಕೃಷ್ಟ ಮೊತ್ತ, ಒಟ್ಟು 16 ಲಕ್ಷ ಕೋಟಿ ರೂ. ಹಣವನ್ನು ಕೇವಲ 400 ಕೋಟಿ ರೂ.ಗಾಗಿ ಅನಾಣ್ಯೀಕರರಿಸುವುದು ಸಂಪೂರ್ಣ ಅನಗತ್ಯವೆಂದು ಅವರೂ ಸೂಚಿಸಿದ್ದರು. ಇದು ಕಪ್ಪು ಹಣವನ್ನು ಕುಂಠಿತಗೊಳಿಸುವ ದಾರಿ ಅಲ್ಲ, ಏಕೆಂದರೆ ಕಪ್ಪುಹಣ ಕೇವಲ ನೋಟಿನ ರೂಪದಲ್ಲಿರದೇ ಭೌತಿಕ ಆಸ್ತಿಗಳ ರೂಪದಲ್ಲಿದೆ ಎಂದೂ ಅವರು ಹೇಳಿದ್ದರು.

ಆದರೂ, ಕೊನೆಗೆ, ರಿಸರ್ವ್‌ಬ್ಯಾಂಕ್ ಬೋರ್ಡ್ ನೋಟುರದ್ಧತಿ ನಿರ್ಧಾರವನ್ನು ಒಪ್ಪಿಕೊಳ್ಳಲು ನಿರ್ಧರಿಸಿರುವುದು ಗಮನಾರ್ಹ. ಇದರಲ್ಲಿ ಆಶ್ಚರ್ಯವೇನೂ ಇಲ್ಲ. ಒಟ್ಟು 10 ಡೈರೆಕ್ಟರ್‌ಗಳ ಪೈಕಿ ಕೇವಲ 3 ಮಾತ್ರವೇ ಸ್ವತಂತ್ರ ಡೈರೆಕ್ಟರ್‌ಗಳಾಗಿದ್ದು ಅದರಲ್ಲೂ ಇವರ ಪೈಕಿ ಇಬ್ಬರು ಮಾತ್ರ ಮೀಟಿಂಗ್‌ನಲ್ಲಿ ಭಾಗವಹಿಸಿದ್ದರು. ಈ ಇಬ್ಬರಲ್ಲಿ ಒಬ್ಬರು ಗುಜರಾತ್‌ನ ನಿವೃತ್ತ ಅಧಿಕಾರಿ, ಮತ್ತೊಬ್ಬರು ಕಾರ್ಪೊರೇಟ್ ವಲಯದವರು. ಆದ್ದರಿಂದ ಸರ್ಕಾರಕ್ಕೆ ನಿರ್ಣಯದ ಪರವಾಗಿ ರಬ್ಬರ್ ಸ್ಟಾಂಪ್ ಹೊಡೆಸಿಕೊಳ್ಳಲು ತೊಂದರೆಯಿರಲಿಲ್ಲ. ಈ ಕ್ರಮದಿಂದ ಕೋಟ್ಯಾಂತರ ದುಡಿಯುವ ಜನರಿಗೆ ತೊಂದರೆಉಂಟಾಗುತ್ತಿದ್ದರೂ ದುಡಿಯುವ ಜನಗಳ ಪ್ರತಿನಿಧಿ ರಿಸರ್ವ್ ಬ್ಯಾಂಕ್ ಬೋರ್ಡಿನಲ್ಲಿ ಇಲ್ಲ ಎಂಬುದು ಎದ್ದು ಕಾಣುತ್ತದೆ.

ಈ ಇಡೀ ಘಟನೆ ಇಂದು ದೇಶದಲ್ಲಿನ ನಿರ್ಧಾರ ಕೈಗೊಳ್ಳುವವವರ ಗುಣಮಟ್ಟ ಎಂತಹದ್ದು ಎಂಬುದನ್ನು ಪ್ರದರ್ಶಿಸುತ್ತದೆ. ಇಂತಹ ಸಂಗತಿಗಳು ಹೊರಬಂದಾಗ ರಿಸರ್ವ್ ಬ್ಯಾಂಕಿನ "ಸ್ವಾಯುತ್ತತೆ"ಯ ಕೂಗು ಏಳುತ್ತದೆ. ಸಾಮಾನ್ಯವಾಗಿ 'ಸ್ವಾಯತ್ತತೆ'ಯ ಅರ್ಥ ಆರ್‌ಬಿಐ ನೀತಿ ನಿರ್ಧಾರ ಹಣಕಾಸು ಸಚಿವಾಲಯದ ಕೆಲವರ ಮುಷ್ಟಿಯಲ್ಲಿ ಇರುವ ಬದಲು ಐಎಂಎಫ್ ಅಥವಾ ವಿಶ್ವಬ್ಯಾಂಕ್‌ನಿಂದ ಎರವಲು ಪಡೆದ ಎಕ್ಸಿಕ್ಯುಟಿವ್‌ಗಳು ಮಾಡುವಂತಿರಬೇಕು ಎಂದೇ ಆಗಿದೆ. ಮಾಧ್ಯಮಗಳಲ್ಲಿ ಮತ್ತು ಇತರೆಡೆಗಳಲ್ಲಿ 'ಸ್ವಾಯತ್ತತೆ'ಯ ಪ್ರಶ್ನೆಯನ್ನು ಎತ್ತುವಾಗ ಆರ್‌ಬಿಐ ಸ್ವಾಯುತ್ತತೆ ಎಂದರೆ ಸರ್ಕಾರಗಳಿಂದ ಸ್ವತಂತ್ರವಾಗಿರುವುದು ಮಾತ್ರವೇ ಅಲ್ಲ, ಜತೆಗೆ ಅದು ಜನತೆಗೆ, ಸಂಸತ್ತಿಗೆ ಉತ್ತರದಾಯಿಯಾಗಬೇಕು ಎಂಬ ಅಂಶವನ್ನು ಎಂದೂ ಹೇಳುವುದಿಲ್ಲ. ಅದು ಸಾಧ್ಯವಾಗಬೇಕಾದರೆ, ಅದಕ್ಕೆ ಇರುವ ಒಂದು ದಾರಿಯೆಂದರೆ ಕಾರ್ಮಿಕರ, ರೈತರ, ಕೃಷಿ ಕೂಲಿಕಾರರ ಪ್ರತಿನಿಧಿಗಳು ಆರ್‌ಬಿಐ ಬೋರ್ಡಿನಲ್ಲಿರಬೇಕು.



"ಹಿಂದೆ ಉತ್ತರಪ್ರದೇಶ ಚುನಾವಣಾ ರ್‍ಯಾಲಿಗಳಿಗೆ ನನ್ನನ್ನು ಒಯ್ಯುತ್ತಿದ್ದಂತೆ ಈಗ ಏಕೆ ಒಯ್ಯುತ್ತಿಲ್ಲ?"

" ಆಗ ನೀನು ಯುವಕನಾಗಿ ಕುದುರೆಯ ಹಾಗೆ ಕಾಣುತ್ತಿದ್ದೆ

ವ್ಯಂಗ್ಯಚಿತ್ರ: ಅಲೋಕ್



ನಾನು ಸರ್ಜಿಕಲ್ ಸ್ಟ್ರೈಕ್ ಕೂಡ ಮಾಡಬೇಕಿತ್ತು, ನೋಟುಗಳನ್ನೂ ಎಣಿಸಬೇಕಾಗಿತ್ತು **ವ್ಯಂಗ್ಯಚಿತ್ರ: ಆರ್. ಪ್ರಸಾದ್**

ಬಿಜೆಪಿಗೆ ಏಕಿಲ್ಲ ದಲಿತರ ಓಟು ?

ಭಾರತದಲ್ಲಿನ, ಸುಮಾರು 90 ಕೋಟಿ ಮತದಾರರು ಈ ಚುನಾವಣೆಯಲ್ಲಿ ತಮ್ಮ ಮತದಾನದ ಹಕ್ಕುಗಳನ್ನು ಚಲಾಯಿಸುತ್ತಿದ್ದಾರೆ. ಇದರಲ್ಲಿ ಸುಮಾರು 30 ಕೋಟಿಗೂ ಮಿಗಿಲಾದ ದಲಿತರು ಕೂಡಾ ಈ ಮತದಾನದ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುತ್ತಾರೆ. 17 ನೇ ಲೋಕಸಭಾ ಚುನಾವಣೆಯ ಈ ಸಂದರ್ಭದಲ್ಲಿಯೂ, ಇವರ ಬದುಕು ಇನ್ನೂ ಶೋಚನೀಯ ವಾಗಿಯೇ ಇದೆ. ಇದಕ್ಕೆ ನಿಜವಾದ ಕಾರಣಗಳು ಆಳುವ ವರ್ಗಗಳು ಅನುಸರಿಸುತ್ತಿರುವ ದಲಿತ ವಿರೋಧಿ ನೀತಿಗಳು. ಈ ಹಿನ್ನೆಲೆಯಲ್ಲಿ ದಲಿತ ಸಮುದಾಯ ತುಂಬಾ ಎಚ್ಚರಿಕೆಯಿಂದ ತಮ್ಮ ಈ ಮತದಾನದ ಹಕ್ಕನ್ನು ಚಲಾಯಿಸಬೇಕಾದ ಅಗತ್ಯವಿದೆ.

ಇತ್ತೀಚಿನ ವರ್ಷಗಳಲ್ಲಿ ಜಾತಿ ತಾರತಮ್ಯ ಮತ್ತು ಅಸ್ಪೃಶ್ಯತಾ ಆಚರಣೆಗಳು ಹೆಚ್ಚಾಗಿ ಆರ್ಥಿಕ ಮತ್ತು ಸಾಮಾಜಿಕ ಬಹಿಷ್ಕಾರದ ಮೂಲಕ ದಲಿತರನ್ನು ಹೊರಗಿಡುವಂತಹ ಅನಾಗರಿಕ ಹಾಗೂ ಅಮಾನವೀಯ ಪದ್ಧತಿ ಜೀವಂತವಾಗಿದೆ. ಈ ಅಸ್ಪೃಶ್ಯತಾ ನಿಂದನೆಗೆ ತುತ್ತಾಗಿ ಶತ ಶತಮಾನಗಳಿಂದ ವಂಚಿಸಲ್ಪಟ್ಟ "ಅಸ್ಪೃಶ್ಯರು ಅಂದರೆ, ಇಂದಿನ ದಲಿತ ಸಮುದಾಯ"ಗಳನ್ನು ಮತಬ್ಯಾಂಕ್ ಗಳಾಗಿ ಬಳಸಿಕೊಂಡು ವಂಚಿಸಲಾಗಿದೆ.

ಅಸ್ಪೃಶ್ಯರು ಶಿಕ್ಷಣದ ಹಕ್ಕಿನಿಂದ, ಭೂಮಿ –ಆಸ್ತಿ ಒಡೆತನದಿಂದ, ವಸತಿ ಮತ್ತು ಉದ್ಯೋಗ ಮತ್ತು ಆರೋಗ್ಯ ಸಂರಕ್ಷಣೆಗಳಿಂದ ವಂಚಿಸಲ್ಪಟ್ಟಿದ್ದು, ಬಡತನ ಮತ್ತು ಹಸಿವು ಅವಮಾನಗಳನ್ನೇ ತಮ್ಮ ಬದುಕಿನುದ್ದಕ್ಕೂ ಸಹಿಸಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಲಕ್ಷಾಂತರ ಹಳ್ಳಿಗಳಲ್ಲಿ ಇನ್ನು ಸಾರ್ವಜನಿಕ ಬಾವಿ, ಕೆರೆ, ಸ್ಮಶಾನ, ಮತ್ತು ದೇವಸ್ಥಾನಗಳನ್ನು ದಲಿತರು ಸ್ಪರ್ಶಿಸುವಂತಿಲ್ಲ. ದೇಶದಾದ್ಯಂತ ಸಾಮಾಜಿಕ ಬಹಿಷ್ಕಾರ, ದಲಿತ ಗುಡಿಸಲುಗಳಿಗೆ ಬೆಂಕಿ, ಸಜೀವ ದಹನ, ದಲಿತ ಹೆಣ್ಣುಗಳನ್ನು– ಮಕ್ಕಳನ್ನು ಬಿಡದೆ ಬೆತ್ತಲೆ ಮೆರವಣಿಗೆ ಹಾಗೂ ಅವರ ಮೇಲೆ ಅತ್ಯಾಚಾರಗಳು, ದೇವದಾಸಿ ಪದ್ಧತಿ ಇತ್ಯಾದಿಯಾಗಿ ದಲಿತರನ್ನು ಜಾತಿ ಅಸ್ಪೃಶ್ಯತೆ ಮತ್ತು ತಾರತಮ್ಯ ಗಳ ಮೂಲಕ ದಮನ ಮಾಡುತ್ತಿರುವುದು, ಪ್ರತಿ ನಿತ್ಯದ ಸಂಗತಿಗಳಾಗಿವೆ.

ಭಾರತದಲ್ಲಿ ಅಸ್ಪೃಶ್ಯತಾ ಆಚರಣೆ ಕಾನೂನಿನ ಪ್ರಕಾರ ನಿಷೇಧಿಸಲಾದ ಪದ್ಧತಿ. ಆದರೆ ಕಾನೂನಿನ ಕಣ್ಣೆದುರಿನಲ್ಲೇ ದಲಿತರ ಮೇಲೆ ದೌರ್ಜನ್ಯ ಗಳು ನಡೆಯುತ್ತಲೇ ಇವೆ. ಕಳೆದ ಐದು ವರ್ಷಗಳ ಬಿಜೆಪಿ ಆಡಳಿತದಲ್ಲಿ, ಸುಮಾರು 2 ಲಕ್ಷದ 35 ಸಾವಿರ ದೌರ್ಜನ್ಯದ ಪ್ರಕರಣಗಳು ದಲಿತರ ಮೇಲೆ ನಡೆದಿವೆ. ಎನ್.ಸಿ.ಆರ್. ಬಿ. ವರದಿಯ ಪ್ರಕಾರ, ಅಖಿಲ ಭಾರತ ಮಟ್ಟದಲ್ಲಿ 2014 ರಲ್ಲಿ ಒಟ್ಟು 40,401 ದೌರ್ಜನ್ಯದ ಪ್ರಕರಣಗಳು ದಾಖಲಾಗಿದ್ದು, 2015 ರಲ್ಲಿ 38,670 ಪ್ರಕರಣಗಳು ದಾಖಲಾಗಿವೆ. ಅಂದರೆ, ಶೇ.4.3 ರಷ್ಟು ದೌರ್ಜನ್ಯಗಳು ಕಡಿಮೆಯಾಗಿವೆ. ಆದರೆ, 2016 ಮತ್ತು 2017 ರಲ್ಲಿ ಕ್ರಮವಾಗಿ 40,801 ಮತ್ತು 41,208 ದೌರ್ಜನ್ಯ ಪ್ರಕರಣಗಳು ನಡೆದಿವೆ.

ದೌರ್ಜನ್ಯ ಪ್ರಕರಣಗಳು ಹೆಚ್ಚಾಗಿ ಬಿಜೆಪಿ ಆಳ್ವಿಕೆಯ ರಾಜ್ಯಗಳಾದ ಉತ್ತರ ಪ್ರದೇಶ, ರಾಜಸ್ತಾನ, ಮಧ್ಯ ಪ್ರದೇಶ, ಗುಜರಾತ್, ಮಹಾರಾಷ್ಟ್ರ ಹಾಗೂ ಬಿಹಾರ್, ಛತ್ತೀಸ್ ಗರ್ ನಲ್ಲಿ ದಾಖಲಾಗಿವೆ. ಹಾಗೆಯೇ, ದಕ್ಷಿಣ ಭಾರತದ ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ ಮತ್ತು ಕರ್ನಾಟಕ ರಾಜ್ಯಗಳು ಆನಂತರದ ಸ್ಥಾನಗಳನ್ನು ಪಡೆದಿವೆ. ಕೇರಳ, ಪಶ್ಚಿಮ ಬಂಗಾಳ ದಲ್ಲಿ ಕಡಿಮೆ ಪ್ರಮಾಣದಲ್ಲಿ ಪ್ರಕರಣಗಳು ದಾಖಲಾಗಿವೆ. ಕಳೆದ ಐದು ವರ್ಷಗಳಲ್ಲಿ ಕರ್ನಾಟಕದಲ್ಲಿ, 10 ಸಾವಿರಕ್ಕೂ ಹೆಚ್ಚು ದೌರ್ಜನ್ಯ ಪ್ರಕರಣಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಮೇಲೆ ನಡೆದಿರುವುದು ದಾಖಲಾಗಿದ್ದು, ಶಿಕ್ಷೆಗೆ ಒಳಗಾದವರ ಸಂಖ್ಯೆ ಮಾತ್ರ ತೀರ ಕಡಿಮೆಯಾಗಿವೆ.

ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ಸಂವಿಧಾನ ಬದ್ಧವಾಗಿ ಬಂದ ಮೀಸಲಾತಿಯನ್ನು ಒಂದು ಕಡೆ ಸಂಘ ಪರಿವಾರದವರು ವಿರೋಧ ಮಾಡುತ್ತಿದ್ದು, ಮತ್ತೊಂದೆಡೆ, ಆರ್ಥಿಕ ವಾಗಿ ಹಿಂದುಳಿದವರಿಗೂ ಈ ಮೀಸಲಾತಿಯನ್ನು ಉದ್ಯೋಗ ಮತ್ತು ಶಿಕ್ಷಣದಲ್ಲಿ ನೀಡಲಾಗುತ್ತಿದೆ. ಸಾಮಾಜಿಕ ಹಿನ್ನೆಲೆಯಲ್ಲಿ ಸಂವಿಧಾನ ಬದ್ಧವಾಗಿ ದಲಿತರಿಗೆ–ಬುಡಕಟ್ಟು ಸಮುದಾಯಕ್ಕೆ ಲಭ್ಯವಿರುವ ಮೀಸಲಾತಿಯನ್ನು ಕಿತ್ತು ಹಾಕುವ ಹುನ್ನಾರ ಇದಾಗಿದೆ.

ಭಾರತ ಸ್ವತಂತ್ರ ವಾದ ನಂತರ "ಸಮಾನತೆ ಮತ್ತು ಸಾಮಾಜಿಕ ನ್ಯಾಯ "ಅಡಿಪಾಯದ ಸಂವಿಧಾನವನ್ನು ಡಾ। ಅಂಬೇಡ್ಕರ್ ನೀಡಿದರು. ಆದ್ದರಿಂದಲೇ ಸಂವಿಧಾನದ ಪ್ರತಿಗಳನ್ನು ಸಂಘ ಪರಿವಾರದ ಪುಂಡರು ಸುಡುತ್ತಿದ್ದಾರೆ. ಡಾ। ಅಂಬೇಡ್ಕರ್ ಪ್ರತಿಮೆಗಳನ್ನು ಧ್ವಂಸ ಮಾಡುವವರಿಗೆ ಬಿಜೆಪಿ ಆಡಳಿತಗಳಲ್ಲಿ ಪ್ರೋತ್ಸಾಹ ನೀಡುತ್ತಿದ್ದಾರೆ. ನಾವು ಅಧಿಕಾರಕ್ಕೆ ಬಂದಿರುವುದೇ ಸಂವಿಧಾನವನ್ನು ಬದಲಾಯಿಸಲು ಎಂದು ಹೇಳಲು ಹಿಂಜರಿಯುವುದಿಲ್ಲ. ಇವರ ಆಡಳಿತದ ಅವಧಿಯಲ್ಲಿ, ಗೋವು ಸಂರಕ್ಷಣಾ ಹೆಸರಿನಲ್ಲಿ, ನೈತಿಕ ಪೋಲಿಸ್ ದಾದಾ ಗಿರಿ ನಡೆಸಲಾಗುತ್ತಿದೆ. ಲವ್ ಜಿಹಾದ್ ಹೆಸರಿನಲ್ಲಿ ಪರಸ್ಪರ ಪ್ರೀತಿ ಮಾಡುವ ಯುವಕ–ಯುವತಿಯರ ಮೇಲೆ ದಾಳಿ ಮಾಡುತ್ತಾರೆ. ಮತ್ತು ದಲಿತರು ಅಂತರ್ ಜಾತಿಯ ವಿವಾಹವಾದರೆ ಅವರನ್ನು ಮರ್ಯಾದೆಯ ಹೆಸರಿನಲ್ಲಿ ಕೊಲ್ಲಲಾಗುತ್ತಿದೆ. ಇವೆಲ್ಲಾ ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಹೇರಳವಾಗಿ ಹೆಚ್ಚಾಗಿವೆ.

ದಲಿತರ ಮೇಲೆ ದೌರ್ಜನ್ಯಗಳು ಹೆಚ್ಚಾಗಿ ನಡೆದಿವೆ. ಇತ್ತೀಚಿನ ಉದಾಹರಣೆ ಗಳೆಂದರೆ, ಗುಜರಾತ್‌ನ, ಊನಾದಲಿ ದಲಿತರ ಮೇಲೆ ನಡೆದ ದೌರ್ಜನ್ಯ, ಸಂಘ ಪರಿವಾರ ಗುಂಪುನಿಂದ ಮೀಸಲಾತಿಯ ವಿರುದ್ಧದ ಹೋರಾಟಗಳು, ದಲಿತ ಸಂಶೋಧನಾ ವಿದ್ಯಾರ್ಥಿ ರೋಹಿತ್ ವೇಮುಲಾನ ಆತ್ಮಹತ್ಯೆಗೆ ಕಾರಣ, ಮುಂಬಯಿ ನಗರದಲ್ಲಿದ್ದ ಐತಿಹಾಸಿಕ ಅಂಬೇಡ್ಕರ್ ಭವನದ ಧ್ವಂಸ, ಪುಣೆ ಫಿಲ್ಮ್ ಸಂಸ್ಥೆಯಲ್ಲಿ ಮತ್ತು ಚೆನ್ನೈನಲ್ಲಿ ನ ಅಂಬೇಡ್ಕರ್– ಪೆರಿಯಾರ್ ವಿಶ್ವವಿದ್ಯಾಲಯದಲ್ಲಿ ದಲಿತ ವಿದ್ಯಾರ್ಥಿಗಳ ಮೇಲೆ ದಾಳಿ, ಜೆ.ಎನ್.ಯು, ವಿದ್ಯಾರ್ಥಿಗಳ ಮೇಲೆ ದೇಶ ದ್ರೋಹದ ಪ್ರಕರಣಗಳು, ಬೀಮ ಕೊರೆಗಾಂವ್ ವಿಜಯೋತ್ಸದ ಮೇಲೆ ದಾಳಿ, ದಲಿತ ವಿದ್ಯಾರ್ಥಿನಿ ದಾನಮ್ಮಳ ಮೇಲೆ ಅತ್ಯಾಚಾರ ಮತ್ತು ಕೊಲೆ, ಹರಿಯಾಣದಲ್ಲಿ ದಲಿತ ಕಂದಮ್ಮಗಳನ್ನು ಸುಟ್ಟು ಭಸ್ಮ ಮಾಡಿದ್ದು, ದಲಿತರನ್ನು ನಾಯಿಗಳಿಗೆ ಹೋಲಿಸಿದ್ದು, ದೌರ್ಜನ್ಯ ತಡೆ ಕಾಯಿದೆಯನ್ನು ದುರ್ಬಲ ಗೊಳಿಸಿದ್ದು, ಇದನ್ನು ಪ್ರತಿ ಭಟಿಸಿದ ದಲಿತ ಹೋರಾಟಗಾರರ ಮೇಲೆ ಗುಂಡು ಹಾರಿಸಿ ಅನೇಕರನ್ನು ಕೊಂದದ್ದು, ಮತ್ತು ಬಡ್ತಿ ಮೀಸಲಾತಿ ಹಿಂಪಡೆದಂತಹ ಸುಪ್ರೀಂ ಕೋರ್ಟ್ನ ತೀರ್ಪು ಗಳ ಹಿಂದಿನ ರೂವಾರಿಗಳು ಸಂಘ ಪರಿವಾರದ ಆರಾದಕರೇ ಆಗಿದ್ದರು ಎಂಬುದನ್ನು ಮರೆಯ ಬಾರದು.

ಆದ್ದರಿಂದ ದಲಿತ ವಿರೋಧಿ ಧೋರಣೆಗಳ ಬಿಜೆಪಿ' ಯನ್ನು ಸೋಲಿಸಬೇಕು. ತನ್ನ ವಿರುದ್ಧ ಮಾತನಾಡುವವರನ್ನು ಅಸಹಿಷ್ಣುತೆಯಿಂದ ದೇಶದ್ರೋಹಿ ಗಳೆಂದು ಬಂಧಿಸಿ ಕಿರುಕುಳ ಕೊಡುತ್ತಿದೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಹಲ್ಲೆ ನಡೆಸಲಾಗುತ್ತಿದೆ. ಮಹಾತ್ಮ ಗಾಂಧೀಜಿ ಯನ್ನು ಕೊಂದವರನ್ನು ಆರಾದಿಸುವುದು, ನರೇಂದ್ರ ದಾಬೋಲ್ಕರ್, ಪೆನ್ಸಾರೆ, ಎಂ.ಎಂ.ಕಲ್ಬುರ್ಗಿ ಹಾಗೂ ಪತ್ರಕರ್ತೆ ಗೌರಿ ಲಂಕೇಶ್ ಕೊಲ್ಲಲ್ಪಟ್ಟಾಗ ವಿಜೃಂಭಣೆ ಆಚರಿಸಿದ ಶಕ್ತಿ ಗಳ ಬಗ್ಗೆ ಪ್ರಧಾನಿ ಮೌನವ್ರತ ಆಚರಿಸಿದ್ದು, ಇವರ ರಾಜಕೀಯ ಗುರು ಗಳಾದ ಆರ್.ಎಸ್.ಎಸ್. ಮತ್ತು ಸಂಘ ಪರಿವಾರ ದ ಕಾರ್ಯ ಸೂಚಿಯನ್ನು ಮತ್ತು "ಹಿಂದುತ್ವ" ರಾಷ್ಟ್ರೀಯತೆಯನ್ನು ಹೇರುವುದು, ಭಾರತ್ ಮಾತಾಕೀ ಜೈ ಘೋಷಣೆ' ಯನ್ನು ಕೂಗದೆ ಇರುವವರನ್ನು ದೇಶ ದ್ರೋಹಿಗಳೆಂದು "ಮಾಬ್ ಲಿಂಚಿಂಗ್" ಮಾಡುವುದು, ಕಳೆದ ಐದು ವರ್ಷಗಳ ಇವರ ಆಡಳಿತದ ಅವಧಿಯಲ್ಲಿ ಕಂಡಿದ್ದೇವೆ.

ಈ ನಕಲಿ ದೇಶ ಭಕ್ತರ ಬಗ್ಗೆ ಜಾಗೃತಿ ಮೂಡಿಸಬೇಕಾಗಿದೆ. ಅಸ್ಪೃಶ್ಯತೆಯನ್ನು ಆಚರಿಸುತ್ತಲೇ, ಸ್ತ್ರೀಯರಿಗೆ ಸಮಾನತೆಯನ್ನು ನಿರಾಕರಿಸಿ ಶಬರಿ ಮಲೆ ದೇವಸ್ಥಾನ ಪ್ರವೇಶಕ್ಕೆ ತಡೆ ಒಡ್ಡುತ್ತಿರುವ, ಬಡತನ, ಹಸಿವು ದಾರಿದ್ರ್ಯ, ನಿರುದ್ಯೋಗ, ಇಂತಹ ಜ್ವಲಂತ ಸಮಸ್ಯೆಗಳ ಪರಿಹಾರಕ್ಕೆ ಗಮನಕೊಡದೆ 'ದೇಶಸೇವೆ' ಮಾಡುತ್ತವೆ ಎಂಬ ನಕಲಿ ದೇಶಭಕ್ತರ ಬಗ್ಗೆ ಎಲ್ಲೆಡೆ ಅರಿವು ಮೂಡಿಸಬೇಕು. ಭಾರತವನ್ನು ಇಂತಹ ನಕಲಿ ದೇಶಭಕ್ತರಿಂದ ಮುಕ್ತ ಗೊಳಿಸಬೇಕು. ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿ ಗಳನ್ನು ಒಂದು ಗೂಡಿಸಿ, ಸಮತೆಯ ನಾಡಿನ ಉದಯಕ್ಕೆ ಮುಂದಾಗೋಣ.

ನಾಗರಾಜ ನಂಜುಂಡಯ್ಯ,
ರಾಷ್ಟ್ರೀಯ ಸದಸ್ಯರು
ದಲಿತ್ ಶೋಷಣ್ ಮುಕ್ತಿ ಮಂಚ್, ನವ ದೆಹಲಿ.

ಜೇಬು ಜೋಳಿಗೆ ಮತ್ತು ಸನಾತನ ಭ್ರಷ್ಟಾಚಾರ... ಪುಟ 6 ರಿಂದ

ಪ್ರಜಾತಾಂತ್ರಿಕತೆಯೂ ಕೆಲಸಮಾಡುವುದಿಲ್ಲ.

ಕಾನೂನಿನ ದೃಷ್ಟಿಯಿಂದ ವ್ಯಕ್ತಿಗಳಲ್ಲಿ ನೈಸರ್ಗಿಕ ವ್ಯಕ್ತಿತ್ವದ 'ಸ್ವಾಭಾವಿಕ ವ್ಯಕ್ತಿ' ಮತ್ತು ವ್ಯಕ್ತಿ ಪಾತ್ರದ 'ತಾಂತ್ರಿಕವ್ಯಕ್ತಿ' ಎಂಬ ಎರಡು ಪ್ರಭೇಧಗಳನ್ನು ಹುಟ್ಟುಹಾಕಲಾಗಿದೆ. ಈ ಕಾನೂನಿನ ಉಗಮ ಶ್ರಮಿಕರ ಶ್ರಮವನ್ನು ಲಪಟಾಯಿಸಿ ಅದರ ಒಂದು ಭಾಗವನ್ನೇ ಶ್ರಮಿಕರಿಗೆ ವೇತನವೆಂದು ಕೊಟ್ಟು, ಉಳಿದದ್ದನ್ನು ತನ್ನ ಸ್ವಂತದ್ದೆನ್ನುವ ಶೋಷಕ ವ್ಯವಸ್ಥೆಯಲ್ಲಿದೆ. ಹಾಗಾಗಿ ಈ ಕಾನೂನಿನ ಗರಿಷ್ಠ ಲಾಭವು ಶೋಷಕ ವ್ಯವಸ್ಥೆಯನ್ನು ಬೆಳೆಸಿ ಪೋಷಿಸುವ ಉದ್ಯಮಿ, ವ್ಯಾಪಾರಿ ವರ್ಗಗಳಿಗೆ ಆಗುತ್ತಿದೆ. ಕಾನೂನಿನ ಪ್ರಕಾರ 'ಸ್ವಾಭಾವಿಕ ವ್ಯಕ್ತಿ'ಗಳಿಗೆ ಅನ್ವಯಿಸುವ ಎಷ್ಟೋ ಬಾಧ್ಯತೆಗಳು ವ್ಯಕ್ತಿ ಪಾತ್ರದ 'ತಾಂತ್ರಿಕ ವ್ಯಕ್ತಿ'ಗಳಿಗೆ ಅನ್ವಯಿಸುವುದಿಲ್ಲ. ಈ ಸೌಲಭ್ಯವು ದೇಣಿಗೆಗಳನ್ನು ಸಂಗ್ರಹಿಸುವ ಧಾರ್ಮಿಕ, ಮತ್ತು ಸೇವಾಸಂಸ್ಥೆಗಳಿಗೂ ಹರಿದುಬರುವುದರಿಂದ ವ್ಯಕ್ತಿಗಳು ಭ್ರಷ್ಟರಾಗಿದ್ದೂ ಸಂಸ್ಥೆಗಳ ಮರೆಯಲ್ಲಿದ್ದುಕೊಂಡು ಬಾಧ್ಯತೆಗಳಿಂದ ಮುಕ್ತವಾಗಿರಬಹುದು. ಸ್ಪಷ್ಟ ಮಾತುಗಳಲ್ಲಿ ಹೇಳಬೇಕೆಂದರೆ, ಸಂಸ್ಥೆಯ ಹಣದಲ್ಲಿ ವಿಲಾಸ ಜೀವನವನ್ನು ನಡೆಸಿಯೂ ಭ್ರಷ್ಟರಲ್ಲದ ಗೌರವಾನ್ವಿತರೆಂಬ ಸನ್ಮಾನಕ್ಕೆ ಪಾತ್ರರಾಗಬಹುದು.

ಸ್ವಾಭಾವಿಕ ವ್ಯಕ್ತಿಗೆ ಆಸ್ತಿ ಹಕ್ಕಿಗೆ ಸಂಬಂಧಿಸಿದ ಕಾನೂನಿನ ಕಟ್ಟುಪಾಡುಗಳು ಮಾತ್ರವಲ್ಲ, ನೈತಿಕ ಮೌಲ್ಯಗಳ ಕಟ್ಟುಪಾಡುಗಳೂ ಇವೆ. ತಾಂತ್ರಿಕ ವ್ಯಕ್ತಿಗೆ ಕೆಲವು ನಿರ್ದಿಷ್ಟ ಕಾನೂನಿನ ಕಟ್ಟುಪಾಡುಗಳು ಮಾತ್ರ ಇವೆಯೇ ಹೊರತು ನೈತಿಕ ಕಟ್ಟುಪಾಡುಗಳು ಇಲ್ಲ. ಕಂಪೆನಿ, ಕಾರ್ಪೋರೇಟ್, ರಾಜ್ಯ, ದೇಶ, ಸರಕಾರ, ನ್ಯಾಯಾಲಯ, ಮಠ ಮುಂತಾದ ಸಂಸ್ಥೆಗಳಿಗೆ, ಎಂಡಿ, ಮಂತ್ರಿ, ಪ್ರಧಾನಿ, ನ್ಯಾಯಾಧೀಶ ಧಾರ್ಮಿಕಗುರು, ಮುಂತಾಗಿ ಅವುಗಳನ್ನು ಪ್ರತಿನಿಧಿಸುವ ಪದವಿಗಳಿಗೆ ಅಧಿಕಾರದ ಕಟ್ಟುಪಾಡುಗಳಿವೆ, ಆದರೆ ನೈತಿಕ ನಿರ್ಬಂಧಗಳಿಲ್ಲ. ಇವುಗಳಿಗೂ, ಮಾನ, ಮರ್ಯಾದೆ, ದಯೆ, ಕರುಣೆ, ಮಾನವೀಯತೆ ಮುಂತಾದ ಅಪ್ಪಟ ಸ್ವಾಭಾವಿಕ ವ್ಯಕ್ತಿಯ ಗುಣಗಳನ್ನು ಗಂಟುಹಾಕಿ ಈ ಸರಕಾರಕ್ಕೆ ಮಾನ ಮರ್ಯಾದೆ ಇಲ್ಲ, ಆ ಬ್ಯುರಾಕ್ರಸಿಗೆ ಕರುಣೆಯಿಲ್ಲ, ನ್ಯಾಯಕ್ಕೆ ಕಣ್ಣಿಲ್ಲ ಮುಂತಾಗಿ ಮಾತನಾಡುವುದು, ಆಲಂಕಾರಿಕ ಹೇಳಿಕೆಗಳ ಸಂದರ್ಭಗಳನ್ನು ಹೊರತುಪಡಿಸಿ, ಹಾಸ್ಯಾಸ್ಪದವೆನಿಸುವುದು ಈ ಕಾರಣಕ್ಕಾಗಿ. ಆದರೆ ಅಂಥ ಪದವಿಗಳನ್ನು ಅಲಂಕರಿಸುವ ಸ್ವಾಭಾವಿಕ ವ್ಯಕ್ತಿಗಳು ಭ್ರಷ್ಟರಾಗಿದ್ದಾಗ ಅವರನ್ನು ನೈತಿಕವಾಗಿ ಹೊಣೆಮಾಡಿದರೆ, ಆಗ ಅವರು ತಮ್ಮ ತಾಂತ್ರಿಕ ವ್ಯಕ್ತಿತ್ವದಲ್ಲಿ ಮುಖ ಮರೆಸಿಕೊಂಡು 'ಹುದ್ದೆ'ಯ ಘನತೆಯನ್ನು ಕೆಳಗಿಳಿಸಬಾರದೆಂದು ಕರೆಕೊಡುತ್ತಾರೆ.

ಭ್ರಷ್ಟಹಣವನ್ನು ಒಬ್ಬ ವ್ಯಕ್ತಿಯು ಜೇಬಿಗೆ ಹಾಕಿಕೊಂಡರೆ, ಆ ಜೇಬಿನಿಂದ ತೆಗೆದು ಸ್ವಂತಕ್ಕೆ ಬಳಸಿದರೆ ಆ ವ್ಯಕ್ತಿಗೆ ಭ್ರಷ್ಟ ಎಂಬ ನೈತಿಕ ಕಳಂಕ ಅಂಟಿಕೊಳ್ಳುತ್ತದೆ. ಆದರೆ ಭ್ರಷ್ಟಹಣವನ್ನು ತನ್ನ ಜೇಬಿಗೆ ಹಾಕಿಕೊಳ್ಳುವ ಬದಲು ತನ್ನ ಸಂಸ್ಥೆಯ ಜೋಳಿಗೆಗೆ, ಹುಂಡಿಗೆ ಫಂಡಿಗೆ ಹಾಕಿಕೊಂಡರೆ, ಅದರಿಂದ ತೆಗೆದ ಹಣವನ್ನು ಸಂಸ್ಥೆಯ ಪದಾಧಿಕಾರಿಯಾಗಿ, ಧರ್ಮಾಧಿಕಾರಿಯಾಗಿ ತನ್ನ ಸ್ವಂತ ಉಪಯೋಗಕ್ಕೆ, ವಿಲಾಸಗಳಿಗೆ ಬಳಸಿದರೆ ಆಗ ಯಾವ ನೈತಿಕ ಕಳಂಕವೂ ಅವನಿಗೆ ಅಂಟಿಕೊಳ್ಳುವುದಿಲ್ಲ. ಈ ಕಾರಣಕ್ಕಾಗಿಯೇ ಸಂಸ್ಥೆಗೆಂದು, ಪಕ್ಷಕ್ಕೆಂದು ಹಣವನ್ನು ಲಂಚವಾಗಿ ಪಡೆಯುವ ಯಾವ ಅಧಿಕಾರಿಗೂ, ನೈತಿಕ ತಾಕಲಾಟಗಳು ಇರುವುದಿಲ್ಲ. ಇದರಿಂದಾಗಿಯೇ ಭ್ರಷ್ಟರೆಂದು ಜನಜನಿತವಾಗಿರುವ ವ್ಯಕ್ತಿಗಳೂ ಸಹ ರಾಜಾರೋಷವಾಗಿ, ನಿರ್ಭಯವಾಗಿ, ಅಳುಕಿಲ್ಲದೆ ಭ್ರಷ್ಟತೆಯ ವಿರುದ್ಧ ಮಾತನಾಡುವುದು ಸಾಧ್ಯ. ಇದನ್ನು ಅವರ ಆಷಾಢಭೂತಿತನ ಎನ್ನಲಾಗದು. ಚೀಲ, ಜೋಳಿಗೆ, ಹುಂಡಿ, ಫಂಡುಗಳಲ್ಲಿ ಅಂತರ್ಗತವಾಗಿರುವ ನೈತಿಕ ನಿರ್ಲೇಪವು ಅವರನ್ನು ತಾಂತ್ರಿಕವಾಗಿ ಭ್ರಷ್ಟರಲ್ಲವೆಂದು ತೋರುವಂತೆ ಮಾಡುತ್ತದೆ.

ಹಣ, ಆಸ್ತಿ, ಸಂಪತ್ತು, ಅಧಿಕಾರ, ಪದವಿ ಮುಂತಾದುವೆಲ್ಲಾ ಭ್ರಷ್ಟ ವಿಧಾನಗಳಿಂದ ದೊರೆಯಲಿ, ಅಥವಾ ನ್ಯಾಯಮಾರ್ಗಗಳಿಂದ ಬಂದಿರಲಿ ಅವುಗಳಲ್ಲಿ ಅಡಕವಾಗಿರುವ ಮೌಲ್ಯಗಳು ಮಾತ್ರ ಜನಸಮುದಾಯದ ಸಾಮಾಜಿಕ ಶ್ರಮದಿಂದಲೇ ಹುಟ್ಟಿದವುಗಳು. ಆದ್ದರಿಂದ ವಾಸ್ತವವಾದವುಗಳು. ಆ ಮೌಲ್ಯಗಳು ವ್ಯಕ್ತಿಗಳ ಜೇಬಿನಲ್ಲಿರಲಿ, ಅಥವಾ ಜೋಳಿಗೆ, ಚೀಲ, ಫಂಡು, ನಿಧಿಗಳಲ್ಲಿರಲಿ ಅವುಗಳ ಮೌಲ್ಯವು ಜನಸಾಮಾನ್ಯರ ಶ್ರಮದಿಂದಲೇ ಹುಟ್ಟಿದವುಗಳು. ಆದ್ದರಿಂದ ಜನರಿಗೆ ಸೇರಿದವುಗಳು. ಆದ್ದರಿಂದ ಭ್ರಷ್ಟತೆ ಎಂಬುದು ನಿರ್ವಾತದಲ್ಲಿರುವ ನೈತಿಕ ಅಪಮೌಲ್ಯವಲ್ಲ. ಜನರ ದುಡಿಮೆಯಲ್ಲಿ, ಅವರ ಆರ್ಥಿಕ ಸಂಬಂಧಗಳಲ್ಲಿ, ಸಾಮಾಜಿಕ ನೆಲೆಗಳಲ್ಲಿ ಅವರಿಗೆ ನ್ಯಾಯವಾಗಿ ಸಲ್ಲಬೇಕಾದ ಮೌಲ್ಯಗಳ ಲಪಟಾವಣೆಯೇ ಭ್ರಷ್ಟತೆ. ಅದಕ್ಕೆ ಪ್ರಭುತ್ವದ ಮುಸುಕು ಹಾಕಿದರೆ ಅದು ಎಲ್ಲರಿಗೂ ಕಾಣಿಸುವ ಆದರೆ ಯಾರ ಕೈಗೂ ಸಿಗದ ಮಾಯಾವಿ ಬೆಕ್ಕಿನಂತಾಗುತ್ತದೆ. ಭ್ರಷ್ಟಾಚಾರವನ್ನು ತೊಲಗಿಸಲು ಉಪವಾಸ ಮಾಡುವ ನೈತಿಕವಾದಿಗಳು ತಮ್ಮ ನಿಸ್ಪೃಹತೆಯಿಂದ ಜನಸಾಮಾನ್ಯರನ್ನು ಆಕರ್ಷಿಸಿದರೂ ಭ್ರಷ್ಟಾಚಾರದ ಮೂಲವನ್ನು ಗುರುತಿಸಲು ವಿಫಲರಾಗಿ ಮೂಲೆಸೇರುತ್ತಾರೆ. ಜನರೆಲ್ಲರೂ ನೈತಿಕ ಮೌಲ್ಯಗಳನ್ನು ರೂಢಿಸಿಕೊಂಡರೆ, ನಮ್ಮ ನಾಯಕರೆಲ್ಲರೂ ಶುದ್ಧಹಸ್ತರಾದರೆ, ನಮ್ಮ ಶ್ರೀಮಂತರೆಲ್ಲರೂ ದುರಾಸೆಯಿಂದ ಮುಕ್ತರಾದರೆ ಸುಖೀಸಮಾಜವನ್ನು ಕಟ್ಟಬಹುದು ಎಂಬ ನೈತಿಕ ಪರಿಹಾರಗಳನ್ನು ಮತದಾರರಾದ ನಿರ್ಗತಿಕ, ಅರೆಗತಿಕ ಜನಸಾಮಾನ್ಯರಿಗೆ ಸೂಚಿಸುತ್ತಾರೆ. ಕೋಟ್ಯಾಧಿಪತಿಗಳಾದ ಉಮೇದುವಾರರು ತಮ್ಮ ಎಂದಿನಧೋರಣೆಯನ್ನು,ಅಂದರೆ 'ಭ್ರಷ್ಟಾಚಾರವಿಲ್ಲದೆ ರಾಜಕೀಯವಿಲ್ಲ' ಎಂಬ ಧೋರಣೆಯನ್ನು ಎಗ್ಗಿಲ್ಲದೆ ಅನುಸರಿಸುತ್ತಾ 'ಭ್ರಷ್ಟಾಚಾರಮುಕ್ತ ರಾಷ್ಟ್ರದ ನಿರ್ಮಾಣಕ್ಕಾಗಿ', 'ಹಸಿವುಮುಕ್ತ ಸಮಾಜವನ್ನು ಕಟ್ಟುವುದಕ್ಕಾಗಿ' ಜನರ ಮತ ಯಾಚಿಸುತ್ತಾರೆ. ಹಸಿವು, ಬಡತನ, ನಿರುದ್ಯೋಗ ಮೊದಲಾದ ಆರ್ಥಿಕ ಸಂಕಷ್ಟಗಳಿಗೆ ಸಿಕ್ಕಿ ನಿತ್ಯವೂ ನರಳುವ ಜನಸಾಮಾನ್ಯರು ಚುನಾವಣೆಯ ಸಂದರ್ಭದಲ್ಲಿ ಕೈಗೆ ಸಿಕ್ಕಷ್ಟು ಸೌಲಭ್ಯಗಳಿಗೆ ತೃಪ್ತಿಪಟ್ಟುಕೊಂಡು ಮತಚಲಾಯಿಸುತ್ತಾರೆ. ಎಲ್ಲ ಭ್ರಷ್ಟಾಚಾರದ ಮೂಲವು ಬದುಕಿನ ಅಗತ್ಯಗಳನ್ನು ಪೂರೈಸುವ ಸಂಪತ್ತನ್ನು ಸೃಷ್ಟಿಸುವ ಶ್ರಮಿಕರಿಗೆ, ಅವರ ದುಡಿಮೆಯ ಪೂರ್ಣಫಲವನ್ನು ಕೊಡದೆ ಉದ್ಯಮಿಗಳು ತಮ್ಮಲ್ಲೇ ಹಿಡಿದಿಟ್ಟುಕೊಂಡ ಹಣದಲ್ಲಿದೆ ಎಂಬುದು ಅವರಿಗೆ ತಿಳಿಯದೆ ಹೋಗುತ್ತದೆ. ಉದ್ಯಮಿ–ರಾಜಕಾರಣಿಗಳು ಹುಟ್ಟುಹಾಕಿ, ಪೋಷಿಸುವ ಭ್ರಷ್ಟಾಚಾರವು ಸನಾತನವಾಗಿ ಉಳಿದುಕೊಳ್ಳುತ್ತದೆ.

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಟರ್ಕಿ : ಮೊದಲ ಕಮ್ಯೂನಿಸ್ಟ್ ಮೇಯರ್ ಆಯ್ಕೆ



ಜಗತ್ತಿನ ದೊಡ್ಡ ಮುಸ್ಲಿಂ ಬಹುಸಂಖ್ಯಾತ ದೇಶಗಳಲ್ಲಿ ಒಂದಾದ ಟರ್ಕಿಯ ಮಹಾನಗರಗಳ ಮೇಯರ್‌ಗಳ ಚುನಾವಣೆ ಯಲ್ಲಿ ಟರ್ಕಿ ಕಮ್ಯೂನಿಸ್ಟ್ ಪಕ್ಷ(ಟಿಕೆಪಿ)ದ, ಫತಿಹ್ ಮೆಹ್ಮೆಟ್ ಮಕಾಗ್ಲು ರವರು ಟರ್ಕಿಯ ಚುನಾವಣಾ ಇತಿಹಾಸದಲ್ಲೇ ಮೊಟ್ಟ ಮೊದಲ ಬಾರಿಗೆ, ಒಂದು ಪ್ರಾಂತ್ಯ ರಾಜಧಾನಿಯಾದ ಟುನ್ಸೆಲಿ ನ ಮಹಾನಗರ ಮೇಯರ್ ಸ್ಥಾನವನ್ನು ಗೆದ್ದು ಐತಿಹಾಸಿಕ ದಾಖಲೆಯನ್ನು ಸೃಷ್ಟಿಸಿದ್ದಾರೆ.

ಮಾರ್ಚ್ 31ರಂದು ನಡೆದ ನಗರ ಮೇಯರುಗಳ ಚುನಾವಣೆಯಲ್ಲಿ, ಕಮ್ಯುನಿಸ್ಟ್ ಪಕ್ಷದ ಮಕಾಗ್ಲು ರವರವರು ಶೇ.32.7 ರಷ್ಟು ಮತಗಳನ್ನು ಪಡೆದು, ಇವರ ಪ್ರತಿಸ್ಪರ್ಧಿ ಹೆಚ್.ಡಿ.ಪಿ ಅಭ್ಯರ್ಥಿ ಯನ್ನು ಸೋಲಿಸಿದ್ದಾರೆ. ಇವರು ಕೊಮಿನಿಷ್ಟ್ ಬಾಸ್ಕಾನ್ ಅಥವಾ ಕಮ್ಯೂನಿಸ್ಟ್ ಪ್ರೆಸಿಡೆಂಟ್ ಎಂದು ಟಿಕೆಪಿ ಯಲ್ಲಿ ಪ್ರಖ್ಯಾತ ಗೊಂಡಿದ್ದರು. ನಗರ ಕೃಷಿಯಲ್ಲಿ ಅದ್ಭುತ ಕೆಲಸ ಮಾಡುವ ಮೂಲಕ, ಕಾಳುಗಳು, ಬೀನ್ಸ್ ಮತ್ತು ಆಲೂಗೆಡ್ಡೆ ಇನ್ನಿತರೆ ತರಕಾರಿಗಳನ್ನು ಇಡೀ ಮುನ್ಸಿಪಲ್ ವ್ಯಾಪ್ತಿಯಲ್ಲಿ ಯಥೇಚ್ಛವಾಗಿ ಬೆಳೆದು ಇದರ ಆದಾಯವನ್ನು ಬಡವರಿಗೆ ಮತ್ತು ವಿದ್ಯಾರ್ಥಿಗಳ ವ್ಯಾಸಂಗ ಕ್ಕೆ ವಿತರಿಸುತ್ತಿದ್ದರು. ಇದು ಟರ್ಕಿಷ್‌ನ ಆ ಪ್ರದೇಶದ ಜನರಲ್ಲಿ ಈ ಕಮ್ಯೂನಿಸ್ಟ್ ನಾಯಕನ ಬಗ್ಗೆ ಮೆಚ್ಚುಗೆಗೆ ಪಾತ್ರವಾಗಿತ್ತು.

ಅಧ್ಯಕ್ಷ ಎರ್ಡಾಗಾನ್ ಹಿನ್ನೆಡೆ

ಕಳೆದ 2017 ರಲ್ಲಿ, ಭಾರಿ ಅಂತರದಿಂದ ಪುನಾರಾಯ್ಕೆ ಗೊಂಡಿದ್ದ ಟರ್ಕಿಯ ಅಧ್ಯಕ್ಷ ಎರ್ಡಾಗಾನ್ ರವರ ಪಕ್ಷ ವಾದ ಎಕೆಪಿಯ ಮೈತ್ರಿಕೂಟವು ಈ ಸ್ಥಳೀಯ ಚುನಾವಣೆಗಳಲ್ಲಿ ಭಾರಿ ಹಿನ್ನಡೆಯನ್ನು ಅನುಭವಿಸಿದೆ. 2001 ರಿಂದ ಸತತ ವಾಗಿ ಗೆದ್ದು ಬಂದಿರುವ ಎರ್ಡಾಗಾನ್ ರವರಿಗೆ ಈ ಚುನಾವಣೆ ಕಹಿಯನ್ನು ಉಂಟು ಮಾಡಿದೆ. ಟರ್ಕಿಯ ರಾಜಧಾನಿ ಇಸ್ತಾನ್ಬುಲ್ ಹಾಗೂ ಇವರು ಮೇಯರ್ ಆಗಿದ್ದ ಅಂಕಾರ ನಗರಗಳ ಮೇಯರ್ ಸ್ಥಾನಗಳನ್ನು ಕಳೆದುಕೊಂಡು ಎಕೆಪಿ ಮೈತ್ರಿಕೂಟಕ್ಕೆ ತೀವ್ರ ಮುಖಭಂಗ ಆಗಿದೆ. ಆಳುವ ಎಕೆಪಿ ಮತ್ತು ಎಂ.ಎಚ್.ಪಿ. ಪಕ್ಷಗಳು ಮೈತ್ರಿಕೂಟ ರಚಿಸಿಕೊಂಡಿದ್ದವು. ಅದೇ ರೀತಿ ವಿರೋಧ ಪಕ್ಷಗಳಾದ ಸಿಎಚ್.ಪಿ ಮತ್ತು ಐವೈಐ ಮೈತ್ರಿಕೂಟದಲ್ಲಿದ್ದವು. ಕುರ್ದಿಶ್ ಪಕ್ಷ ಎಚ್.ಡಿ.ಪಿ. ಮತ್ತು ಕಮ್ಯುನಿಸ್ಟ್ ಪಕ್ಷ ಗಳು ವಿರೋಧಿ ಕೂಟವನ್ನು ಸೇರದಿದ್ದರೂ ವಿರೋಧ ಕೂಟದ ಜತೆ ಕೆಲವು ಸೀಟು ಹೊಂದಾಣಿಕೆ ಮಾಡಿಕೊಂಡಿದ್ದವು. ಆಡಳಿತ ಮೈತ್ರಿಕೂಟ ಶೇ. 51 ಮತಗಳಿಸಿ ಹೆಚ್ಚಿನ ಪ್ರಾಂತೀಯ ಮತ್ತು ಮುನಿಸಿಪಲ್ ಮೇಯರ್ ಸ್ಥಾನ ಗಳಿಸಿದ್ದರೂ ಅದರ ಮತಗಳಿಕೆ ಮತ್ತು ಸೀಟು ಗಳಿಕೆ ಕಡಿಮೆಯಾಗಿದೆ. ವಿರೋಧ ಪಕ್ಷಗಳು ಹಲವು ಮಹಾನಗರಗಳಲ್ಲಿ ಗೆಲ್ಲುವ ಮೂಲಕ ಆಳುವ ಎಕೆಪಿ ಯ ಬಲದ ಕ್ರೋಢೀಕರಣಕ್ಕೆ ಕಡಿವಾಣ ಹಾಕಿದೆ. ಮೂರನೇ ಅತಿ ದೊಡ್ಡ ಮಹಾನಗರ ಇಸ್ಮೀರ್ ನಲ್ಲಿ ಶೇ. 52 ಮತ ಪಡೆದಿದೆ. ಸರಕಾರ ವಜಾ ಮಾಡಿದ್ದ ಕುರ್ದಿಶ್ ಬಹುಸಂಖ್ಯಾತರಾಗಿರುವ ದಕ್ಷಿಣ–ಪೂರ್ವ ಟರ್ಕಿಯ ಮುನಿಸಿಪಾಲಿಟಿಗಳನ್ನು ಕುರ್ದಿಶ್ ಪಕ್ಷ ಎಚ್.ಡಿ.ಪಿ. ಪುನಃ ಗೆದ್ದಿದ್ದು ಕುರ್ದಿಶ್ ಈ ವಿಜಯದ ಸಂಭ್ರಮಾಚರಣೆ ನಡೆಸಿದರು.

30 ಮಹಾನಗರಗಳಲ್ಲಿ ಹಾಗೂ 1,318 ಜಿಲ್ಲಾ ಮುನ್ಸಿಪಲ್ ಮೇಯರುಗಳ, 1251 ಪ್ರಾಂತೀಯ ಕೌನ್ಸಿಲರುಗಳ, 20,500 ಮುನಿಸಿಪಲ್ ಕೌನ್ಸಿಲರುಗಳ ಸ್ಥಾನಗಳಿಗೆ ಚುನಾವಣೆ ನಡೆದಿತ್ತು. 30 ಮಹಾನಗರಗಳಲ್ಲಿ ಎಕೆಪಿ 16 ಮೇಯರ್ ಗಳನ್ನು, ಸಿ.ಹೆಚ್.ಪಿ ಮೈತ್ರಿಕೂಟವು 11 ಮೇಯರ್ ಸ್ಥಾನ ಗಳನ್ನು ಹೆಚ್.ಡಿ.ಪಿ 2, ಮತ್ತು ಟಿಕೆಪಿ 1 ಸ್ಥಾನವನ್ನು ಪಡೆದಿದ್ದರೂ, ಎರ್ಡಾಗಾನ್ ಗೆ ಇದು ಹಿನ್ನಡೆ ಎಂದೇ ರಾಜಕೀಯ ವಕ್ತಾರರ ಅಭಿಪ್ರಾಯವಾಗಿದೆ. ವಿರೋಧಿ ಕೂಟ 6 ಸ್ಥಾನಗಳಿಂದ 11 ಕ್ಕೆ ತನ್ನ ಬಲ ಹೆಚ್ಚಿಸಿಕೊಂಡಿದೆ ಎಂಬುದು ಗಮನಾರ್ಹ. 2017ರಲ್ಲಿ ಒಂದು ಹೊಸ ಸಂವಿಧಾನದ ಪ್ರತಿಷ್ಠಾಪನೆ ರಚನೆಯ ನಂತರ ನಡೆದ ಮೊದಲ ಸ್ಥಳೀಯ ಚುನಾವಣೆ ಇದಾಗಿತ್ತು. ಮುಂದಿನ 2023ರ ಅಧ್ಯಕ್ಷೀಯ ಚುನಾವಣೆಗೆ ಇದು ದಿಕ್ಸೂಚಿ ಯಾಗ ಬಹುದು ಎಂಬ ಅಭಿಪ್ರಾಯ ಮೂಡಿಬಂದಿದೆ ಎನ್ನಲಾಗಿದೆ. ಎರ್ಡಾಗಾನ್ ಈ ಸ್ಥಳೀಯ ಚುನಾವಣೆಗಳನ್ನು ಪ್ರತಿಷ್ಠೆಯ ವಿಷಯವಾಗಿಸಿದ್ದು ವ್ಯಾಪಕವಾಗಿ ಪ್ರಚಾರ ಕಾರ್ಯದಲ್ಲಿ ಇಳಿದಿದ್ದರು. ಆದ್ದರಿಂದ, ಈ ಫಲಿತಾಂಶಗಳು ಎರ್ಡಾಗಾನ್ ರ ನಿದ್ರೆಯನ್ನು ಕೆಡಿಸಿದೆ ಎಂದರೆ ತಪ್ಪಾಗಲಾರದು.

ಕಳೆದ ವರ್ಷದಿಂದ ಟರ್ಕಿಶ್ ನಾಣ್ಯ ಲಿರಾ ಶೇ. 30 ರಷ್ಟು ಅಪಮೌಲ್ಯಗೊಂಡಿರುವುದು, ಶೇ. 20 ರಷ್ಟು ಹಣದುಬ್ಬರ, ಮತ್ತು ಹೆಚ್ಚುತ್ತಿರುವ ನಿರುದ್ಯೋಗಗಳಿಂದಾಗಿ ಎಕೆಪಿ ಯ ಮತ್ತು ಅಧ್ಯಕ್ಷ ಎರ್ಡೋಗನ್ ಅವರ ಪ್ರತಿಷ್ಠೆ ಕುಗ್ಗುತ್ತಿದ್ದು ಇದು ಸ್ಥಳೀಯ ಚುನಾವಣೆಗಳಲ್ಲಿ ಪ್ರತಿಬಿಂಬಿತವಾಗಿದೆ ಎಂದು ಹೇಳಲಾಗಿದೆ.



ಚಿಲಿ : ಪೆನ್ಶನ್ ವ್ಯವಸ್ಥೆ ಬದಲಾಯಿಸಲು ಹೋರಾಟ



ಚಿಲಿ ದೇಶದಾದ್ಯಂತ ಸಾವಿರಾರು ಜನರು ಪೆನ್ಶನ್ ವ್ಯವಸ್ಥೆ ಬದಲಾಗಬೇಕೆಂದು ಭಾರೀ ಮೆರವಣಿಗೆಗಳನ್ನು ಮಾರ್ಚ್ 31ರಂದು ನಡೆಸಿದರು. ಇದನ್ನು “No +AFP” ಎಂಬ ದೇಶವ್ಯಾಪಿ ವೇದಿಕೆ ಸಂಘಟಿಸಿತ್ತು. ಪೆನ್ಶನ್ ವ್ಯವಸ್ಥೆಯನ್ನು 6 ಖಾಸಗಿ ಕಂಪನಿಗಳು ನಡೆಸುವ ಪದ್ಧತಿ ಕೊನೆಗಾಣಿಸಿ ‘ಸೌಹಾರ್ದತೆ’ಯ ಆಧಾರದ ಮೇಲೆ ನಡೆಸುವ ಹೊಸ ಪದ್ಧತಿ ಸ್ಥಾಪಿಸಬೇಕೆಂದು ಈ ಮೆರವಣಿಗೆಗಳಲ್ಲಿ ಒತ್ತಾಯಿಸಲಾಯಿತು. ಈಗಿರುವ ಪೆನ್ಶನ್ ವ್ಯವಸ್ಥೆ ಅದರ ಉದ್ದೇಶ ಪೂರೈಸುತ್ತಿಲ್ಲ. ಈಗಿನ ವ್ಯವಸ್ಥೆಯ ಪೂರ್ಣ ಭಾರ ದುಡಿಮೆಗಾರನ ಮೇಲೆ ಬೀಳುತ್ತದೆ. ಅದರ ಬದಲು ಕಾರ್ಮಿಕ–ಮಾಲಿಕ–ಸರಕಾರಗಳು ಇದರ ಭಾರ ಹೊರುವ ‘ಸೌಹಾರ್ದತೆ’ಯ ಆಧಾರದ ಪೆನ್ಶನ್ ವ್ಯವಸ್ಥೆಯನ್ನು ತರಬೇಕು. ಇದಕ್ಕಾಗಿ ಒಂದು ಮಾದರಿ ಕಾನೂನಿನ ಕರಡನ್ನು ರಚಿಸಿದ್ದು ಅದನ್ನು ಎಲ್ಲಾ ಸಂಸದರಿಗೂ ಪರಿಣತರಿಗೂ ಕೊಡಲಾಗಿದ್ದು ಜನತೆಯ ಮಧ್ಯೆ ಪ್ರಚಾರ ಮಾಡಲಾಗಿತ್ತು.

ಈಗಿನ ವ್ಯವಸ್ಥೆಯನ್ನು 1980ರಲ್ಲಿ ಸರ್ವಾಧಿಕಾರಿ ಪಿನೊಶೆ ಕಾಲದಲ್ಲಿ ಜಾರಿಗೆ ತರಲಾಗಿದ್ದು ಅದು ಪೂರ್ಣವಾಗಿ ಕಾರ್ಮಿಕರ ಒಟ್ಟು ವೇತನದ ಶೇ. 10ನ್ನು ಬಲವಂತವಾಗಿ ಉಳಿತಾಯ ಮಾಡುವುದರ ಮೇಲೆ ಆಧಾರಿತವಾಗಿದೆ. ಮಾಲಕರ ಅಥವಾ ಸರಕಾರದ ಯಾವುದೇ ಕೊಡುಗೆ ಇರಲಿಲ್ಲ. ಕಾರ್ಮಿಕರ ಉಳಿತಾಯದ ಈ ನಿಧಿಯನ್ನು ಆರು ಖಾಸಗಿ ಕಂಪನಿಗಳಲ್ಲಿ ಒಂದರಲ್ಲಿ ಇಡುವುದು ಕಡ್ಡಾಯವಾಗಿತ್ತು. ಈ ಆರು ಕಂಪನಿಗಳು ಅವುಗಳ ಹೂಡಿಕೆಯ ಚಾಕಚಕ್ಯತೆ, ಮತ್ತು ಅವು ಕೊಡುವ ಕಮಿಶನ್ ನಿರ್ವಹಣೆ ವೆಚ್ಚದ ಮೇಲೆ ಕಾರ್ಮಿಕರ ಉಳಿತಾಯಕ್ಕೆ ಪೈಪೋಟಿ ನಡೆಸಬೇಕು. ಈ ಕಂಪನಿಗಳು ಶೇರು ಮಾರುಕಟ್ಟೆಯಲ್ಲಿ ಈ ನಿಧಿಯ ಹೂಡಿಕೆ ಮಾಡಿ ಅದರಿಂದ ಬಂದ ಹಣವನ್ನು ಪೆನ್ಶನ್ ಆಗಿ ಕೊಡುವ ವ್ಯವಸ್ಥೆ ಇತ್ತು. ಇದು ನಿಗದಿತ ಮೊತ್ತವಲ್ಲ. ಈ ಕಂಪನಿಗಳು ಕೊಡುವ ಸರಾಸರಿ ಮಾಸಿಕ ಪೆನ್ಶನ್ 236 ಡಾಲರುಗಳಷ್ಟು ಇತ್ತು. ಚಿಲಿಯಲ್ಲಿ ಮಾಸಿಕ ಕನಿಷ್ಠ ವೇತನ 456 ಡಾಲರು ಇದೆ. ಈ ರೀತಿ ಪೆನ್ಶನ್ ಬಹಳ ಕಡಿಮೆ ಇದ್ದು ನಿವೃತ್ತರು ಘನತೆಯಿಂದ ಬಾಳುವಂತಿಲ್ಲ. ಆದ್ದರಿಂದ ಇದನ್ನು ಕೂಡಲೇ ಬದಲಿಸಬೇಕೆಂಬುದು “No +AFP” ವೇದಿಕೆಯ ಒತ್ತಾಯವಾಗಿತ್ತು. ಚಿಲಿಯ ಸರ್ವಾಧಿಕಾರಿ ಯುಗದಲ್ಲಿ ಸ್ಥಾಪಿತವಾದ ಈ ವ್ಯವಸ್ಥೆ ಜಗತ್ತಿನ ಅತ್ಯಂತ ಖಾಸಗೀಕೃತ ಪೆನ್ಶನ್ ವ್ಯವಸ್ಥೆಯಾಗಿತ್ತು.

ಇಬ್ಬರು ನೊಬೆಲ್ ಪ್ರಶಸ್ತಿ ವಿಜೇತ ಅರ್ಥಶಾಸ್ತ್ರಜ್ಞರೂ ಚಿಲಿಯ ಪೆನ್ಶನ್ ವ್ಯವಸ್ಥೆಯನ್ನು ಅತ್ಯಂತ ಕ್ರೂರ ಮತ್ತು ಖಾಸಗಿ ಕಂಪನಿಗಳಿಗೆ ಮಾತ್ರ ಪ್ರಯೋಜನಕಾರಿಯಾದ ವ್ಯವಸ್ಥೆ ಎಂದು ಟೀಕಿಸಿದ್ದಾರೆ. ಸದ್ಯ, ಈ ವ್ಯವಸ್ಥೆಯನ್ನು ಅಮೆರಿಕದಲ್ಲಿ ಜಾರಿಗೆ ತರಲಾಗಿಲ್ಲ ಎಂದು ಉದ್ಗರಿಸಿದ್ದಾರೆ. ●

ಅಭಿವ್ಯಕ್ತಿ ನಿಯಂತ್ರಿಸುವ ಹೊಸ ‘ದೊಡ್ಡಣ್ಣ’

ಕೇಳಿಸಿದ್ದು

ಕಾನೂನು, ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರ ಜ್ಞಾನ ಖಾತೆಯ ಸಚಿವರಾದ ರವಿಶಂಕರ್ ಪ್ರಸಾದ್ ಅವರಂತೂ ಕಾಂಗ್ರೆಸ್‌ಗೆ ಸೇರಿದ 687 ಖಾತೆಗಳು ರದ್ದಾಗಿವೆ ಎಂಬುದಕ್ಕೆ ಪ್ರತಿಕ್ರಿಯಿಸಿದರು. ಕಾಂಗ್ರೆಸ್‌ನ ಐ.ಟಿ. ಸೆಲ್ ಸುಳ್ಳು ಸುದ್ದಿ ಹರಡುತ್ತಿದೆ ಎಂಬ ಧ್ವನಿಯಲ್ಲಿ ಅವರ ಪ್ರತಿಕ್ರಿಯೆ ಇತ್ತು. ಆದರೆ, ಅವರು ಬಿಜೆಪಿಯ ಐ.ಟಿ. ಸೆಲ್‌ನೊಂದಿಗೆ ನಿಕಟ ಸಂಬಂಧವಿರುವ, ಪ್ರಧಾನಿ ನರೇಂದ್ರ ಮೋದಿಯವರ ‘ನಮೋ ಆಪ್’ ಅನ್ನು ರೂಪಿಸಿರುವ ‘ಸಿಲ್ವರ್ ಟಚ್’ಗೆ ಸೇರಿದ್ದ ಫೇಸ್‌ಬುಕ್ ಮತ್ತು ಇನ್‌ಸ್ಟಾಗ್ರಾಂ ಖಾತೆಗಳು ರದ್ದಾಗಿರುವ ಬಗ್ಗೆ ಮಾತನಾಡಲೇ ಇಲ್ಲ. ..

ಆದರೆ ಫೇಸ್‌ಬುಕ್‌ನ ಕಾರ್ಯಾಚರಣೆಯಲ್ಲಿ ಹೆಚ್ಚು ನಷ್ಟವನ್ನು ಅನುಭವಿಸಿದ್ದು ಬಿಜೆಪಿಯೇ. ಈ ವಿಷಯವನ್ನು ಗುರುತಿಸುವಲ್ಲಿ ಸೋಲುವುದರ ಮೂಲಕ ಬಹುತೇಕ ಮುಖ್ಯವಾಹಿನಿಯ ಮಾಧ್ಯಮಗಳ ಮೂರ್ಖತೆ ಅನಾವರಣಗೊಂಡಿತು. ‘ಸಿಲ್ವರ್ ಟಚ್’ಗೆ ಸೇರಿದ ಫೇಸ್‌ಬುಕ್ ಪುಟವನ್ನು ಅನುಸರಿಸುತ್ತಿದ್ದವರ ಸಂಖ್ಯೆ 26 ಲಕ್ಷ. ಅದು ನಿರ್ವಹಿಸುತ್ತಿದ್ದ ಗುಂಪಿನಲ್ಲಿದ್ದ ಖಾತೆಗಳ ಸಂಖ್ಯೆ 15 ಸಾವಿರ, ಇನ್‌ಸ್ಟಾಗ್ರಾಂ ಖಾತೆಯನ್ನು ಅನುಸರಿಸುತ್ತಿದ್ದವರ ಸಂಖ್ಯೆ 30 ಸಾವಿರ. ಇದೇ ವೇಳೆ ಕಾಂಗ್ರೆಸ್ ಐ.ಟಿ. ಸೆಲ್‌ನೊಂದಿಗೆ ಸಂಪರ್ಕವಿದ್ದ ಪುಟಗಳನ್ನು ಅನುಸರಿಸುತ್ತಿದ್ದವರ ಒಟ್ಟು ಸಂಖ್ಯೆ ಎರಡು ಲಕ್ಷ. ಇದರ ಆಚೆಗೆ ಸುಮಾರು ಬಿಜೆಪಿಯನ್ನು ಬೆಂಬಲಿಸುವ 200 ಫೇಸ್‌ಬುಕ್ ಪುಟಗಳು ರದ್ದಾಗಿರುವುದರ ಕುರಿತು ‘ದ ಪ್ರಿಂಟ್’ ಜಾಲತಾಣ ವರದಿ ಮಾಡಿದೆ. ಇದರಿಂದ ಬಿಜೆಪಿ ಕಳೆದುಕೊಂಡ ‘ಅಭಿಮಾನಿ’ಗಳ ಸಂಖ್ಯೆ 20 ಕೋಟಿಯಂತೆ. .. ..

ನೆಥಾನಿಯಲ್ ಗ್ಲೆಷರ್ ಅವರ ಬರಹದಲ್ಲೇ ಒಂದು ರಾಜಕಾರಣವಿದೆ. ಕಾಂಗ್ರೆಸ್ ಐ.ಟಿ. ಸೆಲ್‌ಗೆ ಸೇರಿದ್ದು ಎಂದು ಸ್ಪಷ್ಟವಾಗಿ ಹೇಳುವ ಅವರು ಬಿಜೆಪಿಯ ಐ.ಟಿ. ಸೆಲ್ ಅನ್ನು ಪ್ರಸ್ತಾಪಿಸುವುದೇ ಇಲ್ಲ. ಅದರ ಬದಲಿಗೆ ‘ಸಿಲ್ವರ್ ಟಚ್’ ಎಂಬ ಸಂಸ್ಥೆಯ ಹೆಸರನ್ನಷ್ಟೇ ಪ್ರಸ್ತಾಪಿಸುತ್ತಾರೆ. ಈ ‘ಸಿಲ್ವರ್ ಟಚ್’ ಗುಜರಾತ್ ರಾಜ್ಯ ಸರ್ಕಾರಕ್ಕೆ ಐ.ಟಿ. ಸೇವೆಗಳನ್ನು ಒದಗಿಸುವ ಸಂಸ್ಥೆ. ಅಷ್ಟೇ ಅಲ್ಲ, ಇದು ‘ನಮೋ ಆಪ್’ ಬಳಸುವ ಎಲ್ಲರೂ ಕಡ್ಡಾಯವಾಗಿ ಹಿಂಬಾಲಿಸಬೇಕಾಗಿ ಬರುವ ‘ದ ಇಂಡಿಯಾ ಐ’ ಎಂಬ ಜಾಲತಾಣವನ್ನು ನಡೆಸುತ್ತಿರುವ ಸಂಸ್ಥೆ. ಇದೇ ಹೆಸರಿನ ಫೇಸ್‌ಬುಕ್ ಪುಟವೂ ರದ್ದಾಗಿದೆ. ಈ ಸಂಸ್ಥೆ ಬಿಜೆಪಿಯ ಐ.ಟಿ. ಸೆಲ್‌ನೊಂದಿಗೆ ಇರುವ ಸಂಬಂಧವನ್ನು ‘ಅಲ್ಟ್ ನ್ಯೂಸ್’ನ ಪ್ರತೀಕ್ ಸಿನ್ಹಾ ಬಹಳ ಹಿಂದೆಯೇ ಬಯಲು ಮಾಡಿದ್ದಾರೆ.

– ಎನ್.ಎ.ಎಮ್ ಇಸ್ಮಾಯಿಲ್, ‘ಈ–ಹೊತ್ತು’ ಪ್ರಜಾವಾಣಿ ಏಪ್ರಿಲ್ 4

JANASHAKTHI KANNADA VARA PATRIKE APRIL 8-14, 2019 Price: Rs. 10/- Date of Publication: 5 APRIL 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283





ಹಾಸನ: ಸಿಪಿಐ(ಎಂ) ರಾಜಕೀಯ ಸಮಾವೇಶ

ಈ ಬಾರಿಯ ಲೋಕಸಭಾ ಚುನಾವಣೆಯು ಅತ್ಯಂತ ಮಹತ್ವದ್ದಾಗಿದ್ದು ಭಾರತ ದೇಶವನ್ನು ಸುಳ್ಳುಕೋರರಿಂದ, ಕೋಮುವಾದಿಗಳಿಂದ ಕಾಪಾಡಬೇಕಿದ್ದು ಮೋದಿಯವರು ಮತ್ತೆ ಅಧಿಕಾರಕ್ಕೆ ಬಂದರೆ ಅಪಾಯ ಕಟ್ಟಿಟ್ಟ ಬುತ್ತಿ ಎಂದು ಸಿಪಿಐಎಂ ರಾಜ್ಯ ಕಾರ್ಯದರ್ಶಿಯಾದ ಯು.ಬಸವರಾಜು ಅಭಿಪ್ರಾಯಪಟ್ಟರು.

ಹಾಸನ ನಗರದಲ್ಲಿ ನಡೆದ ಪಕ್ಷದ ಕಾರ್ಯಕರ್ತರ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಾ ಭಾರತ ದೇಶವು ಜಾತ್ಯಾತೀತ, ಸಮಾಜವಾದಿ ಆಶಯಗಳನ್ನು ಹೊಂದಿರುವ ಸಂವಿಧಾನವನ್ನು ಅಳವಡಿಸಿಕೊಂಡಿದ್ದು ಇಂದು ಕೋಮುವಾದಿ ಸರ್ಕಾರದಿಂದ ಅಪಾಯಕ್ಕೆ ಸಿಲುಕಿದೆ ಎಂದರು. ಕಳೆದ ಚುನಾವಣೆಯಲ್ಲಿ ಮೋದಿಯವರು ಕೊಟ್ಟಿದ್ದ ಭರವಸೆಗಳು ಯಾವುದನ್ನೂ ಈಡೇರಿಸಿಲ್ಲ. ಬಡವರಿಗೆ ಅಚ್ಚೇದಿನ್ ಬರಲಿಲ್ಲ. ಬದಲಿಗೆ ದೊಡ್ಡ ದೊಡ್ಡ ಬಂಡವಾಳದಾರರಿಗೆ, ಕಾರ್ಪೋರೇಟ್ ಸಂಸ್ಥೆಗಳಿಗೆ ಅಚ್ಚೇ ದಿನ್ ಬಂದಿದೆ. ವಿದೇಶದಲ್ಲಿರುವ ಕಪ್ಪುಹಣವನ್ನು ಅಧಿಕಾರಕ್ಕೆ ಬಂದ ನೂರು ದಿನಗಳಲ್ಲಿ ತಂದು ಎಲ್ಲರ ಖಾತೆಗೂ ತಲಾ 15 ಲಕ್ಷ ರೂಗಳನ್ನು ಹಾಕುವುದಾಗಿ ಹೇಳಿ ಇಂದಿಗೆ ಐದು ವರ್ಷಗಳೇ ಕಳೆದಿವೆ. ಆದರೆ ಒಂದು ನಯಾ ಪೈಸೆಯನ್ನೂ ಸಹ ತರಲಿಲ್ಲ. ನೋಟು ಅಮಾನ್ಯೀಕರಣದ ಮೂಲಕ ಭಯೋತ್ಪಾದನೆಯನ್ನು ಬಗ್ಗು ಬಡಿಯುವುದಾಗಿ ಹೇಳಿದ್ದರು. ಆದರೆ ಇದರಿಂದ ಯಾವ ಲಾಭವೂ ಆಗಲಿಲ್ಲ. ಬದಲಿಗೆ ಬ್ಯಾಂಕ್ ಗಳ ಮುಂದೆ ಕ್ಯೂ ನಿಂತು ಅಮಾಯಕರು ಪ್ರಾಣ ಬಿಟ್ಟರು. ಮೋದಿಯವರು 26 ಲಕ್ಷ ಕೋಟಿಯ ಬಜೆಟ್ ಮಂಡನೆ ಮಾಡಿದರು. ಆದರೆ ಕಪ್ಪುಹಣದ ಮೊತ್ತವೇ 45 ಲಕ್ಷ ಕೋಟಿ ಇದೆ ಎಂದು ವರದಿ ಹೇಳುತ್ತದೆ. ಅಂದರೆ ದೇಶದ ಬಜೆಟ್ ಹಣಕ್ಕಿಂತ ಕಪ್ಪು ಹಣವೇ ದುಪ್ಪಟ್ಟಿದೆಯಾದರೂ ಮೋದಿ ಈ 45 ಲಕ್ಷ ಕೋಟಿಯ ಮಾಲೀಕರ ಜೊತೆ ನಿಂತಿದ್ದಾರೆ ಆ ಕಾರಣಕ್ಕಾಗಿ ದೇಶದ 130 ಕೋಟಿ ಜನರಿಗೆ ಸುಳ್ಳು ಹೇಳಿ ಯಾಮಾರಿಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರೈತರ ಆತ್ಮಹತ್ಯೆಯನ್ನು ತಡೆಯುವ ಪಣ ತೊಟ್ಟಿದ್ದೇನೆಂದು ಹೇಳಿಕೊಂಡಿದ್ದರು. ಆದರೆ ಪ್ರತೀ 26 ನಿಮಿಷಕ್ಕೊಬ್ಬ ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆಂದು ಸರ್ಕಾರದ ಅಂಕಿ ಅಂಶವೇ ಹೇಳುತ್ತಿದೆ. ಒಬ್ಬ ಸಾಮಾನ್ಯ ಮನುಷ್ಯ ತಾನು ಬದುಕಲು ದಿನನಿತ್ಯದ ಖರ್ಚಿಗೆ ಕನಿಷ್ಟ 150 ರೂಗಳಾದರೂ ಬೇಕಿದೆ ನಾವು ಕಾರ್ಮಿಕರಿಗೆ ಕೇಳುತ್ತಿರುವ ಕನಿಷ್ಟ ಕೂಲಿ ಬೇಡಿಕೆಯು ತಿಂಗಳಿಗೆ 18,000 ರೂಪಾಯಿಯಾದರೂ ಕಡಿಮೆಯೇ ಆಗಿದೆ. ಜಿಎಸ್‌ಟಿ ಹೆಸರಿನಲ್ಲಿ ಅಗತ್ಯ ವಸ್ತುಗಳ ಬೆಲೆಗಳನ್ನು ಹೆಚ್ಚಿಸಿ ಹಗಲು ಲೂಟಿ ಮಾಡುತ್ತಿರುವ ಮೋದಿಯ ದುರಾಡಳಿತದ ವಿರುದ್ಧ ಜನ ಧ್ವನಿ ಎತ್ತಿದ್ದಾರೆ. ದೇಶದಲ್ಲಿ ನಿರುದ್ಯೋಗದ ಸಂಖ್ಯೆ ಏರುತ್ತಲೇ ಇದೆ ಉದ್ಯೋಗಗಳನ್ನು ಸೃಷ್ಟಿಸದೆ ಯುವಕರೆಲ್ಲಾ ಪಕೋಡ ಮಾರಲು ಕರೆ ಕೊಡುವ ಮೋದಿ ಪ್ರಧಾನಿಯಾಗಲು ಅರ್ಹರಲ್ಲವೆಂದರು. ದೇಶದ ಶ್ರೀಮಂತರ ಒಟ್ಟು ಸಾಲ 5 ಲಕ್ಷ ಕೋಟಿಯಾಗಿದ್ದು ಈ ಸಾಲವನ್ನು ಮನ್ನಾ ಮಾಡಲಾಯಿತು ಆದರೆ ರೈತರ, ಬಡವರ ಸಾಲ ಮನ್ನಾ ಆಗಲೇ ಇಲ್ಲ. ದೇಶದ ಬ್ಯಾಂಕ್ ಗಳು ದಿವಾಳಿ ಅಂಚಿಗೆ ಬಂದು ನಿಂತಿವೆ, ವಿಲೀನದ ಹೆಸರಿನಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯನ್ನು ಖಾಸಗೀಕರಣ ಮಾಡಲಾಗುತ್ತಿದೆ, ದೇಶದ ಸರ್ಕಾರಿ ಸಂಸ್ಥೆಗಳಾದ ಎಲ್‌ಐಸಿ, ಬಿಎಸ್‌ಎನ್‌ಎಲ್, ಏರ್‌ಪೋರ್ಟ್, ಎಚ್‌ಎಎಲ್ ಖಾಸಗೀರಣ ಮಾಡಲಾಗುತ್ತಿದೆ. ಸುಪ್ರೀಂಕೋರ್ಟ್, ಸಿಬಿಐ, ಆರ್‌ಬಿಐ ಇವುಗಳನ್ನು ತಮ್ಮ ರಾಜಕೀಯ ನಿಲುವಿಗೆ ತಕ್ಕಂತೆ ಬದಲಾಯಿಸಿಕೊಂಡಿದ್ದಾರೆ ಈ ಎಲ್ಲಾ ದುರಾಡಳಿತವನ್ನು ಪ್ರಶ್ನೆ ಮಾಡಿದರೆ ದೇಶದ್ರೋಹದ ಪಟ್ಟ ಕಟ್ಟಿ ವಿಚಾರವಾದಿಗಳ ಮೇಲೂ ದಾಳಿಯಾಗುತ್ತಿವೆ, ಈ ಭಾರಿ ಬಿಜೆಪಿಯವರು ರಾಮಮಂದಿರದ ಹೆಸರಿನಲ್ಲಿ ಮತ ಕೇಳಲು ಆರಂಭಿಸಿದ್ದಾರೆ. ಜೊತೆಗೆ ಕೋಮುವಾದವನ್ನು ಎಲ್ಲೆಡೆ ಹರಡುತ್ತಿದ್ದಾರೆ.

ಹಾಗಾಗಿ ಈ ಭಾರಿ ಜಾಗೃತ ಮತದಾರರು ಇಂತಹ ದುರಾಡಳಿತದ ವಿರುದ್ಧ ಮತ ಚಲಾಯಿಸಿ ದೇಶವನ್ನು ಕೋಮುವಾದಿಗಳಿಂದ ರಕ್ಷಿಸಬೇಕು ಎಂದು ಮನವಿ ಮಾಡಿದರು. ಈ ನಿಟ್ಟಿನಲ್ಲಿ ಸಿಪಿಐಎಂ ಪಕ್ಷ ರಾಷ್ಟ್ರವ್ಯಾಪಿಯಾಗಿ ಜನಚಳುವಳಿಯನ್ನು ಸಂಘಟಿಸಿ ಈ ಭಾರಿ ಕೋಮುವಾದಿ ಬಿಜೆಪಿ ಪಕ್ಷವನ್ನು ಸೋಲಿಸಲು ಕರೆ ನೀಡಿದೆ ಎಂದರು.

ಸಭೆಯಲ್ಲಿ ಮಾತನಾಡಿದ ಪಕ್ಷದ ಜಿಲ್ಲಾ ಕಾರ್ಯದರ್ಶಿ ಧರ್ಮೇಶ್ ದುಡಿಯುವ ಜನರ ಹಕ್ಕುಗಳನ್ನು ಕಳೆದ ಐದು ವರ್ಷಗಳಲ್ಲಿ ಮೋದಿ ಸರ್ಕಾರ ನಿರಂತರವಾಗಿ ದಮನಮಾಡಿಕೊಂಡು ಬಂದಿದೆ. ಮಾತ್ರವಲ್ಲದೆ ಪ್ರಜ್ಞಾಪೂರ್ವಕವಾಗಿ ದಲಿತ, ಮಹಿಳಾ, ಅಲ್ಪಸಂಖ್ಯಾತ, ರೈತ, ಕಾರ್ಮಿಕರ ವಿರೋಧಿ ನೀತಿಗಳನ್ನು ಅನುಸರಿಸಿದೆ. ಹಾಗಾಗಿ ಇಂತಹ ಜನವಿರೋಧಿ ಸರ್ಕಾರವನ್ನು ಸೋಲಿಸುವುದು ನಮ್ಮೆಲ್ಲರ ಆಧ್ಯ ಕರ್ತವ್ಯವಾಗಿದೆ ಎಂದರು. ಜಿಲ್ಲೆಯಲ್ಲಿ ಕೆಲ ದಲಿತ, ರೈತ ಮತ್ತು ಪ್ರಗತಿಪರ ಮುಖಂಡರು ಬಿಜೆಪಿ ಪಕ್ಷದ ಅಭ್ಯರ್ಥಿಯನ್ನು ಬೆಂಬಲಿಸುವ ಮೂಲಕ ದಲಿತ ಮತ್ತು ರೈತ ಸಮುದಾಯಕ್ಕೆ ದೊಡ್ಡ ಅನ್ಯಾಯವನ್ನು ಮಾಡುತ್ತಿದ್ದಾರೆ. ಎಂತಹ ಸಂದರ್ಭದಲ್ಲೂ ಪ್ರಜ್ಞಾವಂತರು ಬಿಜೆಪಿಗೆ ಮತ ಚಲಾಯಿಸುವ ತಪ್ಪನ್ನು ಮಾಡಬಾರದು ಎಂದು ಹೇಳಿದರು. ಇದಕ್ಕಾಗಿ ಜಿಲ್ಲೆಯಾದ್ಯಂತ ಸಿಪಿಐಎಂ ಬಿಜೆಪಿಯ ವಿರುದ್ದ ವ್ಯಾಪಕ ಪ್ರಚಾರವನ್ನು ನಡೆಸಲಿದೆ ಎಂದರು.

ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಸಂಘಟನಾ ಸಮಿತಿ ಸದಸ್ಯರಾದ ಎಚ್,ಆರ್.ನವೀನ್‌ಕುಮಾರ್ ವಹಿಸಿದ್ದರು, ಎಂ.ಜಿ.ಪೃಥ್ವಿ ಸ್ವಾಗತಿಸಿ ನಿರೂಪಿಸಿದರು, ಮುಖಂಡರಾದ ಜಿ.ಪಿ.ಸತ್ಯನಾರಾಯಣ, ವಸಂತ್‌ಕುಮಾರ್, ಅರವಿಂದ್ ಇದ್ದರು. ●

* ಚಿಕ್ಕಬಳ್ಳಾಪುರ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ
* ಕೋಮುವಾದಿ, ಮನುವಾದಿ ಶಕ್ತಿಯನ್ನು ಹಿಮ್ಮೆಟಿಸುವುದಕ್ಕಾಗಿ
* ಕೇಂದ್ರದಲ್ಲಿ ಒಂದು ಜಾತ್ಯಾತೀತ ಸರ್ಕಾರವನ್ನು ರಚಿಸುವುದಕ್ಕಾಗಿ



ಚಿಕ್ಕಬಳ್ಳಾಪುರದ ಕ್ಷೇತ್ರದಲ್ಲಿ
ಸಿಪಿಐ(ಎಂ) ಅಭ್ಯಥಿಯನ್ನು ಗೆಲ್ಲಿಸಿ

ಹುಸಿಯಾದ ಮೋದಿ ಭರವಸೆ

'ಕೋಮುವಾದಿ ಬಿಜೆಪಿ ಪಕ್ಷವನ್ನು ಯಾರೂ ಬೆಂಬಲಿಸಬಾರದು' ಎಂದು ಸಿಪಿಎಂ ಜಿಲ್ಲಾ ಘಟಕದ ಕಾರ್ಯದರ್ಶಿ ಆರ್.ಎಸ್.ಬಸವರಾಜ್ ಹೇಳಿದರು.

ಹಗರಿಬೊಮ್ಮನಹಳ್ಳಿಯ ಗಂಗಾವತಿ ವೆಂಕೋಬಣ್ಣನವರ ಧರ್ಮಛತ್ರದ ಬಳಿ ಬುಧವಾರ ಆಯೋಜಿಸಿದ್ದ ಸಿಪಿಎಂ ಪಕ್ಷದ ರಾಜಕೀಯ ಸಭೆಯಲ್ಲಿ ಅವರು ಮಾತನಾಡಿದರು.

'ಕೇವಲ ಬಂಡವಾಳ ಶಾಹಿಗಳ ಪರವಾಗಿರುವ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಬಡವರ ಸಮಸ್ಯೆಗಳನ್ನು ಅರಿಯದಾಗಿದೆ. ಕೇವಲ ಉಳ್ಳವರ ಪರವಾಗಿ ಸರ್ಕಾರ ಕಾರ್ಯನಿರ್ವಹಿಸುತ್ತಿದೆ ಎಂದು ಆರೋಪಿಸಿದರು. ಮೋದಿಯವರಿಗೆ ಬಡವರ ಬಗ್ಗೆ ಕಾಳಜಿ ಇಲ್ಲ' ಎಂದು ಟೀಕಿಸಿದರು.

ಪಕ್ಷದ ತಾಲ್ಲೂಕು ಘಟಕದ ಕಾರ್ಯದರ್ಶಿ ಎಸ್.ಜಗನ್ನಾಥ್ ಮಾತನಾಡಿ, 'ಕಳೆದ ಚುನಾವಣೆ ಸಂದರ್ಭದಲ್ಲಿ ಎಲ್ಲರ ಬ್ಯಾಂಕ್ ಖಾತೆಗಳಿಗೆ ರೂ. 15 ಲಕ್ಷ ಪಾವತಿ ಮಾಡುವುದಾಗಿ ಹೇಳಿದ್ದ ಮೋದಿ ಅವರ ಮಾತು ಹುಸಿಯಾಗಿದೆ, ಅವರು ರೈತರ ಮತ್ತು ಮಧ್ಯಮ ವರ್ಗದವರ ವಿರೋಧಿಯಾಗಿದ್ದಾರೆ' ಎಂದು ಆರೋಪಿಸಿದರು.

ಪಕ್ಷದ ರಾಜ್ಯ ಘಟಕದ ಸದಸ್ಯೆ ಬಿ.ಮಾಳಮ್ಮ, ಇದ್ದರು. ತಾಲ್ಲೂಕಿನ ವಿವಿಧ ಕಡೆಗಳಿಂದ ಆಗಮಿಸಿದ್ದ ನೂರಾರು ಜನ ಕಾರ್ಯಕರ್ತರು ಭಾಗವಹಿಸಿದ್ದರು.



JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**